Under Section 8 of Cotton Transport Act, 1923 (Central Act 5 of 1923).

MADAM SPEAKER.—Papers are laid on the Table.

REVISED BUDGET ESTIMATES FOR 1972-73

Demands for grants—Demands No. 24, 16, 43, 44, 9, 11 and 14

Sri S. M. KRISHNA (Minister for Industries and Commerce).—On the recommendation of the Governor, I beg to move :

> "That a sum not exceeding Rs. 16,00,00,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 24 'Industries'."

MADAM SPEAKER.—Motion moved :

> "That a sum not exceeding Rs. 16,00,00,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No 24 Industries'."

The Demands Nos. 16, 43, 44 are also deemed to have been moved and they are before the House for discussion.

Sri D. K. NAIKAR (Minister for Law and Parliamentary Affairs).—On the recommendation of the Governor, I beg to move :

> "That a sum not exceeding Rs. 66,34,000 inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 9 'Parliament, State/Union Territory Legislature'."

MADAM SPEAKER.—Motion moved ;

> "That a sum not exceeding Rs. 66,34,000 inclusive of the sum granted' on account', be granted to the Government to defray the charges which will come in course of payment during the financial year for the period ending 31st day of March 1973 in respect of Demand No. 9 'Parliament, State/Union Territory Legislature'."

Demand No. 11 is also deemed to have been moved and is before The House for discussion.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮುಂದೆ ಇಟ್ಟಿರುವ ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಹಾಗೂ ರಾಜ್ಯದ ಲೆಜಿಸ್ಲೇಚರ್ ಮತ್ತು ನ್ಯಾಯಾಂಗ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುವ ಕಾಲದಲ್ಲಿ ನಾನು ಲೆಜಿಸ್ಲೇಚರ್ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲೇಜಿಸ್ಲೇಚರ್‌ನ್ನು ಎಕ್ಸಿಕ್ಯೂಟಿವ್‌ನಿಂದ ಹೊರಗೆ ಇಟ್ಟು ತಮಗೆ ಸರ್ವ ಸ್ವಾತಂತ್ರ್ಯವನ್ನೂ ಕೊಡುವುದು ಒಳ್ಳೆಯದು ಎನ್ನುವುದು ನನ್ನ ಭಾವನೆ. ಏಕೆಂದರೆ ಹಲವಾರು ಸಾರಿ ಅಧ್ಯಕ್ಷರು ತಮ್ಮ ಕಾರ್ಯಕಲಾಪ ಮಾಡುವುದರ ಬಗ್ಗೆ ಸಭೆಯ ನಾಯಕರನ್ನು ಈ ಸಭೆಗೆ ಕರೆಯಬೇಕಾದರೆ ಮತ್ತು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ಸರ್ಕಾರದ ಒಂದು ಅಭಿಪ್ರಾಯಕ್ಕೆ ಅನುಗುಣವಾಗಿ ಒಪ್ಪಬೇಕಾಗುತ್ತದೆ. ಈ ಹೊತ್ತು ಲೇಜಿಸ್ಲೇಚರ್ ಇಂಡಿಪೆಂಡೆಂಟಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗತಕ್ಕ ದೃಷ್ಟಿಯಿಂದ ಹೇಳುತ್ತಿದ್ದೇನೆ. ಹಿಂದೆ ಕೂಡ ಈ ಸಭೆಯಲ್ಲಿ ಈ ವಿಷಯ ಚರ್ಚೆಯಾಗಿದೆ. ನನಗೆ ಜ್ಞಾಪಕವಿದ್ದ ಹಾಗೆ 1963–64ರಲ್ಲಿ ಚರ್ಚೆಯಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಬಹುಶಃ ಆಲೋಚನೆ ಮಾಡುತ್ತಾರೆಂದು ಭಾವಿಸುತ್ತೇನೆ.

ಮೊನ್ನೆಯ ದಿನ ಈ ಸಭೆಯ ಕಾರ್ಯಕಲಾಪಗಳಿಗೆ ವೇಳೆಯನ್ನು ಗೊತ್ತು ಮಾಡುವಾಗ, ರಿಪೋರ್ಟರುಗಳು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದೆ ಇರುವುದರಿಂದ, ಎರಡು ಸದನಗಳೂ ಒಟ್ಟಾಗಿ ಕೂಡಿದರೆ, ಹೆಚ್ಚು ಕಾಲ ಕಾರ್ಯಕಲಾಪವನ್ನು ನಡೆಸುವುದಕ್ಕೆ ಕಷ್ಟವಿದೆ ಎಂದು ತಿಳಿಸಿದಿರಿ. ಈ ಹೊತ್ತು ರಿಪೋರ್ಟರುಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಇರತಕ್ಕ ಅಡಚಣೆಗಳಾದರೂ ಏನು ? ಹೆಚ್ಚು ರಿಪೋರ್ಟರುಗಳು ಬೇಕಾದರೆ, ಅವರ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತೊಂದು ವಿಷಯವೇನೆಂದರೆ, ನಮ್ಮ ರಿಪೋರ್ಟರುಗಳಿಗೆ ಕೊಡತಕ್ಕ ಭತ್ಯ ಮತ್ತು ಸಂಬಳ ಸಾರಿಗೆ ಸರಿಯಾದ ರೀತಿಯಲ್ಲಿಲ್ಲವೆಂದು ತಿಳಿದುಕೊಂಡಿದ್ದೇನೆ. ನೆರೆ ರಾಜ್ಯಗಳ ಲೆಜಿಸ್ಲೇಚರುಗಳಲ್ಲಿ ಏನು ಕೊಡುತ್ತಾರೆ, ಆ ಒಂದು ಗ್ರೇಡ್ ಕೊಡುವ ವಿಚಾರವನ್ನು ಸರ್ಕಾರ ಆಲೋಚನೆ ಮಾಡಬೇಕು. ಅಲ್ಲದೆ ನೆರೆ ರಾಜ್ಯಗಳಲ್ಲಿ ತಿಂಗಳಿಗೆ 30 ರೂಪಾಯಿ ಸ್ಪೆಷಲ್ ಅಲೊಯನ್ಸ್ ಎಂದು ಕೊಡುತ್ತ ಇದ್ದಾರೆ ಎಂದು ಕೇಳಿದ್ದೇನೆ. ಅದನ್ನು ಕೂಡ ನಮ್ಮ ರಿಪೋರ್ಟರುಗಳಿಗೆ ಕೊಡತಕ್ಕದ್ದು ಸೂಕ್ತ. ಸಭೆ ರಾತ್ರಿ ಏಳು ಅಥವಾ ಎಂಟು ಗಂಟೆಗಳವರೆಗೂ ಕುಳಿತುಕೊಳ್ಳುವ ಸಂದರ್ಭಗಳು ಇವೆ. ಆ ಕಾಲದಲ್ಲಿ ರಿಪೋರ್ಟರುಗಳು ಇದ್ದೇ ಇರಬೇಕಾಗುತ್ತದೆ. ಈ ಕಾರಣದಿಂದ ಅವರಿಗೆ ಪ್ರತಿ ತಿಂಗಳೂ ವಿಶೇಷ ಭತ್ಯವನ್ನು ಕೊಡುವುದರಿಂದ ಸರ್ಕಾರಕ್ಕೆ ಹೆಚ್ಚು ಹೊರೆಯಾಗುವುದಿಲ್ಲ. ಸರ್ಕಾರ ಇದರ ಕಡೆಗೆ ಗಮನಕೊಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರೂ ಇದರ ಬಗ್ಗೆ ಆಸಕ್ತಿ ವಹಿಸಿ, ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಎಷ್ಟು ಜನ ರಿಪೋರ್ಟರುಗಳ ಅವಶ್ಯಕತೆ ಇದೆ ಅಷ್ಟು ಸಂಖ್ಯೆಯಲ್ಲಿ ರಿಪೋರ್ಟರುಗಳನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಒತ್ತಾಯವನ್ನು ತಮ್ಮ ಮುಂದೆ ಇಡುತ್ತಿದ್ದೇನೆ. ಎರಡೂ ಸದನಗಳು ಸೇರಿದಾಗ ಅತ್ಯಾವಶ್ಯಕವಾಗಿ ಎಷ್ಟು ಜನ ರಿಪೋರ್ಟರುಗಳು ಬೇಕಾಗುತ್ತಾರೆ ಅಷ್ಟು ಸಂಖ್ಯೆಗೆ ಏರಿಸುವುದಕ್ಕೆ ಪ್ರಯತ್ನ ಮಾಡಬೇಕು. ರಿಪೋರ್ಟರುಗಳು ಇಲ್ಲ ಎನ್ನುವ ಕಾರಣದಿಂದ ಒಂದೆರಡು ಗಂಟೆ ಸಭೆ ಹೆಚ್ಚಾಗಿ ಕುಳಿತುಕೊಳ್ಳುವುದಕ್ಕೆ ಕಷ್ಟವಾಗುತ್ತದೆ ಎಂದು ಅಧ್ಯಕ್ಷರು ಹೇಳಿರುವುದರಿಂದ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಇದರ ಕಡೆಗೂ ಗಮನ ಕೊಡಬೇಕೆಂದು ನಾನು ತಮಗೆ ಒತ್ತಾಯ ಮಾಡುತ್ತೇನೆ.

ಕೈಗಾರಿಕೆಗಳ ಬಗ್ಗೆ ನಮ್ಮ ರಾಜ್ಯದ ಆರ್ಥಿಕ ಬೆಳವಣಿಗೆಗೆ ಹೆಚ್ಚು ಉಪಯುಕ್ತವಾಗಬೇಕಾದರೆ, ಆರ್ಥಿಕ ಬೆಳವಣಿಗೆ ಹೆಚ್ಚು ಆಗಬೇಕಾದರೆ ಬಹುಶಃ ಕೈಗಾರಿಕೆ ಹೆಚ್ಚು ಫಲಪ್ರದವಾಗಿ ಬೆಳೆಯತಕ್ಕುದು ಅತ್ಯಾವಶ್ಯಕ. ಈ ಹೊತ್ತು ನಮ್ಮ ರಾಜ್ಯದಲ್ಲಿ ಅಥವಾ ರಾಷ್ಟ್ರದಲ್ಲಿ ಇರತಕ್ಕ ಪರಿಸ್ಥಿತಿಯನ್ನು ಆಲೋಚನೆ ಮಾಡಿದರೆ, ಅವಲೋಕನ ಮಾಡಿದರೆ ಬಹು ಹೆಚ್ಚು ಜನ ಎಂದರೆ 75-80 ಪರ್ಸೆಂಟ್ ಭೂಮಿಯ ಮೇಲೆ ಅವಲಂಬನೆ ಮಾಡಿ ಜೀವನ ಮಾಡತಕ್ಕುದನ್ನು ನಾವು ನೋಡುತ್ತಿದ್ದೇವೆ. ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಭೂ ಸುಧಾರಣೆಯನ್ನು ತಂದರೂ ಸಾಕಾಗುವುದಿಲ್ಲ. ಭೂಮಿಯ ಮೇಲಿನ ಒತ್ತಡವನ್ನು ಕಡಮೆ ಮಾಡಬೇಕಾದರೆ ಕೈಗಾರಿಕಾ ಕ್ಷೇತ್ರ ಹೆಚ್ಚು ಬೆಳೆಯಬೇಕಾಗುತ್ತದೆ. ಅದು ಬೆಳೆಯದಿದ್ದರೆ ಭೂಮಿಯ ಮೇಲಿನ ಒತ್ತಡವನ್ನು ಕಡಮೆ ಮಾಡುವುದಕ್ಕಾಗುವುದಿಲ್ಲ. ಈ ದೇಶದಲ್ಲಿ ನಾವು ರ್ಯಾಪಿಡ್ ಇಂಡಸ್ಟ್ರಿಯಲ್ ಗ್ರೋತ್ ಎನ್ನುವುದರ ಕಡೆಗೆ ಹೆಚ್ಚು ಗಮನವನ್ನು ಕೊಡಬೇಕಾಗುತ್ತದೆ. ನಮ್ಮ ರಾಷ್ಟ್ರದ ಆದಾಯದ ಅವಲೋಕನ ಮಾಡಿದರೆ ವ್ಯವಸಾಯದಿಂದ ಸುಮಾರು 55-56 ಪರ್ಸೆಂಟ್ ವರಮಾನ ಬರುತ್ತದೆ

ಎಂದು ಕೇಳಿದ್ದೇನೆ; ಕೈಗಾರಿಕೆಗಳಿಂದ 14 ಪರ್ಸೆಂಟ್ ವರಮಾನ ಬರುತ್ತದೆಂದು ತಿಳಿದುಕೊಂಡಿದ್ದೇನೆ. ಅದೇ ಪರರಾಷ್ಟ್ರಗಳಲ್ಲಿ 75-80 ಪರ್ಸೆಂಟ್ ನಷ್ಟು ರಾಷ್ಟ್ರದ ಆದಾಯ ಕೈಗಾರಿಕೆಗಳಿಂದಲೇ ಹೆಚ್ಚು ಮಾಡಿಕೊಂಡಿದ್ದಾರೆ ಅಮ ಪರ ರಾಷ್ಟ್ರದ ಆದಾಯಕ್ಕೆ ಹೆಚ್ಚು ಇಂಬುಕೊಟ್ಟಿದೆ ಎಂದು ಪರರಾಷ್ಟ್ರಗಳ ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ.

2-00 P.M.

ನಾವು ಕೈಗಾರಿಕಾ ಕ್ಷೇತ್ರದಲ್ಲಿ ಎಷ್ಟು ಹಿಂದೆ ಬಿದ್ದಿದ್ದೇವೆ ಎಂದು ಈ ಒಂದು ಅಂಕಿ ಅಂಶದಿಂದ ಅರ್ಥವಾಗುತ್ತದೆ. ಕೈಗಾರಿಕೆಯ ಬೆಳವಣಿಗೆಯಲ್ಲಿ ಎಷ್ಟು ಹಿಂದೆ ಹೋಗಿದ್ದೇವೆ-ಎಂದು ಅರ್ಥವಾಗುತ್ತದೆ. ರಾಷ್ಟ್ರದ ಆದಾಯ ಈ ಬಾಬಿನಿಂದ ಕೇವಲ 14 ಪರ್ಸೆಂಟ್ ಇದೆ ಎಂಬುದನ್ನು ನೋಡಿದರೆ, ನಾಗಾಲೋಟದಿಂದ ರಾಷ್ಟ್ರದ ಆದಾಯವನ್ನು ಹೆಚ್ಚು ಮಾಡುವುದರ ಬಗ್ಗೆ ಕೈಗಾರಿಕೆಗಳನ್ನು ರ್ಯಾಪಿಡ್ ಆಗಿ ಬೆಳೆಸಬೇಕು ಎಂಬುದು ಅರ್ಥವಾಗುತ್ತದೆ. ಇದರಿಂದ ಕೇವಲ ರಾಷ್ಟ್ರದ ಇನ್‌ಕಂ ಹೆಚ್ಚು ಆಗುತ್ತದೆ ಎಂಬುದು ಒಂದೇ ಅಲ್ಲ, ಫಾರಿನ್ ಎಕ್ಸ್‌ಚೇಂಜ್ ಕೂಡ ಉಳಿತಾಯವಾಗುತ್ತದೆ. ಜೊತೆಗೆ ನಮ್ಮ ಈ ಒಂದು ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಏನು ಇದೆ ಅದನ್ನು ಸಾಧ್ಯವಾದ ಮಟ್ಟಿಗೆ ಉತ್ತರ ಪಡಿಸುವುದಕ್ಕೆ ಅನುಕೂಲ ವಾಗುತ್ತದೆ. ಈ ಕಾರಣಗಳಿಂದ ರ್ಯಾಪಿಡ್ ಇಂಡಸ್ಟ್ರಿಯಲ್ ಗ್ರೋತ್ ಆಗಬೇಕು ಎಂದು ಹೇಳುತ್ತಿದ್ದೇನೆ. ಜೊತೆಗೆ ಇವತ್ತು ಪ್ರೊಡಕ್ಷನ್ನನ್ನು ಹೆಚ್ಚಿಸುವುದರಿಂದ ಬೆಲೆಗಳೂ ಕೂಡ ಇಳಿಯುತ್ತವೆ. ಹೆಚ್ಚು ಪ್ರೊಡಕ್ಷನ್ ಮಾಡುತ್ತಾ ಹೋದ ಹಾಗೆಲ್ಲಾ ಇರತಕ್ಕ ದುಬಾರಿ ಬೆಲೆಗಳು ಏನು ಇವೆ, ಅವು ಕೂಡ ತಗ್ಗುವುದಕ್ಕೆ ಇದು ಹೆಚ್ಚು ಫಲಕಾರಿಯಾಗುತ್ತದೆ. ಎಂಬುದನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ನಾನು ಟೀಕೆ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾತನಾಡುತ್ತಿಲ್ಲ. ನಮ್ಮಲ್ಲಿ ಇಂಡಷ್ಟ್ರಿಯಲ್ ಪಾಲಿಸಿ ಬಹಳ ಗೊಂದಲದಲ್ಲಿದೆ; ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ನಮ್ಮ ನ್ಯಾಷನಲ್ ಇಂಡಸ್ಟ್ರಿಯಲ್ ಪಾಲಿಸಿ ಏನು ಎನ್ನುವುದನ್ನು ಹೇಳುವುದೇ ಕಷ್ಟ. ಒಂದು ಕಡೆ ಮನಾಪಲಿ ಎನ್‌ಕರೇಜ್ ಮಾಡಬಾರದು ಎನ್ನುವ ವಾದವನ್ನು ಹೇಳುತ್ತಾ ಮನಾಪಲಿ ರೆಸ್ಟ್ರಿಕ್ಷನ್ ಆಕ್ಟ್ ಎಂದು ಒಂದು ಕಾನೂನನ್ನು ತಂದರು. ಕೇಂದ್ರ ಸರ್ಕಾರದವರು ಅವರು ತಂದಂಥ ಆ ಒಂದು ಆಕ್ಟಿನ ಪರಿಮಿತಿಯೊಳಗೆ ಅವರು ಕೆಲಸಮಾಡುತ್ತಿದ್ದಾರೆಯೇ ಎಂಬುದನ್ನು ನೋಡುವುದಾದರೆ, ಅದನ್ನು ಅವರು ಅನುಸರಣೆ ಮಾಡುತ್ತಾ ಇಲ್ಲಎಂದು ಭಾಸವಾಗುತ್ತದೆ. ಇವತ್ತು ನಾವು ಏನು ಧೋರಣೆ ತಾಳಿದ್ದೇವೆ, ಆ ಧೋರಣೆಗೆ ತಕ್ಕ ಹಾಗೆ ನಡೆಯುತ್ತಾ ಇಲ್ಲ. ಇದಕ್ಕೆ ಒಂದೆರಡು ನಿದರ್ಶನ ಹೇಳಬಹುದು. ಮಿನಿ ಸ್ಟೀಲ್ ಪ್ಲಾಂಟ್‌ನ್ನು ಪ್ರೈವೇಟ್ ಸೆಕ್ಟರಿಗೆ ಕೊಟ್ಟಿದ್ದೀರಿ ಅದರ ಜೊತೆಗೆ ಗುಜರಾತಿನಲ್ಲಿ ಫರ್ಟಿಲೈಸರ್ ಫ್ಯಾಕ್ಟರಿಯನ್ನು ಪ್ರೈವೇಟ್ ಸೆಕ್ಟರಿಗೆ ಕೊಟ್ಟಿದ್ದೀರಿ. ದೇಶದಲ್ಲಿ ಕೇವಲ ಕೆಲವೇ ಇಂಡಸ್ಟ್ರಿಯಲ್ ಹೌಸುಗಳನ್ನು ಬೆಳೆಸತಕ್ಕದ್ದು ಮತ್ತು ಕೆಲವರೇ ಈ ಇಂಡಸ್ಟ್ರೀಸ್ ಮನೋಪಲಿ ಮಾಡಿಕೊಂಡು ದೇಶದ ಸಂಪತ್ತನ್ನು ಹಿಡಿತದಲ್ಲಿಟ್ಟು ಕೊಳ್ಳುವುದಕ್ಕೆ ಅವಕಾಶ ಕೊಡಬಾರದು ಎನ್ನುವ ಒಂದು ಭಾವನೆಯಿಂದ ಆ ಮನೋಪಲಿ ರೆಸ್ಟ್ರಿಕ್ಷನ್ ತಂದರು. ಸರ್ಕಾರದವರು ಹೇಳತಕ್ಕ ನೀತಿ ಒಂದು ಆಗಿದೆ, ಆದರೆ ಅದನ್ನು ಆಚರಣೆಗೆ ತರುವುದರಲ್ಲಿ ಡೀವಿಯೇಷನ್ ಆಗಿದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಇದು ಸರಿಯಾದ್ದಲ್ಲ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಇದರ ಜೊತೆಗೆ ನಮ್ಮ ಇಂಡಸ್ಟ್ರಿಯಲ್ ಪಾಲಿಸಿ ಏನು ಎನ್ನತಕ್ಕ ಬಗ್ಗೆ ಬಹುಶಃ ಕ್ರಿಸ್ಟಲ್ ಕ್ಲಿಯರ್ ಆಗಿ ಗೊತ್ತಾಗುವುದಿಲ್ಲ ಎನ್ನುವುದನ್ನು ತಿಳಿಸಲು ಈ ಮಾತನ್ನು ಹೇಳುತ್ತಿದ್ದೇನೆ. ಯಾವುದೇ ರಾಜ್ಯಸರ್ಕಾರಗಳು ರಾಜ್ಯದಲ್ಲಿ ಇಂಡಸ್ಟ್ರೀಸ್ ಬೆಳೆಸಬೇಕು ಎನ್ನುವ ಆಸೆಯಿಂದ ಪ್ರಾರಂಭ ಮಾಡಲು ಹೊರಟರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರ್ಸನ್ನು ಮಾಡಿದ್ದರೂ, ಕೇಂದ್ರ ಸರ್ಕಾರದಲ್ಲಿ ಲೈಸನ್ಸ್ ಕೊಡಬೇಕಾದರೆ, 2-3-4 ವರ್ಷಗಳಿಗೂ ಹೆಚ್ಚು ನಿಧಾನವಾಗುತ್ತದೆಂದು ಹೇಳುತ್ತೇನೆ. ಒಂದು ಕಡೆ ಇಂಡಸ್ಟ್ರೀಸ್ ಹೆಚ್ಚು ವೇಗವಾಗಿ ಬೆಳೆಯಬೇಕು ಎಂದು ಹೇಳುವ ವಾದ ಇರುವಾಗ ಮತ್ತೊಂದುಕಡೆ ಕೇಂದ್ರ ಸರ್ಕಾರದವರು ಅದನ್ನು ಕ್ಲಿಯರ್ ಮಾಡಿ, ಲೆಟರ್ ಆಫ್ ಇಂಟೆಂಟ್ ಕೊಡತಕ್ಕ ಬಗ್ಗೆ ತಾಳತಕ್ಕ ನಿಲುವು ಮತ್ತು ಅವರು ತೆಗೆದುಕೊಳ್ಳತಕ್ಕ ಕಾಲ ಇದನ್ನು ನೋಡಿದರೆ ಒಂದಕ್ಕೊಂದಕ್ಕೆ ಸಮಂಜಸವಾಗಿಲ್ಲ. ಇದರಿಂದ ಏನಾಗುತ್ತದೆ ಎಂದರೆ, ಪ್ರಾಜೆಕ್ಟ್ ರಿಪೋರ್ಟಿನಲ್ಲ ಏರು ಪೇರು ಆಗುವ ಸನ್ನಿವೇಶ ಬರುತ್ತದೆ. ಇಷ್ಟು ಡಿಲೇ ಅಗತಕ್ಕ ಪ್ರೊಸೆಸ್ ಸರಿಯಲ್ಲ. ಸರಳ ನೀತಿಯನ್ನು ಅನುಸರಿಸುವುದು ಸೂಕ್ತ-ಕೇಂದ್ರ ಸರ್ಕಾರದ ಧೋರಣೆಯಲ್ಲಿ ಸ್ವಲ್ಪ ಬದಲಾವಣೆಯಾಗಬೇಕಾದದು ಸೂಕ್ತ ಎಂದು ಹೇಳುತ್ತೇನೆ. ಹೊಸಬರು ಎಂಟರ್‌ಪ್ರೈಜರ್ಸ್ ಬಂದರೆ, ಎನ್‌ಕರೇಜ್ ಮಾಡುತ್ತೇವೆ ಎನ್ನುವ ವಾದವನ್ನು ಹೇಳುತ್ತೀರಿ. ಅವರು ಬಂದರೆ ಎಷ್ಟರಮಟ್ಟಿಗೆ ಕಾರ್ಯಸಾಧನೆಗೆ ಅವಕಾಶ

(ಶ್ರೀ ಹೆಚ್. ಡಿ. ದೇವೇಗೌಡ)

ವಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಹೊಸ ಹೊಸ ಎಂಟರ್‌ಪ್ರೈಜರ್ಸ್ ಏಷ್ಟೋ ಉತ್ಸಾಹದಿಂದ ಬರುತ್ತಾರೆ, ಆದರೆ ಅವರಿಗೆ ಯಾವ ರೀತಿ ಅನುಕೂಲತೆಗಳು ದೊರಕುತ್ತವೆ ಎನ್ನುವುದನ್ನು ತಾವು ಯೋಚನೆಮಾಡಬೇಕಾಗುತ್ತದೆ. ದೊಡ್ಡ ದೊಡ್ಡ ಎಂಟರ್ ಪ್ರೈಜರ್ಸ್‌ಗಳು ಮುಖ್ಯಮಂತ್ರಿಗಳ ಲೆವಲ್‌ನಿಂದ ಡೆಲ್ಲಿ ಇತ್ಯಾದಿ ಕಡೆಗಳಿಂದ ಬರತಕ್ಕ ಪ್ರಭಾವಶಾಲಿಗಳೇನಿದ್ದಾರೆ ಅವರಿಗೆ ಜಮೀನುಬೇಕು ನೀರು ಬೇಕು, ಲೈಟ್ ಬೇಕು ಮತ್ತು ಅವಶ್ಯವಾದಂಥ ರಾಮೆಟೀರಿಯಲ್ಸ್ ಬೇಕು ಎಂದರೆ, ಒಂದು ನಿಮಿಷದಲ್ಲಿ ಡೈರೆಕ್ಟರಿಗೆ ಹೇಳಿ ಕೆಲಸ ಮಾಡಿಸಿಕೊಡುತ್ತಾರೆ. ಆದರೆ ನನ್ನಂಥ ರಾಮ್ಯಾನ್ ಅನುಭವ ಇಲ್ಲದೆ ಇದ್ದವನು ಬಂದರೆ, ಭೂಮಿಗೆ ಅರ್ಜಿ ಹಾಕಿಕೊಂಡು ಕೇಸ್ ಪ್ರೊಸೆಸ್ ಆಗಬೇಕು ಎಂದರೆ, ಹೆಚ್ಚು ಸಮಯ ಬೇಕಾಗುತ್ತದೆ. ಈ ಧಾಟಿ ಸರಿಯಾದ್ದಲ್ಲ. ಎಂಟರ್‌ಪ್ರೈಜರುಗಳಿಗೆ ಸಹಾಯ ಮಾಡುತ್ತೇವೆಂದು ಹೇಳುವಾಗ ಹೆಚ್ಚು ನೆರವನ್ನು ಕೊಡಬೇಕಾದರೆ, ನಮ್ಮ ನೀತಿ ಸರಳವಾದ ರೀತಿಯಲ್ಲಿ ಇರಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಕೃಷ್ಣ ಅವರು ಹೇಳಬಹುದು, ಅವರು ಆಡಳಿತ ವಹಿಸಿ ಇನ್ನು ಮೂರು-ನಾಲ್ಕು ತಿಂಗಳು ಆಗಿಲ್ಲ ಎಂದು. ಅವರ ಮೇಲೆ ನಾನು ಆರೋಪಣೆ ಮಾಡುತ್ತಾ ಇಲ್ಲ. ಹಿಂದಿನಿಂದಲೂ ಈ ರೀತಿ ನಡೆದುಕೊಂಡು ಬಂದಿದೆ. ಆ ರೀತಿ ಆಗಬಾರದು, ಕೈಗಾರಿಕೆ ಹೆಚ್ಚು ಬೆಳೆಯಬೇಕಾದರೆ, ಹಿಂದಿನ ಸರ್ಕಾರದವರು ಇಂಡಸ್ಟ್ರಿಯಲ್ ಕನ್‌ಸ್ಟ್ರಕ್ಷನ್‌ಗೆ ಏನು ಕೊಟ್ಟಿದ್ದಾರೆ, ಅದರ ಜೊತೆಗೆ ಪ್ರಗತಿದಾಯಕವಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಈ ಧೋರಣೆಯ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇವತ್ತು ಒಂದೇ ಮಾತಿನಲ್ಲಿ ಹೇಳಬೇಕಾದರೆ, ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹನ್ನೊಂದು ಜಿಲ್ಲೆಗಳನ್ನು ಬ್ಯಾಕ್‌ವರ್ಡ ಏರಿಯಾಸ್ ಎಂದು ಪ್ರಶ್ನೆಯೊಂದಕ್ಕೆ ಉತ್ತರ ಕೊಟ್ಟಿದ್ದಾರೆ. ಯಾವ ಯಾವ ಜಿಲ್ಲೆಗಳಲ್ಲಿ ಈ ಬ್ಯಾಕ್‌ವರ್ಡ ಏರಿಯಾಸ್ ಇದೆ ಎಂದು ತಿಳಿಸಿಲ್ಲ. ಬಹುಶಃ ನನಗೆ ಗೊತ್ತಿರುವ ಹಾಗೆ 100ಕ್ಕೆ 65 ಪರ್ಸೆಂಟ್ ಬ್ಯಾಕ್‌ವರ್ಡ ಏರಿಯಾ ನಮ್ಮ ರಾಜ್ಯದಲ್ಲಿ ಇದೆ ಎಂದು ನನ್ನ ಅಭಿಪ್ರಾಯ. ಹನ್ನೊಂದು ಜಿಲ್ಲೆಗಳು ಬ್ಯಾಕ್‌ವರ್ಡ ಏರಿಯಾಸ ಎಂದು ಡಿಕ್ಲೇರ್ ಆಗಿ ಸುಮಾರು ಎರಡು ವರ್ಷಗಳಾಗಿರಬಹುದು. ಈ 11 ಜಿಲ್ಲೆಗಳಲ್ಲಿ ಏನು ಕೈಗಾರಿಕೆ ಮಾಡಬೇಕು ಎನ್ನುವ ಬಗ್ಗೆ ಸರಿಯಾದಂಥ ರಿಪೋರ್ಟು ನಮ್ಮ ಹತ್ತಿರ ಇಲ್ಲ; ಅಂಕಿ ಅಂಶಗಳು ಇಲ್ಲ. ಎಲ್ಲೆಲ್ಲಿ ಯಾವ ಮೆಟೀರಿಯಲ್ಸ್ ಸಿಕ್ಕುತ್ತದೆ ಎಲ್ಲೆಲ್ಲಿ ಏನು ಕೈಗಾರಿಕೆ ಮಾಡಬಹುದು ಎನ್ನುವ ಬಗ್ಗೆ ಒಂದು ಟೆಕ್‌ನಿಕಲ್ ರಿಪೋರ್ಟನ್ನು ನಮ್ಮಲ್ಲಿ ತಯಾರಿಸಿಲ್ಲ ಎಂದು ನನ್ನ ಅಭಿಪ್ರಾಯ. ಸರ್ಕಾರ ಹಾಕತಕ್ಕ ಯೋಚನೆ ಇವತ್ತು ಕುಂಠಿತವಾದರೆ, ಯಾವ ಉದ್ದೇಶದಿಂದ 11 ಜಿಲ್ಲೆಗಳನ್ನು ಬ್ಯಾಕ್‌ವರ್ಡ ಏರಿಯಾ ಎಂದು ಸೆಲೆಕ್ಟ್ ಮಾಡಿದ್ದಾರೋ, ಆ ಉದ್ದೇಶದ ಫಲ ಶೀಘ್ರವಾಗಿ ದೊರಕಿಸಿಕೊಳ್ಳಲಿಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದವರು ಹಣ ಕೊಡತಕ್ಕ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶವನ್ನು ಸರ್ಕಾರಕ್ಕೆ ಕೊಟ್ಟಿರಬಹುದು. ನಮ್ಮಲ್ಲಿ ಟೆಕ್ನೋ ಎಕನಾಮಿಕ್ ಸರ್ವೆ ಮಾಡಿಸಿ, ಎಲ್ಲೆಲ್ಲಿ ಏನು ಮಾಡಿಸಬಹುದು ಎನ್ನುವ ಮಾಹಿತಿ ನಮ್ಮ ಹತ್ತಿರ ಸಾಕಾದಷ್ಟು ಇಲ್ಲದೆ ಇರುವ ಕಾಲದಲ್ಲಿ, ಯಾವ ಜಿಲ್ಲೆಯಲ್ಲಿ ಯಾವ ಇಂಡಸ್ಟ್ರೀಸ್ ಹಾಕುವುದಕ್ಕೆ ಸಾಧ್ಯವಾಗುತ್ತದೆ? ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಮಾತನಾಡುವುದಾದರೆ, ನಮ್ಮ ಜಾಯಿಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅವರಿಗೆ ಕೊಟ್ಟಿರುವ ಕೆಲಸ ಏನು ಎಂದರೆ, ರಾಮೆಟೀರಿಯಲ್ಸ್ ಡಿಸ್ಟ್ರಿಬ್ಯೂಟ್ ಮಾಡುವುದು. ಅದು ಒಂದೇ ಒಂದು ಕೆಲಸ. ಇಲ್ಲಿ ಯಾರಾದರೂ ಇಂಡಸ್ಟ್ರೀಸ್ ಸ್ಟಾರ್ಟ್ ಮಾಡಬೇಕು ಎಂದರೆ, ಎಸ್.ಐ.ಎಸ್.ಐ.ಗೆ ಹೋಗಿರಿ ಎಂದು ಹೇಳುತ್ತಾರೆ. ರಾಜ್ಯದ ಯಾವಭಾಗದಲ್ಲಿ ಯಾವ ಇಂಡಸ್ಟ್ರೀಸ್ ಮಾಡುವುದಕ್ಕೆ ಸಾಧ್ಯ, ಲೋಕಲ್ ರಾಮೆಟೀರಿಯಲ್ಸ್ ಎಲ್ಲೆಲ್ಲಿ ಏನು ಸಿಕ್ಕುತ್ತದೆ ಎನ್ನುವ ಬಗ್ಗೆ ಸಾಕಷ್ಟು ಮಾಹಿತಿ ಹೊಂದಿದ ರಿಪೋರ್ಟು ನಮ್ಮ ಸರ್ಕಾರದವರು ಇನ್ನೂ ತಯಾರು ಮಾಡಿಲ್ಲ. ಈ ಕಡೆ ಅವರ ಗಮನವನ್ನು ಹರಿಸಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇವತ್ತು ಎಸ್ ಐ ಎಸ್ ಐ ತಯಾರು ಮಾಡಿರತಕ್ಕ ಓಬಿರಾಯನ ಕಾಲದ ರಿಪೋರ್ಟು ಆಧಾರ ಇಟ್ಟುಕೊಂಡು ಹೇಳುವುದು ಸರಿಯಲ್ಲ. ಒಂದು ಟೆಕ್ನಿಕಲ್ ಸೆಲ್ ಮಾಡಿ ಅದರ ಬಗ್ಗೆ ಹೆಚ್ಚು ಮಾಹಿತಿಯನ್ನು ಪ್ರತಿ ಜಿಲ್ಲೆಯವರು ಇಟ್ಟುಕೊಳ್ಳುವುದು ಸೂಕ್ತ.

ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಹೇಳುವುದಾದರೆ ಇದು ಸಹ ಮಾತಿನಲ್ಲಿದೆಯೇ ಹೊರತಾಗಿ ಇನ್ನೂ ಕೃತಿಯಲ್ಲಿ ಬಂದಿಲ್ಲ. ಸಾಕಷ್ಟು ವೇಗದಲ್ಲಿ ಬೆಳೆದಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಹೊಸದಾಗಿ ಯಾರಾದರೂ ಯಾವುದಾದರೂ ಕೈಗಾರಿಕಾ ಸ್ಥಾಪನೆಗೆ ಪ್ರಯತ್ನ ಮಾಡಬೇಕಾದರೆ ಅಂಥವರಿಗೆ ಇಲ್ಲಿ ಹಣ ಸಿಕ್ಕುವುದಿಲ್ಲ, ಭೂಮಿ ಸಿಕ್ಕುವುದಿಲ್ಲ, ರಾ ಮೆಟೀರಿಯಲ್ಸ್

ಸಿಕ್ಕುವುದಿಲ್ಲ, ನಿಜವಾಗಿ ಕಾರ್ಯಸಾಧನೆ ಮಾಡತಕ್ಕವನಿಗೆ ಯಾವುದೂ ಸಿಕ್ಕುವುದಿಲ್ಲ. ಯಾರು ಬೋಗಸ್ ಇರುತ್ತಾರೋ ಯಾರು ಕೋಟಾ ತೆಗೆದುಕೊಂಡು ವ್ಯಾಪಾರ ಮಾಡುವವರು ಇದ್ದಾರೋ ಅಂಥವರಿಗೆ ಕೆಲವು ಸಂದರ್ಭದಲ್ಲಿ ಕೆಲವು ಅಧಿಕಾರಿಗಳ ಸಹಕಾರ ಸಿಕ್ಕಿದೆಯೆಂದು ಹೇಳಿದ್ದೇನೆ. ಇದು ಎಲ್ಲವನ್ನು ತಪ್ಪಿಸಿ ರಾಜ್ಯದಲ್ಲಿ ವೇಗವಾಗಿ ಕೈಗಾರಿಕೆಗಳನ್ನು ನಡೆಸತಕ್ಕವರ ಬಗ್ಗೆ ಹೆಚ್ಚು ಉತ್ಸುಕತೆ ತೋರಿಸಬೇಕು ಎಂದು ಹೇಳುತ್ತಿದ್ದೇನೆ. ದೊಡ್ಡ ದೊಡ್ಡ ಇಂಡಸ್ಟ್ರೀಸ್ ಆನ್ಸಿಲರಿ ಇಂಡಸ್ಟ್ರೀಸ್ ಬೆಳೆಯುವ ಬಗ್ಗೆ ಉತ್ತೇಜನ ಕೊಡಬೇಕು. ಅವರಿಗೆ ಎಲ್ಲಾ ಸಲಕರಣೆಗಳನ್ನು ಮತ್ತು ಸವಲತ್ತುಗಳನ್ನು ಕೊಡುವುದು ಅವಶ್ಯಕ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಹೆಚ್ಚು ಬೆಳೆಯಬೇಕಾದರೆ ಇದರ ಬಗ್ಗೆ ಆಲೋಚನೆ ಮಾಡಬೇಕು ಎನ್ನುವುದನ್ನು ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಕೆಲವು ರಾಜ್ಯಸರ್ಕಾರದ ಇಂಡಸ್ಟ್ರೀಸ್ ಉತ್ತಮವಾಗಿ ಕೆಲಸ ಮಾಡುವುವು ಇರಬಹುದು. ಎನ್.ಜಿ.ಎಫ್. ಗೆ ಹೋದರೆ ಬ್ಯಾಲನ್ಸ್‌ಷೀಟ್ ನೋಡಿದರೆ ಅದು 1970-71ರ ಈಚೆಗೆ ಸ್ವಲ್ಪ ಲಾಭಗಳಿಸಿದೆ. ಭದ್ರಾವತಿ ಐರನ್ ವರ್ಕ್ಸ್ ಕಳೆದ ವರ್ಷ ಲಾಭಗಳಿಸಿಕೊಟ್ಟಿದೆ. ಇಕ್ವಿಟಿ ಪುನರ್‌ವಿಮರ್ಶೆ ಮಾಡಿದ ಫಲವಾಗಿ 75 ಲಕ್ಷ ಇಂಟರೆಸ್ಟ್ ಕೊಡುವುದು ಉಳಿದಿದೆ ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ಅದು ಏನೇ ಇರಲಿ, ಜಾಯಿಂಟ್ ಸ್ಟಾಕ್ ಕಂಪನಿಗಳು ಉತ್ತಮವಾಗಿ ಕೆಲಸಮಾಡಿ ಲಾಭದಾಯಕವಾಗಿ ನಡೆಯುತ್ತಿವೆ ಎನ್ನುವ ಮಾತನ್ನು ಹೇಳುತ್ತೇನೆ. ಅವು ರಾಜ್ಯಕ್ಕೆ ಹೆಚ್ಚು ಆದಾಯಗಳಿಸುವಂತೆ ಕೆಲಸ ಮಾಡುವ ಅವಶ್ಯಕ ಇದೆ ಎಂದು ಹೇಳುತ್ತೇನೆ. ನಮ್ಮ ಸರ್ಕಾರದ ವತಿಯಲ್ಲಿ ಇರತಕ್ಕ ಜಿ.ಇ.ಎಫ್. ಬಗ್ಗೆ ಒಂದು ರಿಪೋರ್ಟು ಈ ಸಭೆ ಮುಖಾಂತರ ಸರ್ಕಾರಕ್ಕೆ ಕಳುಹಿಸುವವರು ಇದ್ದೇವೆ. ಅಲ್ಲಿ ಬಹಳ ಗೊಂದಲ ಇದೆ. ಈ ಫ್ಯಾಕ್ಟರಿ ಮುಚ್ಚಿಬಿಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಹೋದಸಾರಿ 54 ಲಕ್ಷ ರೂಪಾಯಿ ನಷ್ಟ ಉಂಟಾಗಿದೆ, ಅಲ್ಲಿ ಬಹಳ ಉತ್ತಮ ಮೆಷಿನರಿ ಇದೆ. ಅದನ್ನು ಸರಿಮಾಡಬೇಕಾದರೆ, ಇನ್ನು ಮೆಷಿನರಿ ಹಾಕಬೇಕಾಗುತ್ತದೆ ಎಂದು ಕೆಲವು ಅಧಿಕಾರಿಗಳು ಹೇಳುತ್ತಾರೆ. ನಾನು ಪೂರ್ತಿ ವಿವರಣೆ ಕೊಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ರಿಪೋರ್ಟ್ ತಮ್ಮ ಮುಂದೆ ಕೊಡತಕ್ಕದ್ದು ಇದೆ. ಅದು ಒಂದು ಟಿಟ್ವರೆ ಕ್ರೋಮ್ ಫ್ಯಾಕ್ಟರಿ ಸ್ವಲ್ಪ ಲಾಸ್‌ನಲ್ಲಿ ವರ್ಕ್ ಮಾಡುತ್ತಾ ಇದೆ. ಯಾವುದೇ ಇಂಡಸ್ಟ್ರಿ ಲಾಸ್ ಇಲ್ಲದೆ ಕೆಲಸ ಮಾಡುವ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಇವೊತ್ತು ನಮ್ಮಲ್ಲಿ ಕೆಲವು ಮಿನರಲ್ ಬೇಸ್ಡ್ ಇಂಡಸ್ಟ್ರೀಸ್ ಮಾಡುವುದು ಸೂಕ್ತ ಎಂದು ಭಾವನೆ ಇದೆ. ನಮ್ಮ ರಾಜ್ಯದಲ್ಲಿ ಹಲವಾರು ತರಹ ಮಿನರಲ್ಸ್ ಸಿಕ್ಕುತ್ತವೆ. ಉದಾಹರಣೆಗಾಗಿ ಹೇಳಬೇಕಾದರೆ ನಾವು ಬಹುಶಃ ಐರನ್‌ಓರ್‌ನ್ನು ಪರ್ ಟನ್‌ಗೆ 55-54 ರೂಪಾಯಿನಂತೆ ಜಪಾನಿಗೆ ಕಳುಹಿಸುತ್ತಿದ್ದೇವೆ. ಅದಕ್ಕೆ ಬದಲಾಗಿ ನಾವು ಅದನ್ನು ಪೆಲೇಟ್ಸ್ ಮಾಡಿ, ಪಿಗ್‌ಐರನ್ ಮಾಡಿ, ಅದು ಇಲ್ಲದಿದ್ದರೆ ಸ್ಪಂಜ್ ಐರನ್‌ಮಾಡಿ ಮಾರಾಟಮಾಡಿದರೆ ಮತ್ತಷ್ಟು ಒಳ್ಳೆಯದು ಮತ್ತು ಅದರಿಂದ ಫಾರಿನ್ ಎಕ್ಸ್‌ಚೇಂಜ್‌ಗಳಿಸುವುದಕ್ಕೆ ಸಾಧ್ಯವಾಗುತ್ತದೆ. ಅದಲ್ಲದೆ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಕೂಡ ಸಾಲ್ವ್ ಮಾಡುವುದಕ್ಕೆ ಹೆಚ್ಚು ಫಲಕಾರಿಯಾಗುತ್ತದೆ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇದರ ಕಡೆ ಗಮನವನ್ನು ಕೊಡತಕ್ಕದ್ದು ಸೂಕ್ತ. ಜೊತೆಗೆ ಹೊಸಪೇಟೆ ಸ್ಟೀಲ್ ಪ್ಲಾಂಟ್ ಬರುತ್ತದೆ, 7 ವರ್ಷಗಳಲ್ಲಿ ಆ ಕಾರ್ಖಾನೆಯನ್ನು ಮಾಡುತ್ತೇವೆ ಎಂದು ಕೂಡ ಕೇಂದ್ರ ಸರ್ಕಾರದವರು ಆಶ್ವಾಸನೆ ಕೊಟ್ಟಿರುವುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಇದಕ್ಕೆ ಅದು ಹೆಚ್ಚು ಸಹಕಾರವಾಗುತ್ತದೆ. ಮಿನರಲ್ ಬೇಸ್ಡ್ ಇಂಡಸ್ಟ್ರೀಸ್ ಮಾಡಿದರೆ, ಮೊದಲು ಹೇಳಿದಹಾಗೆ ಕೇವಲ ಐರನ್ ಓರ್ ಜಪಾನಿಗೆ ಕಳುಹಿಸುವುದಕ್ಕಿಂತ ಹೆಚ್ಚು ಫಾರಿನ್ ಎಕ್ಸ್‌ಚೇಂಜ್ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಆ ಕಡೆ ಗಮನಕೊಡತಕ್ಕದ್ದು ಸೂಕ್ತ. ಇನ್ನು ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್, ಪೇಪರ್ ಮಿಲ್ಸ್ ಮತ್ತು ಹೀಗೆ ಅನೇಕ ಇಂಡಸ್ಟ್ರೀಸ್ ಮಾಡತಕ್ಕದ್ದು ಇದೆ. ದಾವಣಗೆರೆಯಲ್ಲಿ ಫೈಬರ್ ಫ್ಯಾಕ್ಟರಿ ಬಂದಿದೆ ಎಂದು ಕಾಣುತ್ತದೆ. ಒಂದು ಕೋ-ಆರ್ಡಿನೇಟೆಡ್ ಎಫರ್ಟ್ ಇರುವುದು ಒಳ್ಳೆಯದು. ಬ್ಯಾಂಬೂ ಬೆಳೆಯುವ ಬಗ್ಗೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹೆಚ್ಚಿಗೆ ಉತ್ತೇಜನ ಕೊಡದೆ ಹೋದರೆ ಇಂಥ ಇಂಡಸ್ಟ್ರೀಸ್ ಕುಂಠಿತವಾಗುತ್ತದೆ. ಎರಡು ಇಲಾಖೆಗಳು ಕೋ-ಆರ್ಡಿನೇಟೆಡ್ ಎಫರ್ಟ್ಸ್ ಹಾಕಿದರೆ ಫಾರೆಸ್ಟ್ ಬೇಸ್ಡ್ ಇಂಡಸ್ಟ್ರೀಸ್ ಚೆನ್ನಾಗಿ ಡೆವಲಪ್ ಮಾಡುವುದಕ್ಕೆ ಹೆಚ್ಚು ಫಲಕಾರಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅಗ್ರೋ ಬೇಸ್ಡ್ ಇಂಡಸ್ಟ್ರೀಸ್ ರಾಜ್ಯ ಸರ್ಕಾರದವರು ತಯಾರುಮಾಡತಕ್ಕ ರಿಪೋರ್ಟಿನಲ್ಲಿ ಇದೆ. ಇದರ ಬಗ್ಗೆ ಇವೊತ್ತು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಸ್ಟಾರ್ಚ್ ಫ್ಯಾಕ್ಟರಿ ಮಾಡಬೇಕು. ಬೆಳಗಾಂ ನಲ್ಲಿ ಇವಕ್ಕೆ ಲೈಸೆನ್ಸ್ ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಹಿಂದಿನಿಂದ ಇದರ ಬಗ್ಗೆ ವ್ಯವಹಾರ ನಡೆಯುತ್ತಿದೆ ಎನ್ನುವುದು ಗೊತ್ತಿದೆ. ಇನ್ನು ಹೈಬ್ರಿಡ್ ಜೋಳ ಅಹಮದಾಬಾದಿಗೆ ಹೋಗುತ್ತದೆ. ಅದನ್ನು ಇಲ್ಲೇ ಉಪಯೋಗಿಸಲು ಸ್ಟಾರ್ಚ್ ಫ್ಯಾಕ್ಟರಿಯನ್ನು ಇಲ್ಲಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

(ಶ್ರೀ ಹೆಚ್. ಡಿ. ದೇವೇಗೌಡ)

1970ರಲ್ಲಿ 6–7 ಫ್ಯಾಕ್ಟರಿಗಳು ಬರುತ್ತವೆ ಎಂದು ಹಿಂದೆ ಕೈಗಾರಿಕೆ ಮಂತ್ರಿಗಳು ಹೇಳಿದ್ದಾರೆ. ಕೆಲವು ಲೆಟರ್ ಆಫ್ ಇಂಟೆಂಟ್ ತೆಗೆದುಕೊಂಡಿದ್ದಾರೆ. ಕಾರ್ಯಗತ ಮಾಡಿಲ್ಲ. ಕೋ-ಅಪರೇಟೀವ್ ಸೆಕ್ಟಾರ್‌ನಲ್ಲಿ ಸಾಕಷ್ಟು ಶೇರ್‌ಗಳನ್ನು ಕೂಡಿಸುವುದಕ್ಕೆ ತೊಂದರೆಯಾಗಿ, ಕೊಳ್ಳೇಗಾಲ ಷುಗರ್ ಫ್ಯಾಕ್ಟರಿ ಹಾಗೆಯೇ ಇನ್ನು 4–5 ಷುಗರ್ ಫ್ಯಾಕ್ಟರಿಗಳು ಸಾಕಷ್ಟು ರೀತಿಯಲ್ಲಿ ಪ್ರಗತಿಯಾಗಿಲ್ಲವೆಂದು ತಿಳಿದುಕೊಂಡಿದ್ದೇನೆ. ಇವೊತ್ತು ನೆರೆ ರಾಜ್ಯಗಳಿಗೆ ಹೋಲಿಸಿಕೊಳ್ಳುವುದಾದರೆ ಮಹಾರಾಷ್ಟ್ರದಲ್ಲಿ 65–66 ಷುಗರ್ ಫ್ಯಾಕ್ಟರಿಗಳು ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಹೆಚ್ಚು ಪ್ರಗತಿದಾಯಕವಾಗಿ ಬಂದಿವೆ ಎಂದು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಕೋ-ಆಪರೇಟಿವ್ ಸೆಕ್ಟಾರ್ ಹೆಚ್ಚು ಉತ್ತೇಜನಕಾರಿಯಾಗಿ ಬೆಳೆಸುವುದಕ್ಕೆ ಅಷ್ಟು ಅವಕಾಶ ದೊರೆತಿಲ್ಲ, ಕಾರಣ ಏನು ಎಂದರೆ, ಮಹಾರಾಷ್ಟ್ರದಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳು ಡಿಬೆಂಚರ್ಸ್ ಫ್ಲೋಟ್‌ಮಾಡಿ ಸಂಬಂಧಪಟ್ಟ ರೈತರ ಭೂಮಿಯ ಮೇಲೆ ಸಾಲಕೊಟ್ಟು ಷೇರ್ಸ್ ಡೆವಲಪ್ ಮಾಡುವುದಕ್ಕೆ ಹೆಚ್ಚು ಉತ್ಸುಕತೆಯಿಂದ ಕೆಲಸ ಮಾಡಿದ್ದುದರ ಪರಿಣಾಮವಾಗಿ ಅಷ್ಟು ಕೋ-ಆಪರೇಟಿವ್ ಸೆಕ್ಟರ್ ಷುಗರ್ ಫ್ಯಾಕ್ಟರಿಗಳು ಬರುವುದಕ್ಕೆ ಅವಕಾಶವಾಯಿತು ಎಂದು ಕೇಳಿದ್ದೇನೆ. ನಮ್ಮ ರಾಜ್ಯದಲ್ಲಿ 10 ಶುಗರ್ ಫ್ಯಾಕ್ಟರಿಗಳನ್ನು ಮಾಡಬಹುದು. ಟೆಕ್ನಿಕಲ್ ರಿಪೋರ್ಟ್‌ ಆಧಾರದ ಮೇಲೆ ಹೇಳುವುದಾದರೆ ತಾವು ಇದರ ಬಗ್ಗೆ ಕೇಂದ್ರದಲ್ಲಿ ಹೆಚ್ಚು ಪ್ರಭಾವ ಬೀರಿ, ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕು. ನನ್ನ ಜಿಲ್ಲೆಯಲ್ಲಿ ಒಂದು ಹಾಕತಕ್ಕದ್ದು ಸಾಧ್ಯವಿದೆ. ಇದರ ಬಗ್ಗೆ ಹಿಂದೆ ಪ್ರಸ್ತಾಪ ಮಾಡಿದ್ದೇನೆ. ಇವೊತ್ತು ಹೇಮಾವತಿ ಪ್ರಾಜೆಕ್ಟು ಬರುತ್ತಿದೆ. ಯಗಚಿ ಪ್ರಾಜೆಕ್ಟು ಬರುತ್ತಿದೆ. ಒಂದು ಶುಗರ್ ಫ್ಯಾಕ್ಟರಿ ಹಾಸನದಲ್ಲಿ ಹಾಕುವ ಬಗ್ಗೆ ಸರ್ಕಾರ ಗಮನ ಹರಿಸಿ ಅದನ್ನು ಕೋ-ಆಪರೇಟಿವ್ ಸೆಕ್ಟಾರಿನಲ್ಲಾಗಲಿ ಕೊನೆಗೆ ಜಾಯಿಂಟ್‌ವೆಂಚರ್ ನಲ್ಲಾಗಲಿ, ಮಾಡುವ ಬಗ್ಗೆ ಪ್ರಯತ್ನ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಬ್ಯಾಂಕ ಡಿಬೆಂಚರ್ ಫ್ಲೋಟ್ ರೈತರಿಗೆ ಭೂಮಿ ಆಧಾರಮಾಡಿಕೊಂಡು ಸಾಲ ಕೊಟ್ಟು ಷೇರ್ ಬಿಲ್ಡ್ ಅಪ್ ಮಾಡುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ. ಕೋ-ಆಪರೇಟೀವ್ ಸೆಕ್ಟರಿಗೆ ಸಂಬಂಧಪಟ್ಟ ಮೆಷಿನರಿ ಏನು ಇದೆ ಅದು ಕೆಲಸ ಮಾಡತಕ್ಕವರ ಮೇಲೆ ಹೋಗುತ್ತದೆ.

Sri D. DEVARAJ URS. (Chief Minister).—We do not want to give encouragement to private sector. ಕೋ-ಆಪರೇಟಿವ್ ಸೆಕ್ಟಾರ್ ಡೆವಲಪ್ ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ.– ನಾನು ಒಪ್ಪುತ್ತೇನೆ. ಪ್ರೈವೇಟ್ ಸೆಕ್ಟಾರ್‌ಗೆ ಕೊಡಬೇಕು ಎನ್ನುವುದು ನನ್ನ ವಾದವಲ್ಲ.

Sri D. DEVARAJ URS.—We will try to develop co-operative sector in your area.

ಶ್ರೀ ಎಚ್. ಡಿ. ದೇವೇಗೌಡ.—ಇನ್ನು ಒಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಂಡಸ್ಟ್ರೀಸ್ ಇಲಾಖೆಗೆ ಸೆಪರೇಟ್ ಕೇಡರ್ ಮಾಡುವುದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ಪಿಎಸ್‌ಸಿ ಚೇರ್‌ಮನ್ ದೃಷ್ಟಿಯಿಂದ ಹೇಳುವುದಾದರೆ, ಬೇರೆ ಬೇರೆ ಇಲಾಖೆಗಳಿಂದ ಅಧಿಕಾರಿಗಳನ್ನು ಹಾಕಿ ಕೆಲಸ ಮಾಡುವ ಪದ್ಧತಿ ಏನು ಬೆಳಸಿಕೊಂಡು ಬಂದಿದ್ದಾರೆ ಅದು ಸರಿಯಾದುದಲ್ಲ. ತಮಗೆ ಉದಾಹರಣೆಯಾಗಿ ಇಲ್ಲಿ ಹೇಳುವುದಾದರೆ ಒಂದು ಮ್ಯಾನೇಜ್‌ಮೆಂಟಿನಲ್ಲಿ ಎಂ. ಎಸ್. ಇ. ಬಿ. ಚೇರ್ಮನ್ನರು ಇರುತ್ತಾರೆ, ಸಿ.ಸಿ.ಎಫ್. ಇರುತ್ತಾರೆ ಹಾಗೂ ಇನ್ನೂ ಅನೇಕ ಇಲಾಖೆಯ ಬೇರೆ ಬೇರೆ ಅಧಿಕಾರಿಗಳು ಇರುತ್ತಾರೆ. ಈ ಒಂದು ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನಲ್ಲಿ ಕೆಲಸ ಮಾಡುವ ಅಧಿಕಾರಿಗಳು ಆ ಕೈಗಾರಿಕೆಗಳ ಪೂರ್ಣ ಮಾಹಿತಿ ಪಡೆಯಬೇಕಾದರೆ ಸುಮಾರು ಒಂದೆರಡು ವರ್ಷಗಳ ಕಾಲ ಬೇಕಾಗುತ್ತದೆ. ಆದರೆ ಯಾವುದಾದರೂ ಒಂದು ನಿರ್ಣಯ ತೆಗೆದುಕೊಳ್ಳುವ ಕಾಲಕ್ಕೆ ಆ ಅಧಿಕಾರಿಗಳು ಇರುವುದಿಲ್ಲ. ಬೇರೆ ಒಬ್ಬರು ಅಧಿಕಾರಿಗಳು ಬಂದಿರುತ್ತಾರೆ. ಮತ್ತು ಅನೇಕ ಕಡೆ ಕೈಗಾರಿಕೆಗಳಲ್ಲಿ ಪರಿಶ್ರಮ ಹೊಂದಿರುವ ಅಧಿಕಾರಿಗಳು ಇರುವುದಿಲ್ಲ. ರೆವಿನ್ಯೂ ಇಲಾಖೆಯ ಅಧಿಕಾರಿಗಳು ಕೆಲವು ಕಡೆ ಇರುತ್ತಾರೆ. ಇವೊತ್ತು ರೆಂಕೋ ತೆಗೆದುಕೊಳ್ಳಬಹುದು. ಇಲ್ಲವೇ ಎಲೆಕ್ಟ್ರಿಸಿಟಿ ಬೋರ್ಡ್ ನೋಡಬಹುದು. ಇದರಲ್ಲಿರುವ ಚೇರ್ಮನರವರು ಇಲ್ಲಿನ ಕೈಗಾರಿಕೆಗಳ ಬಗ್ಗೆ ಸರಿಯಾಗಿ ತಿಳಿದುಕೊಂಡು ಪರಿಪೂರ್ಣವಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆ ಎಂದು ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಉದಾಹಾರಣೆಯಾಗಿ

ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಎನ್ನುವ ಒಬ್ಬರು ಅಧಿಕಾರಿಗಳನ್ನು ಮಾಡಿದ್ದಾರೆ. ಇವರು ಐ.ಎ.ಎಸ್. ಅಥವಾ ಐ. ಸಿ. ಎಸ್. ಅಧಿಕಾರಿಗಳು ಆಗಿರಬಹುದು. ಇವರನ್ನು ಎರಡು ಮೂರು ವರ್ಷಗಳಾದ ಮೇಲೆ ಬೇರೆ ಕಡೆಗೆ ವರ್ಗಾವಣೆ ಮಾಡುತ್ತಾರೆ. ಇದರಿಂದ ಅಲ್ಲಿನ ಕೆಲಸಕಾರ್ಯ ಗಳಿಗೆ ಕುಂದಕ ಉಂಟಾಗುತ್ತದೆ ಮತ್ತು ಇಂಡಸ್ಟ್ರಿ ಬೆಳೆಯಲು ಕಷ್ಟವಾಗುತ್ತದೆ. ಇದರ ಬಗ್ಗೆ ಸರಿಯಾಗಿ ಯೋಚನೆ ಮಾಡಬೇಕಾಗಿದೆ. ಇದಕ್ಕಾಗಿ ನಾನು ಸಲಹೆಮಾಡುವುದು ಈ ಇಲಾಖೆಗೇನೇ ಪ್ರತ್ಯೇಕವಾದ ಒಂದು ಕೇಡರನ್ನು ನಿರ್ಮಾಣಮಾಡಿದರೆ ಇದು ಸರಿಯಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಹಿಂದೆ ಕೇಂದ್ರ ಸರಕಾರದಲ್ಲಿ ಮಾನ್ಯ ಶ್ರೀ ಕೆ. ಸಿ. ಪಂತರು ಇಂತಹ ಒಂದು ಕೇಡರನ್ನು ಮಾಡಬೇಕೆಂದು ಪ್ರಯತ್ನ ಮಾಡಿದ್ದರು. ಆದರೆ ಅದನ್ನು ಆಗ ಸರಿಯಾಗಿ ಫಾಲೋ ಅಪ್ ಮಾಡದೆ ಹಾಗೇ ಕೈ ಬಿಡಲಾಯಿತು. ಆದುದರಿಂದ ನಮ್ಮ ಸರಕಾರ ಈಗಲಾದರೂ ಇದರ ಕಡೆಗೆ ಗಮನ ಕೊಡಬೇಕೆಂದು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ನಮ್ಮ ಹೊಳೆನರಸೀಪುರದಲ್ಲಿ ನಾವೆಲ್ಲ ಒತ್ತಾಯ ಮಾಡಿದಂತೆ ಹಿಂದೆ ಇದ್ದ ಸರಕಾರ ಇಲ್ಲಿ ಒಂದು ಅಸ್‌ಬೆಸ್ಟೋಸ್ ಫ್ಯಾಕ್ಟರಿ ಮಾಡಿದ್ದಾರೆ. ಇದು ಮಾಡಿದಾಗಲೇ ಇದರ ಬಗ್ಗೆ ಒಂದು ರೀತಿಯಾದ ಜಿಜ್ಞಾಸೆ ಇತ್ತು. ಇದಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳು ಇಲ್ಲಿ ಸಾಕಷ್ಟು ಪ್ರಮಾಣ ದಲ್ಲಿ ಸಿಕ್ಕುತ್ತಿಲ್ಲ. ಇಲ್ಲಿ ಸಿಗತಕ್ಕ ಫೈಬರು ಇಲ್ಲಿಗೆ ಸಾಕಾಗುವುದಿಲ್ಲ. ಇದಕ್ಕಾಗಿ ಪರದೇಶಗಳಿಂದ ಕ್ಯೆಸರ್ ಟೈಪು ಫೈಬರನ್ನು ತರಿಸಿಕೊಂಡು ಇಲ್ಲಿಗೆ ಒದಗಿಸಿದರ ಈ ಫ್ಯಾಕ್ಟರಿ ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಇದಕ್ಕಾಗಿ ಇಲ್ಲಿ ಹಿಂದೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಕೂಡ ತಯಾರು ಮಾಡಲಾಗಿದೆ. ಸರಕಾರ ಅದನ್ನು ತರಿಸಿಕೊಂಡು ನೋಡಿ ಅದರಂತೆ ತಕ್ಕ ಕಾರ್ಯ ಕ್ರಮವನ್ನು ತೆಗೆದುಕೊಂಡರೆ ಇದು ಲಾಭದಾಯಕವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಇಲ್ಲಿ ಬರುವ ರಾ ಮೆಟೀರಿಯಲ್‌ಸ್‌ಗಳು ಸಾಕಾಗುವುದಿಲ್ಲ. ಇದಕ್ಕಾಗಿ ಬೇರೆ ಕಡೆಗಳಿಂದ ಹೆಚ್ಚು ರಾ ಮೆಟೀರಿಯಲ್‌ಸ್‌ಗಳನ್ನು ತರಿಸಿಕೊಂಡು ಸಪ್ಲೈ ಮಾಡಿದರೆ ಇದು ಚೆನ್ನಾಗಿ ಕೆಲಸ ಮಾಡಲು ಸಾಧ್ಯವಾದೀತು. ಸರಕಾರ ಇದರ ಕಡೆಗೆ ಗಮನ ಕೊಟ್ಟು ಪರದೇಶದಿಂದ ಕ್ರೈಸರು ಟೈಪು ಫೈಬರನ್ನು ತರಿಸಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ಹಾಸನ ಜಿಲ್ಲೆಯಲ್ಲಿ ಒಂದು ಇಂಪ್ಲಿಮೆಂಟು ಫ್ಯಾಕ್ಟರಿ ಇದೆ. ಇಲ್ಲಿ ಒಂದು ಕೈಗಾರಿಕೆಯನ್ನು ಮಾಡಲು ಅವಕಾಶ ಇದೆ. ಇದರ ಕಡೆಗೆ ಹೆಚ್ಚು ಗಮನ ಕೊಟ್ಟು ಸರಕಾರ ಇಲ್ಲಿ ಕೈಗಾರಿಕೆ ಮಾಡಲು ಯತ್ನ ಮಾಡಬೇಕೆಂದು ಹೇಳುತ್ತೇನೆ. ಮತ್ತು ಈಗಿರುವ ಇಂಪ್ಲಿಮೆಂಟು ಫ್ಯಾಕ್ಟರಿಯನ್ನೂ ಇನ್ನೂ ಹೆಚ್ಚು ಇಂಪ್ರೂವ್ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇನ್ನು ನಮ್ಮ ರಾಜ್ಯದಲ್ಲಿ ಟ್ರಾಕ್ಟರು ಕಾರ್ಖಾನೆ ಮಾಡಬೇಕೆಂದು ಇದ್ದಾರೆ. ಆದರೆ ಟ್ರಾಕ್ಟರು ಫ್ಯಾಕ್ಟರಿಯ ಅವಶ್ಯಕತೆ ಇಲ್ಲ ಎಂದು ನನಗೆ ತೋರುತ್ತೆ. ಮಾನ್ಯ ಮಂತ್ರಿಗಳಾದ ಶ್ರೀ ಕೆ. ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ಇಲ್ಲಿ ಒಂದು ಅನ್‌ಸಿಲಿಯರಿ ಇಂಡಸ್ಟ್ರಿಯನ್ನು ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಬ್ರೂವರೀಸ್ ಬಗ್ಗೆ ಹೇಳಬೇಕಾದರೆ ಹಿಂದೆ ರಾಷ್ಟ್ರಾಧ್ಯಕ್ಷರು ಆಡಳಿತ ನಡೆಸುತ್ತಿದ್ದಾಗ ಅನೇಕ ಖಾಸಗಿಯವರಿಗೆ ಪರ್ಮಿಟ್ಟುಗಳನ್ನು ಕೊಟ್ಟು ಬ್ರೂವರಿಗಳನ್ನು ನಡೆಸುತ್ತಿದ್ದಾರೆ. ಮತ್ತು ಬೀರುಗಳನ್ನು ಮಾರಾಟ ಮಾಡುತ್ತಿದ್ದಾರೆ. ಹರಿಯಾಣದಲ್ಲಿರುವ ಇಂಡಸ್ಟ್ರಿಯಲ್ ಕಾರ್ಪೊರೇಷನ್‌ನವರು ಇದರ ಬಗ್ಗೆ ಒಂದು ಇಂಡಸ್ಟ್ರಿಯನ್ನೇ ಮಾಡಿದ್ದಾರೆ. ಮತ್ತು ಇದರಲ್ಲಿ ಶೇಕಡಾ ಐನೂರರಷ್ಟು ಲಾಭ ಸಿಗುತ್ತೆ ಎಂದು ಗೊತ್ತಾಗಿದೆ. ಯಾವ ಬ್ರೂವರಿಗಳೂ ಈಗ ನಷ್ಟ ದಲ್ಲಿಲ್ಲ. ಎಲ್ಲವೂ ಲಾಭ ಪಡೆಯುತ್ತವೆ. ನಮ್ಮ ರಾಜ್ಯದಲ್ಲಿ ಇಂತಹ ಬ್ರೂವರಿಗಳನ್ನು ನ್ಯಾಷನ ಲೈಸು ಮಾಡಬೇಕು ಎಂದು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳಲು ತಯಾರಿಲ್ಲ. ಇದರ ಬಗ್ಗೆ ಸಾಕಷ್ಟು ಗಮನವನ್ನು ಸರಕಾರ ಕೊಡಬೇಕು ಮತ್ತು ಇದರ ಬಗ್ಗೆ ಸರಕಾರದ ಧೋರಣೆ ಸರಿಯಾಗಿಲ್ಲ.

ಅಡ್ಮಿನಿಸ್ಟ್ರೇಷನ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇಂಡಸ್ಟ್ರಿಯಲ್ ಇಲಾಖೆಯಲ್ಲಿ ಒಬ್ಬರು ಜಾಯಿಂಟು ಡೈರೆಕ್ಟರು ಇದ್ದಾರೆಂದು ಕೇಳುತ್ತೇನೆ. ಮಾನ್ಯ ಸಿದ್ಧವೀರಪ್ಪನವರೂ ಇಲ್ಲದ್ದಾರೆ. ಹಿಂದೆ ಜತ್ತಿ ಸರಕಾರ ಇದ್ದಾಗ ಮಾನ್ಯ ಶ್ರೀ ಸಿದ್ಧವೀರಪ್ಪನವರು ಖಾದಿ ಬೋರ್ಡ್ ಚೇರ್ಮನ್ನರಾಗಿದ್ದಾಗ ಇದೇ ಅಧಿಕಾರಿಗಳು ಆಗ ಅವರಿಗೆ ಸೆಕ್ರಟರಿಗಳಾಗಿ ಕೆಲಸ ಮಾಡಿದ್ದರು ಮತ್ತು ಅವರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಆಗ ಶ್ರೀ ಸಿದ್ಧವೀರಪ್ಪನವರೇ ಸರಕಾರಕ್ಕೆ ಇದರ ಬಗ್ಗೆ ಬರೆದಿದ್ದರು ಎಂದೂ ಕೇಳುತ್ತೇನೆ. ನಾನು ವೈಯ್ಯಕ್ತಿಕವಾಗಿ ಯಾವ ಅಧಿಕಾರಿಗಳ ಮೇಲೂ ಹೇಳಲು ಬಯಸುವುದಿಲ್ಲ. ಆದರೆ ಈ ಇಲಾಖೆಯಲ್ಲಿ ಕೆಲಸ ಮಾಡುವ ಇಂತಹ ಒಬ್ಬರು ಅಧಿಕಾರಿಗಳ ಮೇಲೆ ನಿಂದನೆ ಮಾಡಬೇಕು ಎಂದು ಹೇಳುತ್ತಿಲ್ಲ. ನಾನು ಮೇಲೆ ಹೇಳಿದ

(ಶ್ರೀ ಎಚ್. ಡಿ. ದೇವೇಗೌಡ)

ಅಧಿಕಾರಿಗಳ ಮೇಲೆ ಅನೇಕ ದೂರುಗಳು ಬಂದಿವೆ ಎಂದು ಕೇಳುತ್ತೇನೆ. ಒಟ್ಟಿನಲ್ಲಿ ಈ ಅಧಿಕಾರಿಗಳ ಇತಿಹಾಸ ಚೆನ್ನಾಗಿಲ್ಲ ಎಂದು ಹೇಳಬೇಕಾಗಿದೆ. ಸುಮಾರು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಇವರ ಮೇಲೆ ಬೇಕಾದಷ್ಟು ಆಪಾದನೆಗಳು ಬಂದಿವೆ. ಬಹುಶಃ ಇಂತಹ ಅಧಿಕಾರಿಗಳನ್ನು ಈ ಇಲಾಖೆಯಿಂದ ತೆಗೆದು ಬೇರೆ ಕಡೆ ಹಾಕುವುದು ಸರಿಯಾಗಿರುತ್ತದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಸರಕಾರದ ಇಲಾಖೆಯಲ್ಲಿ ಇಂತಹ ಇಂಪೆಡಿಮೆಂಟ್ಸ್‌ಗಳನ್ನು ತೆಗೆದು ಸರಿಪಡಿಸ ಬೇಕೆಂದು ಇಲ್ಲಿ ತಿಳಿಸುತ್ತೇನೆ. ಈ ಇಲಾಖೆಯಲ್ಲಿ ಇನ್ನೊಂದು ಕೂಗು ಏನಿದೆ ಎಂದರೆ, ಕನ್ನಡಿಗರಿಗೆ ಕೆಲಸ ಸಿಗುತ್ತಿಲ್ಲ ಎಂಬುದು. ಈ ಮಾತನ್ನು ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ನಾವು ಭಾವೈಕ್ಯತೆಯ ಬಗ್ಗೆ ಮಾತನಾಡುತ್ತೇವೆ, ರಾಷ್ಟ್ರೀಯ ಮನೋಭಾವನೆಯ ತತ್ವಗಳನ್ನು ಹೇಳುತ್ತೇವೆ. ಅದು ಏನೇ ಇರಲಿ. ಆದರೆ ಹೊರಗಿನ ರಾಜ್ಯದವರು ನಮ್ಮ ರಾಜ್ಯಕ್ಕೆ ಬಂದು ನಮ್ಮ ರಾಜ್ಯದಲ್ಲಿ ವಾಸ ಮಾಡುವವರ ಕೇರ್‌ಆಫ್ ಅಡ್ರೆಸ್‌ನ್ನು ಕೊಟ್ಟು ತಾವು ಈ ರಾಜ್ಯದವರೇ ಎಂದು ಹೇಳಿಕೊಂಡು ಕೆಲಸಕ್ಕೆ ಸೇರಿಕೊಳ್ಳುವ ಪ್ರವೃತ್ತಿ ಇದೆ. ಎಚ್. ಎಂ. ಟಿ., ಎನ್.ಜಿ.ಇ.ಎಫ್ ಎಚ್. ಎ. ಎಲ್. ಮುಂತಾದ ಕಡೆಗಳಲ್ಲಿ ಕೇರಳ ಮತ್ತು ಇತರೇ ನೆರೆ ರಾಜ್ಯದವರು ಕೆಲಸ ಪಡೆಯುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ. ಇದರಿಂದ ನಮ್ಮ ರಾಜ್ಯದ ಜನರಿಗೆ ಕೆಲಸ ಸಿಗುತ್ತಿಲ್ಲವೆಂಬ ವಾದ ಏನಿದೆ ಅದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಅದಕ್ಕೆ ಸೂಕ್ತ ಪರಿಹಾರ ಕಂಡು ಹಿಡಿಯಬೇಕು. ಹೆಚ್ಚಾಗಿ ನಮ್ಮ ಸ್ಥಳದ ಜನರಿಗೆ ಕೆಲಸ ಸಿಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಈ ಬಗ್ಗೆ ಬಿಗಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

2-30 P.M.

ಶ್ರೀ ಕೆ. ಪ್ರಭಾಕರ (ವರ್ತೂರು).—ತಾವು ಹೇಳುವುದರಲ್ಲಿ ನಿಜಾಂಶವಿದೆ.

ಶ್ರೀ ಎಚ್. ಡಿ. ದೇವೇಗೌಡ.—ನೆರೆ ರಾಜ್ಯದಿಂದ ಬಂದು ಮೈಸೂರಿನವರ ವಿಳಾಸ ಕೊಟ್ಟು ಕೆಲಸ ಪಡೆಯುತ್ತಿದ್ದಾರೆಂದು ಕೇಳಿದ್ದೇನೆ. ಇದರ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಕೇರಳಾ ವಿಶ್ವವಿದ್ಯಾನಿಲಯದವರು ಉದ್ದೇಶ ಪೂರ್ವಕವಾಗಿ ತಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಕಾಂಪಿಟಿಷನ್‌ನಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ನೂರಕ್ಕೆ 90 ರಿಂದ 99 ರವರೆಗೆ ನಂಬರ್‌ಗಳನ್ನು ಕೊಡು ತ್ತಿದ್ದಾರೆ. ಇದರಿಂದ ನಮ್ಮ ರಾಜ್ಯದ ವಿದ್ಯಾರ್ಥಿಗಳು ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದರೂ ಸಹ ಅವರ ಜೊತೆಯಲ್ಲಿ ಕಾಂಪಿಟ್ ಮಾಡುವುದಕ್ಕಾಗುತ್ತಿಲ್ಲ. ಈ ವಿಚಾರವನ್ನು ಸಹ ಮಾನ್ಯ ಮಂತ್ರಿಗಳು ಗಮನದಲ್ಲಿಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಾನು ಮೊದಲೇ ಹೇಳಿದ ಹಾಗೆ ಈ ಇಲಾಖೆಯಲ್ಲಿ ಕೇಡರ್‌ನ್ನು ಜಾಗ್ರತೆ ಮಾಡಬೇಕು. ನಿಧಾನ ಮಾಡುವುದು ಒಳ್ಳೆಯದಲ್ಲ. ಒಳ್ಳೆಒಳ್ಳೆಯ ಅಧಿಕಾರಿಗಳು ಈ ಇಲಾಖೆಯಲ್ಲಿ ಇದ್ದಾರೆ. ಅವರ ಸೇವೆಯನ್ನು ಪಡೆದುಕೊಳ್ಳುವುದಕ್ಕೆ ಸರ್ಕಾರದವರು ಜಾಗ್ರತೆ ಕೇಡರ್‌ನ್ನು ಮಾಡಬೇಕು. ಕೆಲವು ಪ್ರೊಬೇಷನರ್ಸ್ ಅಧಿಕಾರಿಗಳು ಬೇರೆ ರಾಷ್ಟ್ರಕ್ಕೆ ಹೋಗು ತ್ತಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ಅವಕಾಶ ಕೊಡದೆ ಒಳ್ಳೆಯ ಅಧಿಕಾರಿಗಳ ಸೇವೆಯನ್ನು ಪಡೆದುಕೊಂಡು ಈ ಇಲಾಖೆಯನ್ನು ಪ್ರಗತಿದಾಯಕವಾಗಿ ತೆಗೆದುಕೊಂಡು ಹೋಗುವುದಕ್ಕೆ ಮನಸ್ಸು ಮಾಡುವುದು ಸೂಕ್ತ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri S. M. KRISHNA (Minister for Industries).—Madam, I also beg to move on the recommendation of the Governor.........

Sri C. M. ARUMUGAM.—How is it relevant now when the Demand is already moved and the discussion has already commenced on it, and one member has already spoken. Unless it is moved in the beginning, the Hon. Minister cannot move it in-between. It is against the procedure to move it in-between.

MADAM SPEAKER —Only a very small amount is involved in this Demand No 14.

Sri H. SIDDAVEERAPPA (Minister for Health) —Under what rule is the hon. Member raising that objection ?

Sri C. M. ARUMUGHAM.—Under what rule is the Hon Minister moving the Demand now ?

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಆರ್ಮುಗಂ ಅವರು ಎತ್ತಿರತಕ್ಕಂಥ ವಿಷಯ ಸರಿಯಾಗಿದೆ. ಮಾನ್ಯ ಮಂತ್ರಿಗಳು ಒಂದು ಸಾರಿ ಆ ದಿವಸಕ್ಕೆ ಸಂಬಂಧಪಟ್ಟಂತೆ ಕೆಲವು ಬೇಡಿಕೆಗಳನ್ನು ಮಂಡಿಸಿದ ಮೇಲೆ, ಅದರ ಬಗ್ಗೆ ಚರ್ಚೆ ನಡೆಯುತ್ತಿರುವಾಗ ಮಧ್ಯದಲ್ಲಿ ಯಾವುದೋ ಬೇಡಿಕೆ ಬಿಟ್ಟುಹೋಗಿದೆ ಎಂಬುದಾಗಿ ಮತ್ತೆ ಮೂವ್ ಮಾಡುವುದಕ್ಕೆರೂಲ್ಸ್ ಆಫ್ ಪ್ರೊಸೀಜರ್‌ನಲ್ಲಾಗಲೀ, ಕಾನ್‌ಸ್ಟಿಟ್ಯೂಷನ್‌ನಲ್ಲಾಗಲೀ ಅವಕಾಶವಿಲ್ಲ. 1967—1971 ರಮಧ್ಯೆ ಅಸೆಂಬ್ಲಿ ನಡೆಯುತ್ತಿದ್ದಾಗ ಇಂತಹ ಪ್ರಸಂಗ ಬಂದಾಗ, ಒಂದು ಸಲ ಬೇಡಿಕೆಗಳನ್ನು ಮೂವ್ ಮಾಡಿದ ಮೇಲೆ ಅದು ಚರ್ಚೆಯಾಗಿ ಪಾಸಾಗುವವರೆಗೂ ಬೇರೆ ಬೇಡಿಕೆಗಳನ್ನು ಮಧ್ಯದಲ್ಲಿ ತೆಗೆದುಕೊಳ್ಳುವ ಹಾಗಿಲ್ಲ ಎಂದು ತೀರ್ಮಾನವಾಗಿದೆ. ತಾವು ಹಿಂದಿನ ಪ್ರೊಸೀಡಿಂಗ್ಸ್‌ನ್ನು ನೋಡಬಹುದು. ಈಗ ಮೂವ್ ಮಾಡತಕ್ಕಂಥ ಬೇಡಿಕೆ ಕಡಿಮೆ ಹಣದ್ದಾದರೂ ಮಧ್ಯದಲ್ಲಿ ಮೂವ್ ಮಾಡುವುದಕ್ಕೆ ಅವಕಾಶವಿಲ್ಲ ಎಂಬುದಾಗಿ ನಾನು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಅದಕ್ಕೆ ತಾವು ರೂಲಿಂಗ್ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ). —ಮಾನ್ಯ ಅಧ್ಯಕ್ಷಿಣಿಯವರೇ, ರೂಲ್ 161 ರಿಂದ ಹಿಡಿದು 166 ರವರೆಗೆ ಡಿಮ್ಯಾಂಡ್ಸ್ ಫಾರ್ ಗ್ರ್ಯಾಂಟ್ಸ್ ಬಗ್ಗೆ ವಿವರವಾಗಿ ಹೇಳಲಾಗಿದೆ. ಪ್ರೊಸೀಜರ್ ಯಾವ ರೀತಿ ಇರಬೇಕು ಎಂಬ ಬಗ್ಗೆ ಹೇಳಲಾಗಿದೆ. ಈ ರೂಲ್ಸ್‌ಗಳ ಪ್ರಕಾರ ಬಿಟ್ಟು ಹೋದಂಥ ಬೇಡಿಕೆಗಳನ್ನು ಚರ್ಚೆಯ ಮಧ್ಯದಲ್ಲಿ ಮತ್ತೆ ಮೂವ್ ಮಾಡುವುದಕ್ಕೆ ಅವಕಾಶವಿಲ್ಲ. ಈಗ ಒಂದು ಸಲ ಮೂವ್ ಆಗಿ, ಆದರ ಮೇಲೆ ಒಬ್ಬರು ಮಾತನಾಡಿ ಮುಗಿಸಿ ಇನ್ನೊಬ್ಬರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಮಧ್ಯದಲ್ಲಿ ಇನ್ನೊಂದು ಬೇಡಿಕೆಯನ್ನು ಮಂಡನೆ ಮಾಡಿದರೆ ಅದು ರೂಲ್ಸ್ ಆಫ್ ಪ್ರೊಸೀಜರ್‌ಗೆ ವಿರುದ್ಧವಾಗುತ್ತದೆ. ಮಾನ್ಯ ಮಂತ್ರಿಗಳು ಮೊದಲೇ ಮೂವ್ ಮಾಡುವುದಕ್ಕೆ ಮರೆತರು ಎಂದು ಕಾಣುತ್ತದೆ. ಏನೇ ಆಗಲಿ, ಮಧ್ಯದಲ್ಲಿ ಮೂವ್ ಮಾಡಿದರೆ ಅದು ರೂಲ್ಸ್‌ಗೆ ವಿರುದ್ಧ ಎಂಬುದು ಸ್ಪಷ್ಟವಾಗಿರುವುದರಿಂದ ಅದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು. —ಇದಕ್ಕೆ ರೂಲಿಂಗ್ ಕೊಡಬೇಕಾದ್ದು ಏನೂ ಇಲ್ಲ. It is an oversight. If all the hon. Members agree it will be moved ; otherwise it will be taken up afterwards.

SOME HON. MEMBERS.—It may be moved now.

Demand No. 41 (25 SUPPLIES AND DISPOSALS.)

Sri S. M. KRISHNA (Minister for Industries). —Madam, on the recommendation of the Governor, I beg to move :

"That a sum not exceeding Rs. 3, 50, 000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect, Demand No. 14 'Supplies and Disposals".

MADAM SPEAKER.—Motion moved :

"That a sum not exceeding Rs. 3, 50, 000, inclusive of the sum granted 'on account', be granted to the Government to defray the charges which will come in course of payment during the financial year for the period ending 31st day of March 1973, in respect of Demand No. 14 "Supplies and Disposals".

†ಶ್ರೀ ಜಿ. ಪಿ. ನಂಜಯ್ಯನಮಠ (ಗುಳೇದಗುಡ್).—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಾನು ಮೊಟ್ಟಮೊದಲನೆಯದಾಗಿ ನಮ್ಮ ಅರ್ಥಮಂತ್ರಿಗಳು ಈ ಸಭೆಯ ಮುಂದೆ ಇಟ್ಟಂತಹ ಆಯವ್ಯಯ ಪತ್ರಿಕೆ ಏನಿದೆ ಅದರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಿ ನಂತರ ಈ ಬೇಡಿಕೆಯ ಪ್ರಸ್ತಾಪಕ್ಕೆ ಬರುತ್ತೇನೆ. ನಮ್ಮ ಮಾನ್ಯ ಅರ್ಥ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಂತಹ ಆಯವ್ಯಯ ಪತ್ರಿಕೆ ಏನಿದೆ ಅದು ಸಮಾಜವಾದ ರಚನೆಗೆ ಭದ್ರವಾದ ಒಂದು ಬುನಾದಿಯನ್ನು ಹಾಕಿ ಅಂಥಾ ಒಂದು ತತ್ವಕ್ಕೆ ಸಾಕಷ್ಟು ಪುಷ್ಟಿಯನ್ನು ಕೊಡತಕ್ಕಂಥಾದ್ದಾಗಿದೆ. ಆದಕ್ಕಾಗಿ ನಾನು ಅವರಿಗೆ ನನ್ನ ಮೊದಲನೆಯ ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಇವೊತ್ತು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ನಾನು ಹೆಚ್ಚು ಮಾತನಾಡುವ ವಿಷಯ ಎಂದರೆ ಕೈಮಗ್ಗದ ಸಮಸ್ಯೆ. ಇಡೀ ಕರ್ನಾಟಕದಲ್ಲೇ ಅತಿ ಮುಖ್ಯವಾಗಿ ಇರುವಂತಹ ಕೈಮಗ್ಗದ ಸಮಸ್ಯೆಗಳ ಬಗ್ಗೆ ನಾನು ಕೆಲವೊಂದು ವಿಚಾರಗಳನ್ನು ಈ ಸಭೆಯ ಮುಂದೆ ಇಡಲು ಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕದಲ್ಲಿ ಕೃಷಿ ಮೊದಲನೆಯ ಉದ್ಯೋಗ. ಆದರೆ ಕೈಮಗ್ಗ ಎರಡನೆಯ ಉದ್ಯೋಗ ಮತ್ತು ಬಹಳ ಮಹತ್ವದ ಉದ್ಯೋಗ. ಒಕ್ಕಲಿಗರಿಗೆ ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟರೆ ಹಸಿರು ಕ್ರಾಂತಿಯಾಗುತ್ತದೆ. ಹಾಗೆಯೇ ಈ ಕೈಮಗ್ಗದ ಉದ್ಯಮಕ್ಕೂ ಸರ್ಕಾರದವರು ಸಾಕಷ್ಟು ಪ್ರಾಶಸ್ತ್ಯವನ್ನು ಕೊಟ್ಟರೆ ಈ ಒಂದು ಉದ್ಯಮವನ್ನು ಅವಲಂಬಿಸಿಕೊಂಡಿರುವವರಿಗೆ ಹೆಚ್ಚು ಅನುಕೂಲವಾಗುತ್ತದೆ. ಹಿಂದಿನ ಬಡ್ಜೆಟ್ಟಿನಲ್ಲಿ ಕೈಮಗ್ಗದ ಉದ್ದಿಮೆಯ ಬಗ್ಗೆ ಸಾಕಷ್ಟು ಹಣವನ್ನು ಒದಗಿಸಿಲ್ಲ. ಇದು ನಿಜವಾಗಿಯೂ ಅತ್ಯಂತ ವಿಷಾದಕರವಾದ ಸಂಗತಿ. ಇಡೀ ಕರ್ನಾಟಕದಲ್ಲಿ ಸುಮಾರು ಎರಡು ಲಕ್ಷ ಜನ ನೇಕಾರರು ಒಂದು ಉದ್ಯಮವನ್ನು ಅವಲಂಬಿಸಿ ಕೊಂಡಿದ್ದಾರೆ. ಆದರಲ್ಲಿಯೂ ಬಿಜಾಪುರ ಜಿಲ್ಲೆಯಲ್ಲಿರತಕ್ಕ ನೇಕಾರರು ಅವಲಂಬಿಸಿಕೊಂಡಿರತಕ್ಕ ಕೈಮಗ್ಗದ ದಂದೆಯ ವಿಚಾರವಾಗಿ ನಾನು ಕೆಲವೊಂದು ವಿಚಾರವನ್ನು ತಮ್ಮ ಮುಂದಿಡುತ್ತೇನೆ. ಬಿಜಾಪುರ ಜಿಲ್ಲೆಯಲ್ಲಿ ಸುಮಾರು 30 ಸಾವಿರ ಕೈಮಗ್ಗಗಳಿಂದ ನೇಕಾರರು ತಮ್ಮ ಉಪಜೀವನವನ್ನು ನಡೆಸುತ್ತಿದ್ದಾರೆ. ಸುಮಾರು ಎರಡು ಲಕ್ಷ ಜನರು ಈ ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸಿಕೊಂಡು ಜೀವನ ಮಾಡುತ್ತಿದ್ದಾರೆ. ಅವರ ಒಂದು ಕುಟುಂಬದಲ್ಲಿ ಗಂಡ ಹೆಂಡತಿ ಮಕ್ಕಳು, ಎಲ್ಲರೂ ಕೆಲಸ ಮಾಡುತ್ತಿದ್ದಾರೆ. ಆದರೂ ಸಹ ಅವರಿಗೆ ಒಂದು ತಿಂಗಳಿಗೆ ಕೇವಲ 60–70 ರೂಪಾಯಿಗಳು ಮಾತ್ರ ಆದಾಯ ಬರುತ್ತದೆ. ಇದರಿಂದಾಗಿ ಅವರ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲ. ಅವರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅವರಿಗೆ ಬಡತನ ಕ್ಷಯರೋಗ ಮುಂತಾದವು ನರಕಸದೃಶವಾಗಿದೆ. ಆದ್ದರಿಂದ ಈ ಜನರ ದುಸ್ಥಿತಿಯ ಬಗ್ಗೆ ಸರ್ಕಾರದವರು ಸಾಕಷ್ಟು ಗಮನವನ್ನು ಕೊಡಬೇಕು. ಬಿಜಾಪುರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಬರಗಾಲ ಇದ್ದೇ ಇರುತ್ತದೆ. ಇಂಥಾ ಪರಿಸ್ಥಿತಿಯಲ್ಲಿ ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸಿಕೊಂಡಿರತಕ್ಕ ಜನಗಳಿಗೆ ಹೆಚ್ಚಿನ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಕೈಗಾರಿಕಾ ಮಂತ್ರಿಗಳು ನೇಕಾರರ ದಂಧೆಗೆ ಸಾಕಷ್ಟು ಲಕ್ಷ್ಯ ಕೊಟ್ಟು ಆ ಜನಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡಬೇಕು. ನೇಕಾರರು ನಿರುದ್ಯೋಗಿಗಳಲ್ಲ. ಅವರು ಪ್ರತಿದಿವಸ 12 ತಾಸು ದುಡಿಯುತ್ತಿದ್ದರೂ ಕೂಡ 7 ದಿವಸ ದಾಟಿದರೆ 5 ದಿವಸಗಳಿಗೆ ಸಾಕಾಗುವಷ್ಟು ಅನ್ನ ಅವರಿಗೆ ಸಿಕ್ಕುವುದಿಲ್ಲ. ಅವರಿಗೆ ಅಂಥಾ ಒಂದು ಪರಿಸ್ಥಿತಿ ಇದೆ. ಆ ಕಾರಣ ಅವರ ಬಗ್ಗೆ ಸರ್ಕಾರದವರು ಸಾಕಷ್ಟು ಲಕ್ಷ್ಯವನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಇಂಥಾ ಒಂದು ಪರಿಸ್ಥಿತಿಯಲ್ಲಿ ಅವರ ಸುಧಾರಣೆ ಮಾಡುವುದಕ್ಕೆ ಸಂಬಂಧಪಟ್ಟ ಹಾಗೆ ನಾನು ಕೆಲವೊಂದು ಸೂಚನೆಗಳನ್ನು ತಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. ಹಿಂದಿನ ಸರ್ಕಾರ ಇದ್ದಾಗ ಕೇಂದ್ರ ಸರ್ಕಾರದವರು ಇವರ ಸಲುವಾಗಿ ಸೆಸ್ ಫಂಡ್ ಎಂದು ಕೊಡುತ್ತಿದ್ದರು. ಆ ಹಣವನ್ನು ಸರ್ಕಾರದವರು ಕೈಮಗ್ಗದ ಸಲುವಾಗಿ ಖರ್ಚು ಮಾಡದೆ ಬೇರೆ ಉದ್ದಿಮೆಗೆ ಖರ್ಚು ಮಾಡುತ್ತಿದ್ದರು. ಆದ್ದರಿಂದ ಕೈಮಗ್ಗದ ಸಲುವಾಗಿ ಬಂದಂತಹ ಹಣವನ್ನು

ಬೇರೆ ರೀತಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು. ಮತ್ತು ಕೈಮಗ್ಗದ ಬಗ್ಗೆ ಕೆಲವೊಂದು ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಬೇಕು. ಕೇಂದ್ರ ಸರ್ಕಾರದಿಂದ ಬರತಕ್ಕ ಸೆಸ್ ಹಣವನ್ನು ನೇಕಾರ ಸಲುವಾಗಿ ಖರ್ಚು ಮಾಡಬೇಕು ಎಂದು ನಾನು ಹೇಳುತ್ತೇನೆ.

ಎರಡನೆಯದಾಗಿ ರೇಷ್ಮೆ ಕೈಗಾರಿಕೆ, ಮೀನುಗಾರಿಕೆ ಮುಂತಾದ ಇಲಾಖೆಗಳಿಗೆ ಪ್ರತ್ಯೇಕವಾದ ಡೈರೆಕ್ಟೊರೇಟ್ ಇರುವ ಹಾಗೆ ಇದಕ್ಕೂ ಒಂದು ಪ್ರತ್ಯೇಕವಾದ ಡೈರೆಕ್ಟೋರೇಟ್ ಮಾಡಬೇಕು ಮತ್ತು ಈ ಕೈಮಗ್ಗದ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಬ್ಬರು ಮಂತ್ರಿಗಳನ್ನು ನೇಮಿಸಬೇಕು. ಮತ್ತು ಈ ಇಲಾಖೆಗೆ ಸಾಕಷ್ಟು ಹಣವನ್ನು ಒದಗಿಸಬೇಕು. ಇದರ ಮುಖಾಂತರ ನೇಕಾರರ ಅಭಿವೃದ್ಧಿಯನ್ನು ಸಾಧನೆ ಮಾಡಬೇಕು. ಈ ಕೈಮಗ್ಗದ ಉದ್ದಿಮೆಯನ್ನು ಅವಲಂಬಿಸಿಕೊಂಡಿರತಕ್ಕ ಜನ ಈ ಪ್ರಗತಿಪರ ಸರ್ಕಾರದಲ್ಲಿ ನಾವು ಹೆಚ್ಚಿನ ಅನುಕೂಲವನ್ನು ಪಡೆಯುತ್ತೇವೆ ಎನ್ನುವ ಆಶೆಯನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಅವರ ಆಸೆಯನ್ನು ಪೂರೈಸಬೇಕು. ಅವರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕು. ಅವರನ್ನು ಸುಧಾರಣೆ ಮಾಡುವ ವಿಚಾರದಲ್ಲಿ ಎಷ್ಟೋ ಜನ ಮಾನ್ಯ ಸದಸ್ಯರು ಎಷ್ಟೋ ಸೂಚನೆಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ನಾನೂ ಕೂಡ ಯೋಗ್ಯ ಸಲಹೆಗಳನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ. ಇದನ್ನು ಸರ್ಕಾರದವರು ಗಮನಿಸಬೇಕು. ಈ ದಂಧೆಯನ್ನು ಸುಧಾರಿಸಬೇಕಾದರೆ ನಾನು ಒಂದು ಸೂಚನೆಯನ್ನು ಕೊಡುತ್ತೇನೆ. ಅದೇನೆಂದರೆ ನೇಕಾರ ದಂಧೆಯಲ್ಲಿ ತರಬೇತಿಯನ್ನು ಪಡೆದು ಅವರಲ್ಲಿ ತಜ್ಞರಾಗಿರತಕ್ಕ ಆಫೀಸರನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಬೇಕು, ಅದರಲ್ಲಿ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕು, ಆ ಸಮಿತಿಯವರ ಸಲಹೆಯಂತೆ ಬಿಜಾಪುರ ಜಿಲ್ಲೆ ಹಾಗೂ ಇಡೀ ಕರ್ನಾಟಕದಲ್ಲಿರತಕ್ಕ ನೇಕಾರ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕು, ಮತ್ತು ಈ ಕೈಮಗ್ಗದ ಉದ್ದಿಮೆಯನ್ನು ರಕ್ಷಣೆ ಮಾಡಬೇಕು. ಪವರ್‌ಲೂಮ್‌ನಿಂದ ಹ್ಯಾಂಡ್‌ಲೂಮ್ ಉದ್ದಿಮೆಗೆ ಯಾವ ರೀತಿಯ ಪರಿಣಾಮವೂ ಆಗಬಾರದು. ಆ ಸಮಿತಿಯವರು ಕೊಟ್ಟಂತಹ ವರದಿಯನ್ನು ಚಾಚೂ ತಪ್ಪದೆ ಕಾರ್ಯರೂಪಕ್ಕೆ ತರಬೇಕು. ಈ ಸೂಚನೆಯನ್ನು ತಮ್ಮ ಮುಂದೆ ಇಡುವುದಕ್ಕೆ ನಾನು ಬಯಸುತ್ತೇನೆ.

ಈಗ ಕೈಮಗ್ಗದ ಬಟ್ಟೆಗೆ ಒಂದು ಗಜಕ್ಕೆ ಎರಡೂವರೆ ರೂಪಾಯಿ ಬೆಲೆ ಬಾಳುವ ಬಟ್ಟೆಗೆ ಮಾತ್ರ ಸರ್ಕಾರದವರು ರಿಬೇಟ್ ಕೊಡುತ್ತಿದ್ದಾರೆ. ಇವೊತ್ತು ಸಾಧಾರಣವಾದ ಬಟ್ಟೆಗೂ ಕೂಡ ಬಜಾರ್‌ನಲ್ಲಿ ಜಾಸ್ತಿ ಬೆಲೆ ಇದೆ. ಎರಡೂವರೆ ರೂಪಾಯಿಗೆ ಬಿಳಿ ಅರಿವೆ ಕೂಡ ಸಿಕ್ಕುವುದಿಲ್ಲ. ಆದ್ದರಿಂದ ನೇಕಾರರು ನೇಯುವ ಸೀರೆ, ಕಣ ಯಾವುದಕ್ಕೂ ರಿಬೇಟ್ ಸಿಕ್ಕುವುದಿಲ್ಲ. ಆದ್ದರಿಂದ ಸರ್ಕಾರದವರು ನೆಯ್ಗೆ ಬಟ್ಟೆಗೆ ಏನು ರಿಬೇಟ್ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಅದು ಅವರಿಗೆ ಸಿಕ್ಕುತ್ತಾ ಇಲ್ಲ. ನಾನು ಒಂದು ಸೂಚನೆ ಮಾಡುತ್ತೇನೆ. ಈ ರಿಬೇಟನ್ನು ಸರ್ವೇ ಸಾಧಾರಣವಾಗಿ ಎರಡೂವರೆ ರೂಪಾಯಿಗಳಿಗಿಂತ ಇಂದಿನ ಪರಿಸ್ಥಿಯಲ್ಲಿ 5 ರೂಪಾಯಿವರೆಗೆ ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಒಕ್ಕಲಿಗನಿಗೆ ಬಾಳುವುದಕ್ಕೆ ಬದುಕುವುದಕ್ಕೆ ಭೂಮಿ ಎಷ್ಟು ಅವಶ್ಯಕತೆಯೋ, ಅಷ್ಟೇ ಅವಶ್ಯಕತೆ ನೇಕಾರರಿಗೆ ಮನೆಗಳು, ಅವರಿಗೆ ಮನೆ ಇಲ್ಲದಿದ್ದರೆ ಯಾವ ಕೆಲಸವೂ ನಡೆಯುವುದಿಲ್ಲ. ಇಂದಿನ ನಮ್ಮ ಸರ್ಕಾರದವರು ಮನೆ ಇಲ್ಲದವರಿಗೆ ಮನೆಕಟ್ಟಿಸಿಕೊಡುತ್ತೇವೆ, ಸೈಟ್ ಇಲ್ಲದವರಿಗೆ ಸೈಟ್ ಕೊಡಬೇಕೆಂದು ಹೇಳುತ್ತಿದ್ದಾರೆ. ಆದ್ದರಿಂದ ಒಂದು ಉದ್ಯೋಗ ಮಾಡತಕ್ಕವರಿಗೆ ಒಂದು ಮನೆಯಾದರೂ ಬೇಕು. ಆದ್ದರಿಂದ ಅಂತಹ ಮನೆಯನ್ನು ಪ್ರತಿಯೊಬ್ಬ ನೇಕಾರನಿಗೂ ಒದಗಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ನೇಕಾರರಿಗೆ ಅತ್ಯಾವಶ್ಯಕವಾಗಿ ಬೇಕಾಗುವಂತಹ ಕಚ್ಚಾಮಾಲುಗಳ ಬೆಲೆಯೂ ಬಹಳ ಏರುತ್ತಾ ಇದೆ. ಅವರಿಗೆ ಬೇಕಾದಂತಹ ನೂಲು, ರೇಷ್ಮೆ, ಮತ್ತು ರಾಸಾಯನಿಕ ವಸ್ತು ಇವುಗಳಿಗೆ ಹಿಂದೆ 1962 ರಿಂದ 1972ರ ವರೆಗಿನ ಲೆಕ್ಕ ತೆಗೆದುಕೊಂಡರೆ ಈಗ ಹಿಂದಿನ ಧಾರಣೆಗೆ ಎರಡರಷ್ಟು ಧಾರಣೆ ಹೆಚ್ಚಾಗಿದೆ. ಈ ರೀತಿ ಬೆಲೆಗಳು ಹೆಚ್ಚಾದಾಗ ನೇಕಾರನಿಗೆ ಸಿಗುವಂತಹ ಲಾಭಾಂಶ ಬಹಳ ಕಡಿಮೆಯಾಗುತ್ತಿದೆ. ಈ ಕಚ್ಚಾಮಾಲುಗಳ ಬೆಲೆ ಈ ರೀತಿಯಾಗಿ ಹೆಚ್ಚುತ್ತಿರುವುದರಿಂದ ಒಬ್ಬ ನೇಕಾರನು ಮೂರು ನೇಯ್ಗೆ ಮಗ್ಗಗಳನ್ನು ಇಟ್ಟರೂ ಅದರಿಂದ ಕನಿಷ್ಠ ಪಕ್ಷ ಅವನಿಗೆ 15 ರೂಪಾಯಿ ಲಾಭ ಸಿಗಬೇಕಾದರೂ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇವುಗಳನ್ನು ವಿಚಾರ ಮಾಡಿ ಸರ್ಕಾರದವರು ನೇಕಾರನಿಗೆ ದೀರ್ಘಾವಧಿಯ ಸಾಲವನ್ನು ಸೊಸೈಟಿಯ ಮುಖಾಂತರವಾಗಲಿ, ಅಥವಾ ಬ್ಯಾಂಕುಗಳ ಮುಖಾಂತರವಾಗಲಿ ಒದಗಿಸಿಕೊಡಬೇಕು. ಒಬ್ಬನು ಒಂದು ಮಗ್ಗ ಇಟ್ಟುಕೊಂಡಿದ್ದರೆ ಸಾವಿರ ರೂಪಾಯಿ ಸಾಲವನ್ನು ಕೊಡುವಂತಹ ಏರ್ಪಾಡು ಮಾಡಬೇಕು. ಈಗ ನೇಕಾರರು ಎಷ್ಟೋ ಪರಿಷತ್ತುಗಳನ್ನು ಮಾಡಿಕೊಂಡು ಠರಾವು

(ಶ್ರೀ ಜಿ. ಪಿ. ನಂಜಯ್ಯನ ಮಠ)

ಗಳನ್ನು ಮಾಡಿ ಸರ್ಕಾರಕ್ಕೆ ಕಳಿಸಿದ್ದಾರೆ. ಮಂತ್ರಿಯವರು ಇವರಿಗೆ ಆಶ್ವಾಸನೆಯನ್ನು ಸಹ ಕೊಟ್ಟಿದ್ದಾರೆ. ಇವತ್ತು ಒಂದು ಮಣ ಮಾತಿಗಿಂತಲೂ, ಒಂದು ಗುಂಜಿಯಷ್ಟು ಕೃತಿ ಲೇಸು ಎನ್ನುವ ಹಾಗೆ ಸಹಾಯ ಮಾಡಬೇಕಾಗುತ್ತದೆ. ಅದ್ದರಿಂದ ಸರ್ಕಾರದವರು ಈ ನೇಕಾರ ವರ್ಗದ ಜನರಿಗೆ ಒಂದು ವಿಶಿಷ್ಟ ತರಗತಿಯ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ನೇಕಾರ ಜನರು ಮಂತ್ರಿಯವರ ಮನೆಯ ಮುಂದೆ ಸತ್ಯಾಗ್ರಹ ಹೂಡುವುದರಲ್ಲಿದ್ದಾರೆ. ಅವು ಏಕೆ ಮಾಡುತ್ತಾರೆಂದರೆ, ಇವರನ್ನು ಅವಹೇಳನ ಮಾಡುವುದಕ್ಕೆ ಅಲ್ಲ. ತಮ್ಮ ಕೂಗನ್ನು ಇಲ್ಲಿಯವರೆಗೆ ಯಾರೂ ಕೇಳಲಿಲ್ಲ, ಇನ್ನಾದರೂ ಸರ್ಕಾರಕ್ಕೆ ಮುಟ್ಟಲಿ ಎಂದು ಅದನ್ನು ಮಾಡುತ್ತಾರೆ. ಏಕೆಂದರೆ ರೋಗಿ ಆಸ್ಪತ್ರೆಗೆ ಹೋಗದೆ ಡಾಕ್ಟ್ರು ಔಷಧಿ ಕೊಡಲಾರ. ಆದ್ದರಿಂದ ಈ ರಿಬೇಟಿನ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ನೇಕಾರ ಜನರಿಗೆ ಅನುಕೂಲಮಾಡಿ ಅವರ ಇತರ ಸಮಸ್ಯೆಗಳನ್ನೂ ಹೋಗಲಾಡಿಸಬೇಕೆಂದು ಮಾನ್ಯ ಅರ್ಥ ಮಂತ್ರಿಯವರಿಗೂ, ಮತ್ತು ಕೈಗಾರಿಕಾ ಮಂತ್ರಿಯವರಿಗೂ ವಿನಂತಿ ಮಾಡಿಕೊಂಡು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಡಿಮ್ಯಾಂಡ್‌ನ ಮೇಲೆ ಮಾತನಾಡುವುದಕ್ಕೆ ಬಹಳ ಜನರು ಇದ್ದಾರೆ. ಮಂತ್ರಿಗಳಿಗೆ ಉತ್ತರ ಕೊಡಲು ಒಂದೂವರೆ ಗಂಟೆ ಬೇಕಾಗುತ್ತದೆ. ಅಂದಾಗ ಬಾಕಿ ಇದ್ದ ಸಮಯವನ್ನು ಸದಸ್ಯರು ಅಳವಡಿಸಿಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ಎಚ್. ಟಿ. ದೇವೆಗೌಡ.—ನಾವು ಒಂದು ಗಂಟೆ ಹೆಚ್ಚು ಬೇಕಾದರ ಕೂತುಕೊಳ್ಳೋಣ. 7 ಗಂಟೆಯವರಗೆ ಕೂತು ಮುಗಿಸೋಣ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈ ದಿನ ಶ್ರೀಮಾನ್ ಕೃಷ್ಣನವರು ಇಟ್ಟಿರುವಂತಹ ಬೇಡಿಕೆಯನ್ನು ಮತ್ತು ಮಾನ್ಯ ಮುಖ್ಯಮಂತ್ರಿಯವರು ಇಟ್ಟಿರುವಂತಹ ಬೇಡಿಕೆಯನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ನಮ್ಮ ರಾಜ್ಯದಲ್ಲಿ ಕೈಗಾರಿಕೆಯ ಬೆಳವಣಿಗೆಯ ಬಗ್ಗೆ ಎಲ್ಲರಿಗೂ ಗೊತ್ತಿರುವ ಹಾಗೆ ಬೇರೆ ರಾಜ್ಯಗಳಿಗಿಂತ ನಾವು ಬಹಳ ಹಿಂದುಳಿದವರಾಗಿದ್ದೇವೆ. ಇವರ ಬಗೆ ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಟೆಕ್ನಿಕಲ್ ರಿಸರ್ಚ್—ಇವರು ಇಂಡಸ್ಟ್ರಿಯಲ್ ಪ್ರೋಗ್ರೆಸ್ ಫಾರ್ ಥರ್ಡ್ ಪ್ಲಾನ ಆಫ್ ಮೈಸೂರು ಎಂದು ಒಂದು ರಿಪೋರ್ಟ್ ಪಬ್ಲಿಷ್ ಮಾಡಿದ್ದಾರೆ ಅದರಲ್ಲಿ ಮೈಸೂರು ಬಹಳ ಹಿಂದುಳಿದಿವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದು ಹೀಗೆ ಇದೆ:

> "It will be noticed from the above that in 1960–61 Mysore contributed only 4.5 per cent of the industrial income of the country and ranks 8th among the 15 States of the Indian Union. In the matter of Industrial growth also Mysore is sixth in the list."

ಒಟ್ಟಿನಲ್ಲಿ ಇವರ ವರದಿಯ ಪ್ರಕಾರ ಮೈಸೂರು ಕೈಗಾರಿಕೆಗಳಲ್ಲಿ ಬಹಳ ಹಿಂದುಳಿದಿದೆ. ಅದೇ ರೀತಿ ಬೇರೆಯವರು ಸಹ ವರದಿಗಳಲ್ಲಿ ಇದನ್ನೇ ಹೇಳಿದ್ದಾರೆ. ಇದರಿಂದ ನಾವು ಕೈಗಾರಿಕೆಗಳಲ್ಲಿ ಹಿಂದುಳಿದಿದ್ದೇವೆ ಎಂಬುದು ಸ್ಪಷ್ಟ. ನಮ್ಮ ಮಂತ್ರಿಯವರು ಹಿಂದೆ ಪಿ.ಎಸ್.ಪಿ.ಯಲ್ಲಿದ್ದವರು. ಆಗ ಸಮತಾವಾದವನ್ನು ಪೂರ್ತಿಯಾಗಿ ಒಪ್ಪಿಕೊಂಡಂತಹ ಜನ ತಾವು. ಎಲ್ಲ ಮಂತ್ರಿಗಳಿಗಿಂತಲೂ ತಮ್ಮಿಂದ ಹೆಚ್ಚು ಸಮತಾವಾದವನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಈ ದಾರಿಯಲ್ಲಿ ತಾವು ವರ್ತಿಸಿದ್ದೀರೇ ಇಲ್ಲವೇ ಎಂಬುದರ ಬಗ್ಗೆ ನೋಡಬೇಕಾಗಿದೆ.

3-00 P.M.

ನಾವು ಹೆಚ್ಚು ನಿರೀಕ್ಷಣೆಯನ್ನು ತಮ್ಮಿಂದ ಇಟ್ಟುಕೊಂಡಿದ್ದೇವೆ. ಹಾಗೆ ಹೇಳುವಾಗ ನಮ್ಮ ರಾಜ್ಯದಲ್ಲಿ ಕೈಗಾರಿಕೆಯ ಬೆಳವಣಿಗೆ ಹೆಚ್ಚಿಗೆ ಆಗಬೇಕಾದರೆ ಈಗ ಹೊಸ ರಾಜಕೀಯ ಪರಿಸ್ಥಿತಿಯಲ್ಲಿ ಕೆಲವಂದು ವಿಷಯಗಳನ್ನು ನಾವು ಕಣ್ಣಿನಿಂದ ನೋಡುತ್ತಿದ್ದೇವೆ. ಏನು ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೋ ಆ ತತ್ವಗಳ ಆಧಾರದ ಮೇಲೆ ಯಾವುದಾದರೂ ಒಂದು ಧೋರಣೆ ಇರಬೇಕು. ನನಗೆ ತಿಳಿದಂತೆ ಐದು ಮುಖ್ಯಾಂಶಗಳ ಬಗ್ಗೆ ತಾವು ಗಮನ ತೆಗೆದುಕೊಳ್ಳಬೇಕು. ಮೊಟ್ಟಮೊದಲನೆಯದಾಗಿ ಈ ರಾಜ್ಯದಲ್ಲಿರುವ ಸರ್ಕಾರೀ ಕ್ಷೇತ್ರದಲ್ಲಿರತಕ್ಕ ಕೈಗಾರಿಕೆ

ಗಳು ಅಥವಾ ಸರ್ಕಾರವೇ ನಡೆಸುವ ಕೈಗಾರಿಕೆಗಳಿಗೆ ಸರ್ಕಾರವೇ ಹಣ ಕೊಟ್ಟು ಮೆಜಾರಿಟಿ ಷೇರು ಹಾಕಿದಮೇಲೆ ಆ ಕೈಗಾರಿಕೆಗಳನ್ನು ಉಳಿಸಿ ಇನ್ನೂ ಹೆಚ್ಚು ಸರ್ಕಾರೀ ಕ್ಷೇತ್ರದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಮೊದಲನೆಯ ಕರ್ತವ್ಯ. ಇನ್ನು ಎರಡನೆಯದು, ನಮ್ಮ ದೇಶದ ಬಂಡವಾಳಗಾರರು ಅಂದರೆ ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್ಸ್ ಅದರಲ್ಲಿಯೂ ಟಾಟಾ ಹಾಗೂ ಬಿರ್ಲಾ ಅವರು ಸೇರಿಕೊಂಡು ಇಲ್ಲಿನ ಇತರ ಎಲ್ಲಾ ಕೈಗಾರಿಕಾ ರಂಗಗಳಿಗೂ ಆಸ್ಪದ ಕೊಡದಂತೆ ಮಾಡದ ಹಾಗೆ ನೋಡಿಕೊಳ್ಳುವುದು. ಆ ರೀತಿ ಅವರು ಮಾಡದೆ ಇರುವಂತೆ ಅದಕ್ಕೆ ತಡೆ ಹಾಕಬೇಕು. ಮೂರನೆಯದು, ನಮ್ಮ ದೇಶವಲ್ಲಿ ಸಮತಾವಾದಿ ರಾಷ್ಟ್ರಗಳು ಅಂದರೆ, ತಮಗೆ ಗೊತ್ತಿರುವ ಹಾಗೆ ಅಮೇರಿಕಾ, ಜಪಾನ್, ವೆಸ್ಟ್ ಜರ್ಮನಿ ಮುಂತಾದ ವಿದೇಶಗಳಿಂದ ಬರತಕ್ಕ ಸಹಾಯವನ್ನು ನಾವು ಬೇಡವೆಂದು ಹೇಳುವುದಿಲ್ಲವೆಂಬುದು. ಮೈಸೂರು ರಾಜ್ಯದಲ್ಲಿ ಇದು ಮೊದಲಿನಿಂದಲೂ ಬಂದಿರುವ ಅಭ್ಯಾಸ. ಇದು ಯಾರಿಂದಲೋ ಆಗಿದೆ. ಇದು ಟಚ್ ಮಿ ನಾಟ್, ಮುಟ್ಟಿದರೆ ಮುನಿ ಎಂಬಂತಾಗಬಾರದು. ಸಮತಾವಾದೀ ರಾಷ್ಟ್ರಗಳಿಂದ ನಮಗೆ ಬೇಕಾದಷ್ಟು ಸಹಾಯ ಬರಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ನಮ್ಮ ರಾಷ್ಟ್ರವನ್ನು ಸೋವಿಯಟ್ ರಾಷ್ಟ್ರವನ್ನಾಗಿ ಮಾಡಬೇಕು. ಇನ್ನು ನಾಲ್ಕನೆಯದು, ತಮ್ಮ ಆಡಳಿತದಲ್ಲಿ ಯಾವುದೇ ಇಲಾಖೆಯಲ್ಲಿ ಯಾರೇ ಇರಲಿ, ಅವರು ನಮ್ಮ ಸಮತಾವಾದೀ ತತ್ವಗಳಿಗೆ ವಿರೋಧವಾಗಿ ನಡೆದರೆ, ಅಂತಹವರನ್ನು ಕಂಡುಹಿಡಿದು ಅವರಿಗೆ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನವನ್ನು ಕೊಡಬಾರದು. ಅಲ್ಲಿಂದ ಅವರನ್ನು ಕಿತ್ತುಹಾಕಬೇಕು. ಇಲ್ಲದೇ ಹೋದರೆ ಕೈಗಾರಿಕೆಯ ಅಭಿವೃದ್ಧಿ ಕುಂಠಿತವಾಗುತ್ತದೆ. ಐದನೆಯದು ನಮ್ಮ ಸ್ನೇಹಿತರು ಹೇಳಿದ ಹಾಗೆ, ರೀಜನಲ್ ಇಂಬ್ಯಾಲೆನ್ಸನ್ನು ಸ್ಟೇಟ್ ಇಂಬ್ಯಾಲೆನ್ಸ್ ಎಂದು ಹೇಳಬಹುದು. ನಮ್ಮಲ್ಲಿ ಬಹಳ ಜಿಲ್ಲೆಗಳು ಹಿಂದುಳಿದಿವೆ. ಅವುಗಳಲ್ಲಿ ಮುಖ್ಯವಾದುವು—ಬಿಜಾಪುರ, ರಾಯಚೂರು ಮತ್ತು ಬಿದರ. ಈ ತರಹ ಯಾವ್ಯಾವ ಜಿಲ್ಲೆಗಳು ಬಹಳವಾಗಿ ಹಿಂದುಳಿದಿವೆಯೋ ಅಲ್ಲಿ ಹೊಸಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಜವಾಬ್ದಾರಿಯನ್ನು ಆದಷ್ಟು ಜಾಗ್ರತೆಯಾಗಿ ಸರ್ಕಾರ ವಹಿಸಿಕೊಳ್ಳಬೇಕು. ಈ ಐದು ಮುಖ್ಯಾಂಶಗಳ ಆಧಾರದ ಮೇಲೆ ತಮ್ಮ ಧೋರಣೆ ಏನಿದೆಯೋ ಅದನ್ನು ಕಾರ್ಯರೂಪಕ್ಕೆ ಎಂದು ತರುತ್ತೀರಿ ಎಂಬುದನ್ನು ನಾವು ಯೋಚನೆ ಮಾಡಬೇಕು. ಈ ದೃಷ್ಟಿಯಿಂದ ತಮ್ಮ ಕೈಗಾರಿಕೆಯ ನೀತಿ ಸರಿಯಾಗಿದೆಯೇ ಎಂದು ಕೇಳುತ್ತೇನೆ. ಮೆಟ್ಟಮೊದಲನೆಯದಾಗಿ ನೀವು ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳನ್ನು ಬೆಳೆಸುವುದರಲ್ಲಿ ತೀರಾ ಅಸಮರ್ಥರಾಗಿದ್ದೀರಿ. ನಮ್ಮ ರಾಜ್ಯದಲ್ಲಿ ಒಂದು ವಿಶೇಷ ವಿಷಯ ಬಂದಿದೆ. ಸ್ಟೇಟ್ ಸೆಕ್ಟರ್ ಕೈಗಾರಿಕೆಗಳು ಬಹಳ ಇವೆ. ಈ ಒಂದು ಮನೋಭಾವ ಹಿಂದಿನ ಸರ್ಕಾರದ ನೀತಿ. ಈಗಿನ ಸರ್ಕಾರದ ಅಧಿಕಾರಿಗಳ ನೀತಿಯೇ ಬೇರೆ. ಅದರಲ್ಲಿಯೂ ನಿಮ್ಮ ಕೈಗಾರಿಕೆ ಇಲಾಖೆಯಲ್ಲಿ ತ್ರಿಮೂರ್ತಿಗಳು ಇದ್ದಾರೆ. ಒಬ್ಬರು ಕೈಗಾರಿಕೆ ಸೆಕ್ರೆಟರಿ, ಇನ್ನೊಬ್ಬರು ಕಮಿಷನರ್ ಫಾರ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಮತ್ತು ಎಲ್ಲ ಕೈಗಾರಿಕೆಗಳಲ್ಲೂ ಚೇರ್‌ಮನ್ ಅಥವಾ ಡೈರೆಕ್ಟರ್‌ಗಳು ಇದ್ದಾರೆ. ಈ ಮೂರು ಜನರೂ ಸೇರಿ ಅವನ್ನು ಸ್ಯಾಬೊಟೇಜ್ ಮಾಡುತ್ತಿದ್ದಾರೆಂದು ಹೇಳುತ್ತೇನೆ. ಉದಾಹರಣೆಗೆ ತೆಗೆದುಕೊಂಡರೆ, ಮೈಸೂರು ಟೊಬ್ಯಾಕೊ ಕಂಪೆನಿಯಿಂದ ಹೆಚ್ಚಿಗೆ ವರಮಾನ ಬರುತ್ತಿದೆ. ಇದು ಬಹಳ ಮುಂದುವರಿದಿರುವ ಕೈಗಾರಿಕೆ. ಇದನ್ನು ಡಹನೂಕ ಎಂಬ ಪ್ರೈವೇಟ್ ಎಂಟರ್‌ಪ್ರೈಜಸ್ ಕೈಗಾರಿಕೋದ್ಯಮಿಗಳಿಗೆ ಮಾರಿದರೆ ಇನ್ನೂ ಹೆಚ್ಚು ವರಮಾನ ಬರುತ್ತದೆ. ಇನ್ನು ಇಂಡಸ್ಟ್ರಿಯಲ್ ಟೆಸ್ಟಿಂಗ್ ಲ್ಯಾಬೊರೇಟರಿ. ಇದು ಚಿನ್ನದಂಥ ಕೈಗಾರಿಕೆ. ನನ್ನ ಅಭಿಪ್ರಾಯದಲ್ಲಿ ಅಲ್ಲಿ ಬಹಳ ಲಾಭ ಬರುತ್ತಿದೆ. ಅಲ್ಲಿ ಪೆಟ್ರೊ ಕೆಮಿಕಲ್ ಕಾಂಪ್ಲೆಕ್ಸಿನಿಂದ ಫಾರ್ಮ್ಯಾಟಿಕಲ್ ಡ್ರಗ್ಸ್ ಆಗಬೇಕೆಂದು ಹೇಳುತ್ತಿರುವಾಗ, ಅವನ್ನೇನು ಮಾಡಿದಿರಿ ? ಹಿಂದಿನ ಸರ್ಕಾರ ಇವಕ್ಕೆ ತೊಂದರೆ ಮಾಡಿದರು, ಈಗ ಅದನ್ನು ಕಂಟ್ರೋಲ್ ಮಾಡುವವನು ಇನ್ನೊಬ್ಬರು. ಈಗ ಖಾಸಗಿಯಾಗಿ ಮಾನ್ಯ ಶ್ರೀ ಎಂ. ಶ್ರೀನಿವಾಸಾಚಾರ್ಲು ಅಂಡ್ ಕಂಪೆನಿ ಅವರಿಗೋ ಅಥವಾ ಇನ್ನು ಯಾರಿಗೋ ಇದನ್ನು ಮಾರಿದರೆ ಏನು ಪ್ರಯೋಜನ ? ಏಕೆ ಮಾರಬೇಕು ? ಮೂರನೆಯದು, ಮೈಸೂರು ಪೇಪರ್ ಮಿಲ್ಸ್. ತಮಗೆ ಗೊತ್ತಿರುವಹಾಗೆ ಮೈಸೂರು ಚೇಂಬರ್ ಆಫ್ ಕಾಮರ್ಸ್‌ನಲ್ಲಿ ಈ ಬಗ್ಗೆ ತೀರ್ಮಾನಮಾಡಿ ಕಳುಹಿಸಿದ್ದಾರೆ. ಅದು 29-4-72ರಲ್ಲಿ ಫೈನಾನ್ಸಿಯಲ್ ಎಕ್ಸ್‌ಪ್ರೆಸ್‌ನಲ್ಲಿ ಬಂದಿದೆ. ಅದು ಈ ರೀತಿ ಇದೆ. Please do not sell it to a private capitalist. ಇದನ್ನು ಜಾಲನ್ ಅಂಡ್ ಕಂಪೆನಿಯು ಒಬ್ಬ ಮಾರವಾಡಿಗೆ ಮಾರಬೇಕೆಂದು ವ್ಯವಹಾರ ನಡೆಯುತ್ತಿದೆ. ತಾವು ಅವಕ್ಕೆ ಉತ್ತರ ಹೇಳಿ. ಇದನ್ನು ಮಾರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ತಮ್ಮ ಅಭಿಪ್ರಾಯ ಇದರ ಬಗ್ಗೆ ಏನಿದೆಯೋ ನನಗೆ ಗೊತ್ತಿಲ್ಲ. ಮೈಸೂರು ಚೇಂಬರ್ ಆಫ್ ಕಾಮರ್ಸ್‌ನವರು ಇದರ ವಿಷಯದಲ್ಲಿ ತೀರ್ಮಾನಮಾಡಿರುವ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಇನ್ನು ಮಂಡ್ಯಾ ನ್ಯಾಷನಲ್ ಪೇಪರ್‌ಮಿಲ್ಸ್ ವಿಷಯ ಅವರಿಗೆ ಗೊತ್ತಿದೆ. ಇದರಲ್ಲಿ ಕಾರ್ಮಿಕರಿಗೂ ಮೋಸ, ಪ್ರೈವೇಟ್ ಇಂಡಸ್ಟ್ರಿಯಲಿಸ್ಟ್‌ಗೂ ಮೋಸ,

(ಶ್ರೀ ಎಂ. ಎಸ್. ಕೃಷ್ಣನ್)

ಮತ್ತು ಸರ್ಕಾರಕ್ಕೂ ಮೋಸ. ಅವರು ಈ ಸರ್ಕಾರಕ್ಕೆ ಕೊಡಬೇಕಾದುದು ಯಾವ ಹಣವೂ ಇಲ್ಲ. ಸರ್ಕಾರ ಇದಕ್ಕೆ ಗ್ಯಾರಂಟಿ ನಿಂತಿತ್ತು. ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು 1969-70ನೇ ಇಸವಿಯ ಕಮಿಟಿಯ ವರದಿಯಲ್ಲಿ ಅವರ ಬಗ್ಗೆ ಚೆನ್ನಾಗಿ ವರದಿ ಮಾಡಿದ್ದಾರೆ ನನಗೆ ತಿಳಿದು ಬಂದಿರುವ ಪ್ರಕಾರ, ತಾವು ಬಂದಮೇಲೆ ಈಗ ಅವರಿಗೆ ಏನು ಸರ್ಕಾರದವರು ಲೋನ ಕೊಟ್ಟಿದ್ದಾರೋ ಅದನ್ನು ಕ್ಯಾಪಿಟಲ್ಲಾಗಿ ಕನ್‌ವರ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದನ್ನು ಕೈಗಾರಿಕೆಯ ಬೆಳವಣಿಗೆಯ ದೃಷ್ಟಿಯಿಂದ ಕೊಟ್ಟಿದ್ದೀರೆಂದು ತಿಳಿದು ಬಂದಿದೆ. ಅದರ ಬಗ್ಗೆ ನನಗೆ ವಿರೋಧವಿಲ್ಲ. ಆದರೆ ಅದರ ಬಗ್ಗೆ ನೀವು ಹತೋಟಿಯನ್ನು ಎಷ್ಟರಮಟ್ಟಿಗೆ ಇಡುತ್ತಿದ್ದೀರಿ ಎಂಬುದು ಗೊತ್ತಿಲ್ಲ. ನೀವು ಒಳ್ಳೆಯ ರೀತಿಯಲ್ಲಿ ಖಾಸಗೀ ಕ್ಷೇತ್ರಗಳನ್ನು ಬೆಳೆಸುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದೀರೆಂದು ನಾನು ತಿಳಿದಿದ್ದೇನೆ. ಇನ್ನು ಮತ್ತೊಂದು ಪ್ರಶ್ನೆ. ಮೈಸೂರು ಲ್ಯಾಂಪ್ ವರ್ಕ್ಸ್‌ಗೆ ಇನ್ನೊಂದು ಹೆಸರನ್ನು ಕೊಟ್ಟು ಅದು ಜನರಲ್ ಎಲೆಕ್ಟ್ರಿಕ್ ಕಂಪೆನಿ, ಮೈಸೂರು ಎಂಬುದಾಗಿ ಮಾಡಿದ್ದಾರೆ. ಇವತ್ತು ನಮ್ಮ ತತ್ವಕ್ಕೆ ಅದು ಸರಿಯಾಗಿಲ್ಲವೆಂದು ಹೇಳಬೇಕಾಗಿದೆ. ಅದರ ಪ್ರಮಾಣ 49:51 ಇವತ್ತು ನಮ್ಮದು 49, ಅವರದು 51 ಆಗಿದೆ. ವಿದೇಶೀಯರು ಫಾರಿನ್ ಕೊಲ್ಯಾಬೊರೇಷನ್ನಿನಿಂದ ಇಲ್ಲಿಗೆ ಬಂದು ನಮ್ಮ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇವರ ಬಗ್ಗೆ ಯಾವ ಧೋರಣೆಯೂ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ರಾಜ್ಯದಲ್ಲಿ ಈ ಒಂದು ಹವ್ಯಾಸ ಕೂಡಲೇ ತಪ್ಪಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಎರಡನೆಯದು ಮನಾಪಲಿಯ ರೀತ್ಯ ಬಿರ್ಲಾರವರು ಎಲ್ಲರನ್ನೂ ಈಗ ನುಂಗಿಹಾಕಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅವರ ಬಗ್ಗೆ ಪಾರ್ಲಿಮೆಂಟಿನಲ್ಲಿಯೂ ಚರ್ಚೆ ನಡೆದಿದೆ. ಇವತ್ತು ನಮ್ಮ ರಾಜ್ಯದಲ್ಲಿಯೂ ಅಮ್ಮಸಂದ್ರ ಸಿಮೆಂಟ್ ಕಂಪೆನಿ ಹತ್ತಿರ ಕೆಲವು ಫ್ಯಾಕ್ಟರಿಗಳು ಆಗಿವೆ. ಅದರಲ್ಲಿ ಸ್ಟೋನ್ ವೇರ್ ಪೈಪ್ ಫ್ಯಾಕ್ಟರಿಯೂ ಒಂದು.

ಒಬ್ಬ ಸದಸ್ಯರು.—ಅದಕ್ಕೆ ಮಾನ್ಯ ಶ್ರೀ ನಿಜಲಿಂಗಪ್ಪನವರು ಆಶೀರ್ವಾದ ಕೊಟ್ಟಿದ್ದರು.

ಶ್ರೀ ವಿ. ಎನ್. ಪಾಟೀಲ್.—ಅದನ್ನು ಈಗ ಕ್ಯಾನ್ಸಲ್ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ಮನಾಪಲಿಯನ್ನು ಇವತ್ತು ಎನ್‌ಟ್ರೆಂಚ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ಉರುಳಿಸುವುದಕ್ಕೂ ಪ್ರಯತ್ನಮಾಡುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ನಾನು ಮಧ್ಯೆ ಬಂದದ್ದರಿಂದ ಕ್ಷಮಿಸಬೇಕು. ರೆಮ್ಕೋ ಕಂಪೆನಿಯವರ ದೊಡ್ಡತನದಿಂದ ಅದು ಇವತ್ತಿನವರೆಗೂ ನಿಂತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ದಿವಸ ಆ ರೆಂಕೋ ಫ್ಯಾಕ್ಟರಿಯಲ್ಲಿ ತಯಾರಾಗತಕ್ಕ ಎನರ್ಜಿ ಮೀಟರುಗಳನ್ನು ಏಕ್‌ದಂ ಕಡಮೆ ವ್ಯಾಪಾರ ಮಾಡುವಂತೆ ಅವುಗಳ ಬೆಲೆಯನ್ನು ಇಳಿಸಿದರು. ಬೇರೆಯವರು ಯಾರೂ ಕಾಂಪೀಟ್ ಮಾಡದ ರೀತಿಯಲ್ಲಿ ಅದರ ಬೆಲೆಯನ್ನು ಇಳಿಸಿದರು. ಈ ದಿವಸ ಬರೋಡಾದಲ್ಲಿ ಮಹಾರಾಷ್ಟ್ರದಲ್ಲಿ ಈ ಎನರ್ಜಿ ಮೀಟರುಗಳನ್ನು ತಯಾರಿಸಲಾಗುತ್ತದೆ. ಅಲ್ಲಿ ಅವರು ಈ ಎನರ್ಜಿ ಮೀಟರುಗಳ ಬೆಲೆಯನ್ನು 29 ರಿಂದ 43 ವರೆಗೆ ಏರಿಸಿದ್ದಾರೆ. ಅಲ್ಲಿ ಈ ಕೈಗಾರಿಕೆಗಳೆಲ್ಲಾ ಸ್ಟೇಟ್ ಸೆಕ್ಟಾರಿನಲ್ಲಿವೆ. ಆದ್ದರಿಂದ ಈಗ ನಮ್ಮಲ್ಲಿರತಕ್ಕ ಈ ರೆಂಕೋ ಫ್ಯಾಕ್ಟರಿಯನ್ನು ಸರ್ಕಾರದವರೇ ಇಟ್ಟುಕೊಳ್ಳಬೇಕು. ಇದನ್ನು ಪ್ರೈವೇಟ್ ಸೆಕ್ಟಾರಿಗೆ—ಟಾಟಾ, ಬಿರ್ಲಾ ಇಂಥವರಿಗೆ ಬಿಟ್ಟುಕೊಡಬಾರದು. ಆದರೆ ನನಗೆ ತಿಳಿದಿರುವ ಹಾಗೆ ಈ ದಿವಸ ಈ ಎನರ್ಜಿ ಮೀಟರುಗಳನ್ನು ಕೊಳ್ಳತಕ್ಕ ವಿಚಾರದಲ್ಲಿ ನಮ್ಮ ಮಂತ್ರಿಮಂಡಲದಲ್ಲೇ ಭಿನ್ನಾಭಿಪ್ರಾಯಗಳಿರುತ್ತೆಂದು ಹೇಳುತ್ತಿದ್ದಾರೆ. ಕೆಲವು ಜನ ಮಂತ್ರಿಗಳು ರೆಂಕೋ ಮೀಟರುಗಳನ್ನು ಕೊಳ್ಳಬೇಕೆಂದೂ ಈ ಕಂಪೆನಿಗೇ ಪ್ರೋತ್ಸಾಹ ಕೊಡಬೇಕೆಂದರೆ ಇನ್ನು ಕೆಲವು ಮಂತ್ರಿಗಳು ಅದೇಕೆ ಬೇರೆ ಹೊರಗಿನ ಫ್ಯಾಕ್ಟರಿಗಳಿಗೆ ಪ್ರೋತ್ಸಾಹ ಕೊಡಬಾರದೆಂದು ವಾದ ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ. ಅದರ ಈ ವಿಚಾರದಲ್ಲಿ ನಮ್ಮ ಕೈಗಾರಿಕಾ ಮಂತ್ರಿಗಳು ದಿಟ್ಟತನದಿಂದ ನಮ್ಮ ರಾಜ್ಯದ ಕೈಗಾರಿಕೆಗಳಿಗೇ ಉತ್ತೇಜನ ಕೊಡಬೇಕೆಂದೂ, ಈ ರೆಂಕೋ ಫ್ಯಾಕ್ಟರಿಯನ್ನು ಉಳಿಸಬೇಕೆಂದೂ ಇದಕ್ಕೆ ಇನ್ನೂ ಹೆಚ್ಚಿನ ಸಹಾಯ ನೀಡಬೇಕೆಂದೂ ನಾನು ಕೇಳಿಕೊಳ್ಳುತ್ತೇನೆ.

ಇನ್ನು ಈ ಮನಾಪಲೀಸ್‌ಗೇ ನಮ್ಮ ಸರ್ಕಾರ ಹೆಚ್ಚು ಹೆಚ್ಚು ಅವಕಾಶವನ್ನು ಕೊಡುತ್ತಿದೆ. ಈ ದಿವಸ ಆ ಬೆಳಗಾಂನಲ್ಲಿ ಮೂರು ಕೋಟಿ ರೂಪಾಯಿಗಳಲ್ಲಿ ಒಂದು ಸ್ಕೂಟರ್ ಮತ್ತು ತ್ರೀವಿಲರ್ಸ್ ಪ್ರಾಜೆಕ್ಟನ್ನು ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಆದರೆ ಯು. ಪಿ. ನಲ್ಲಿ ಇಂಥದೇ ಒಂದು ಪ್ರಾಜೆಕ್ಟನ್ನು ಅಲ್ಲಿ ಅವರು ಇಟ್ಯಾಲ್ಲಿಯನ್ ಕೊಲ್ಯಾಬೋರೇಷನ್ ಮೂಲಕ ಪಬ್ಲಿಕ್ ಸೆಕ್ಟಾ

ರಿನಲ್ಲಿ ಮಾಡಿದ್ದಾರೆ. ಅವರಿಗೆ ಅಲ್ಲಿ ಹಣ ಹೇಗೆ ಬಂತು ? ಇಲ್ಲಿ ನಮ್ಮ ಸರ್ಕಾರಕ್ಕೆ ಹಣ ಏಕೆ ಇಲ್ಲ ಎನ್ನುತ್ತಿದ್ದಾರೆ ? ಮನಸ್ಸಿದ್ದರೆ ಹಣ ಹೇಗೂ ಸಿಕ್ಕುತ್ತದೆ. ಆದರೆ ನಮ್ಮಲ್ಲಿ ಏನೋ ಒಂದು ಕಾರಣ ಹೇಳಿ ಇಲ್ಲಿನ ಕೈಗಾರಿಕೆಗಳನ್ನು ಬೇರೆಯವರಿಗೆ ಮಾರಾಟ ಮಾಡುತ್ತಿದ್ದಾರೆ. ಹೀಗಾಗೇ ಆ ಟೊಬ್ಯಾಕೋ ಕೈಗಾರಿಕೆಯನ್ನು ಅಂದರೆ ಫ್ಯಾಕ್ಟರಿಯನ್ನು ಅಟೋಬ್ಯಾಕೋ ಕಿಂಗಿಗೆ ಮಾರಾಟ ಮಾಡಿದ್ದಾರೆ. ಈ ನೀತಿ ಬದಲಾವಣೆಯಾಗಬೇಕು.

ಇನ್ನು ಈ ಸಮತಾವಾದ ರಾಷ್ಟ್ರಗಳ ಬಗ್ಗೆ ನಮ್ಮ ಸರ್ಕಾರ ಏನು ಒಂದು ನೀತಿಯನ್ನು ಅನುಸರಿಸುತ್ತ ಬಂದಿದೆ ಅದನ್ನು ಬದಲಾವಣೆ ಮಾಡಬೇಕು. ಅಲ್ಲಿ ಆ ಇಂಡೋ ಸೋವಿಯಟ್ ಟ್ರೀಟಿ ಅದ ಮೇಲೆ ಇಲ್ಲಿ ನಮ್ಮ ತ್ರಿಮೂರ್ತಿಗಳು ನಮ್ಮ ಸರ್ಕಾರ ನಡೆಸತಕ್ಕ ಕೈಗಾರಿಗಳ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸುವುದು ಜಾಸ್ತಿಯಾಗಿದೆ. ಆ ತ್ರಿಮೂರ್ತಿಗಳ ಅಭಿಪ್ರಾಯ ಏನೆಂಬುವನ್ನು ನಾನು ಬಲ್ಲೆ. ಅವರ ಸಿದ್ಧಾಂತ ಯಾವತ್ತೂ ಈ ಪಬ್ಲಿಕ್ ಸೆಕ್ಟಾರಿನಲ್ಲಿರತಕ್ಕ ಕೈಗಾರಿಕೆಗಳಿಗೆ ಸಹಾಯ ಮಾಡಬಾರದು ಮತ್ತು ಎಂದಿದ್ದರೂ ಪ್ರೈವೇಟ್ ಸೆಕ್ಟಾರಿನಲ್ಲಿರತಕ್ಕ ಉದ್ಯಮಗಳಿಗೇ ಸಹಾಯ ಮಾಡಬೇಕು ಎಂಬುದು ಅವರ ಸಿದ್ಧಾಂತವಾಗಿದೆ, ಅದಕ್ಕೆ ಸರಿಯಾಗಿ ಅವರಿಗೆ ಸಹಾಯ ಮಾಡತಕ್ಕ ಅವರ ಸ್ನೇಹಿತರು ಡೆಲ್ಲಿಯಿಂದ ಬೆಂಗಳೂರುವರೆಗೂ ಮತ್ತು ಆ ಬೊಂಬಾಯಿಂದ ಬೆಂಗಳೂರುವರೆಗೂ ಇದ್ದಾರೆ. ಅದುವರಿಂದ ನಮ್ಮ ಸರ್ಕಾರ ಕೂಡಲೆ ಈ ವಿಚಾರದಲ್ಲಿ ತಮ್ಮ ನೀತಿಯನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಹಿಂದೆ ನಡೆದಿದ್ದು ಆಯಿತು ಇನ್ನು ಮುಂದಕ್ಕೆ ತಮ್ಮ ನೀತಿಯನ್ನು ಏಕೆ ಬದಲಾಯಿಸಿ ನಡೆದುಕೊಳ್ಳಬಾರದು ? ನೀವು ಹೊಸಪಾಲಿಸಿಯನ್ನು ಜಾರಿಗೆ ತನ್ನಿ. ಈ ದಿನ ಆ ಕುದುರೆಮುಖದ ಪ್ರಾಜೆಕ್ಟ್ ವಿಷಯ ಮಾನ್ಯ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ. ಹಾಗೆ ಮಂಗಳೂರಲ್ಲೂ ಇದಕ್ಕೆ ಅನುಕೂಲವಾಗುವಂತೆ ಒಳ್ಳೇ ಬಂದರನ್ನು ಮಾಡುತ್ತಿದ್ದಾರೆ ಹೀಗಿದ್ದರೂ ಈ ದಿವಸ ಜಪಾನಿ ಟ್ಯಾಂಕರ್ಸ್‌ಗಳಿಗೆ ಓರನ್ನು ತುಂಬುತ್ತಿದ್ದಾರೆ. ನಾವು ನಮ್ಮಲ್ಲಿ ಸಿಕ್ಕತಕ್ಕ ಓರನ್ನು ಇಲ್ಲಿ ನಮಗೆ ಅಗತ್ಯವಾದ ಸಾಮಾನುಗಳನ್ನು ತಯಾರಿಸಲು ಒಂದು ಪ್ಯಾಲಿಟೈಜೇಷನ್ ಪ್ಲಾಂಟನ್ನು ಏಕೆ ಹಾಕಬಾರದು ? ಇಲ್ಲವೇ ನಮ್ಮಲ್ಲಿಂದ ಹೋಗತಕ್ಕ ಓರನ್ನು ನಮ್ಮ ಷಿಪ್ಪುಗಳಿಗೇ ಏಕೆ ತುಂಬಬಾರದು ? ಅದನ್ನು ಜಪಾನೀ ಷಿಪ್‌ಗೆ ಏಕೆ ಕೊಡಬೇಕು ? ಅವರಿಗೇಕೆ ಅನುಕೂಲ ಮಾಡುತ್ತಿದ್ದಾರೆ ಎಂಬುದೇ ಗೊತ್ತಾಗುತ್ತಿಲ್ಲ.

ಇನ್ನು ಒಂದು ವಿಚಾರ ; ನಾನು ಮೊದಲೇ ಹೇಳಿದ ಹಾಗೆ ಕೈಗಾರಿಕೆಯಲ್ಲಿ ಇಂಬ್ಯಾಲೆನ್ಸ್ ಆಗಿರತಕ್ಕ ಪ್ರದೇಶಗಳ ಬಗ್ಗೆ ನಾನಾಗಲೇ ಹೇಳಿದಂತೆ ಬೀದರ್ ಇತ್ಯಾದಿ ಜಿಲ್ಲೆಗಳಲ್ಲಿ ಸರ್ಕಾರದವರು ಕೈಗಾರಿಕೆಗಳನ್ನು ಕೂಡಲೆ ಸ್ಥಾಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಆದರೆ ನಮ್ಮಲ್ಲಿರತಕ್ಕ ಸಾರ್ವಜನಿಕ ಕೈಗಾರಿಕೆಗಳೇನಿವೆ ಅವು ಈ ದಿವಸ ಲಾಸಿನಲ್ಲಿ ರನ್ ಆಗುತ್ತಿವೆ. ಆ ಕೇಂದ್ರದವರು ಪ್ರೈವೇಟ್ ಕೈಗಾರಿಕೆಗಳ ಮೇಲೆ ಯಾವರೀತಿ ಒಂದು ಹೋಲ್ಡಿಂಗ್ ಇಟ್ಟುಕೊಂಡಿದ್ದಾರೋ ಹಾಗೇ ನಮ್ಮ ಸರ್ಕಾರವೂ ಇಲ್ಲಿ ಇವುಗಳ ಮೇಲೆ ಒಂದು ಸರಿಯಾದ ಹೋಲ್ಡಿಂಗನ್ನು ಇಟ್ಟುಕೊಳ್ಳಬೇಕು. ಹಣಕಾಸಿನ ವಿಚಾರದಲ್ಲಿ ಒಂದು ಎಫಿಸಿಶಿಯೆಂಟಾದ ಅಡ್ಮಿನೇಸ್ಟ್ರನ್ ಮೂಲಕ ಸರಿಯಾದ ಕಂಟ್ರೋಲನ್ನು ಇಟ್ಟುಕೊಂಡು ಕೆಲಸ ಮಾಡಿ ಎಂದು ಹೇಳುತ್ತೇನೆ. ಇನ್ನು ಅದರ ಜೊತೆಗೆ ಸರ್ಕಾರದವರು ಒಂದು ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕಾದ್ದು ಏನೆಂದರೆ ಆಯಾಯ ಕೈಗಾರಿಕೆಗಳಲ್ಲಿ ಕೆಲಸಮಾತಕ್ಕ ಲೇಬರರ್ಸ್ ಪಾರ್ಟಿಸಿಪೇಷನ್ ಇಟ್ಟು ಕೊಂಡು ಕೆಲಸ ಮಾಡುವುದು ಒಳ್ಳೆಯದು. ಅದನ್ನು ಬಿಟ್ಟು ಕೇವಲ ಐ. ಎ. ಎಸ್. ಅಧಿಕಾರಿಗಳನ್ನು ಇಟ್ಟುಕೊಂಡು ಕೆಲಸ ಮಾಡುವುದರಿಂದ ಕಂಪೆನಿಗಳು ಉದ್ಧಾರವಾಗುವುದಿಲ್ಲ. ಅವರಿಂದ ಇವು ಬೆಳೆಯುವುದೂ ಇಲ್ಲ. ಅವರು ಕೈಗಾರಿಕೆಗಳನ್ನು ನಿರ್ನಾಮ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ತಾವು ಲೇಬರ ಸಹಾಯ ತೆಗೆದುಕೊಂಡು ಕೆಲಸ ಮಾಡಿ ಎಂದು ಹೇಳುತ್ತೇನೆ, ಅಷ್ಟೇ ಅಲ್ಲದೆ ಅಲ್ಲಿ ಏನೇನು ಕಮಿಟಿಗಳನ್ನು ಅಟ್ ಡಿಫರೆಂಟ್ ಲೆವಲ್ಸ್ ಮಾಡುತ್ತಾರೋ ಅಂಥಾ ಎಲ್ಲಾ ಕಮಿಟಿಗಳಲ್ಲೂ ಮ್ಯಾನೇಜ್‌ಮೆಂಟಿನವರೂ ಮತ್ತು ಲೇಬರ್‌ಲೀಡರ್ಸ್‌ನ್ನು ಇರುವಂತೆ ಮಾಡಿದರೆ ಯಾವ ತೊಂದರೆ ಇರುವುದಿಲ್ಲ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಯಪ್ರಕಾಶ ಸೆಟ್ಟಿ ಕೊಳ್ಕೆಬೈಲ್ (ಬ್ರಹ್ಮಾವರ).—ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತ ನಾನು ಈ ಬೈಕ್ಯಾಮರಲ್ ಲೆಜಿಸ್ಲೇಚರ್ ಬಗ್ಗೆ ಎರಡು ಮಾತುಗಳನ್ನಾಡುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ರಾಜ್ಯದಲ್ಲಿ ಈ ಬೈಕಾಮರಲ್ ಲೆಜಿಸ್ಲೇಚರ್ ಯಾವಾಗ ಬಂತು, ಹೇಗೆ ಬಂತು, ಏತಕ್ಕೆ ಬಂತು ಇದು ಯಾವ ಕಾಲದಲ್ಲಿ ಬಂತು ಎಂಬುದನ್ನು ಕುರಿತು ಎರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ.

(ಶ್ರೀ ಜಯಪ್ರಕಾಶ ಸೆಟ್ಟಿ ಕೊಳ್ಕೆಬೈಲ್)

ನಮ್ಮ ದೇಶದಲ್ಲಿರತಕ್ಕ ನಮ್ಮ ಸಂವಿಧಾನ ಆ ಇಂಗ್ಲೆಂಡಿನಲ್ಲಿ ಇರತಕ್ಕ ಸಂವಿಧಾನಕ್ಕೆ ಹೊಂದಿಕೊಂಡಿದೆ. ಅಷ್ಟೇ ಏಕೆ ಅದು ಎಲ್ಲಾ ಕಾಮನ್ ವೆಲ್ತ್ ದೇಶಗಳಿಗೂ ಆ ಇಂಗ್ಲೆಂಡಿನ ಸಂವಿಧಾನದ ಸಂಬಂಧವಿದೆ. ಆ ಒಂದು ಕಾರಣದಿಂದ ನಮ್ಮ ರಾಜ್ಯದಲ್ಲೂ ಆ ಇಂಗ್ಲೆಂಡಿನಲ್ಲಿದ್ದ ಹಾಗೆ ಬೈಕಾಮರಲ್ ಲೆಜಿಸ್ಲೇಚರ್ ಸ್ಥಾಪಿತವಾಯಿತು. 1919ನೇ ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಪ್ರಕಾರ ನಮ್ಮಲ್ಲಿ ಇದು ರಚಿತವಾಯಿತು. ನಮ್ಮ ಕಾನ್‌ಸ್ಟಿಟ್ಯೂಷನ್ನು ಫೆಡರಲ್ ರೀತಿಯದಾಗಿರಬೇಕೇ ಅಥವಾ ಪಾರ್ಲಿಯಮೆಂಟರೀ ರೀತಿಯದಾಗಿರಬೇಕೇ ಎಂಬುದನ್ನು ನಿರ್ಧಾರ ಮಾಡಲು ಹಿಂದೆ ನೆಹರೂ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಆಗ್ಗೆ ನೆಹರೂರವರು ನಮಗೆ ಫೆಡರಲ್ ರೀತಿಯ ಕಾನ್‌ಸ್ಟಿಟ್ಯೂಷನ್ನೇ ಆಗತ್ಯವಾದ್ದು, ಅದಕ್ಕಾಗಿ ನಮ್ಮಲ್ಲಿ ಒಂದು ಸೆಕೆಂಡ್ ಛೇಂಬರ್ ಇರಬೇಕೆಂದು ಒಂದು ನಿರ್ಧಾರಕ್ಕೆ ಬಂದು, ಆ ನಂತರ ಈ ಮೇಲ್ಮನೆಗೂ ಮತ್ತು ಕೆಳಮನೆಗೂ ಯಾವ ರೀತಿಯ ಸಂಬಂಧವಿರಬೇಕು, ಇನ್ನು ಇವುಗಳ ಸಂಖ್ಯಾ ಬಲ ಯಾವ ದಾಮಾಷದಲ್ಲಿರಬೇಕು, ಸದಸ್ಯರ ಸಂಖ್ಯೆ ಯಾವ ರೇಷಿಯೋದಲ್ಲಿರಬೇಕು ಎಂಬುದನ್ನೆಲ್ಲಾ ನಿರ್ಧಾರ ಮಾಡಿದರು. ಅದರಂತೆ ಇದು ಜಾರಿಗೆ ಬಂತು. ಆದರೆ ಆ ದಿವಸ ಇದನ್ನು ಏಕೆ ರಚಿಸಬೇಕಾಯಿತು, ಇದರ ಆಗತ್ಯವಾದರೂ ಏನಿತ್ತು ಎಂದರೆ ಕೆಳಮನೆಗೆ ಮೈನಾರಿಟಿ ಮತ್ತು ಬ್ಯಾಕ್‌ವರ್ಡ್ ಕಮ್ಯೂನಿಟೀಸ್ ಜನರೇನಿದ್ದಾರೆ ಅವರಿಗೆ ಸಾರ್ವತ್ರಿಕ ಚುನಾವಣೆಗಳಲ್ಲಿ ನಿಂತು ಗೆದ್ದು ಬರುವುದಕ್ಕೆ ಸಾಧ್ಯವಿಲ್ಲ ಎಂಬ ಒಂದು ಉದ್ದೇಶದಿಂದ ಇದನ್ನು ಆ ದಿವಸ ಚಲಾವಣೆಯಲ್ಲಿ ತರಬೇಕಾಯಿತು.

ಆದರೆ ಈಗ ಇದರ ಅಗತ್ಯವಿಲ್ಲ. ಈಗ ಮೈನಾರಿಟಿ ಕಮ್ಯೂನಿಟಿಗಳು ಮತ್ತು ಹಿಂದುಳಿದ ಪಂಗಡಗಳು ಬೇಕಾದಷ್ಟಿವೆ, ಆ ವಿಚಾರ ಮುಂದೆ ಹೇಳುತ್ತೇನೆ. ಫೆಡರಲ್ ಸ್ಟ್ರಕ್ಚರ್ ಎಂಬ ಕಮಿಟಿ ಆಯಿತು. ಮೇಲು ಮನೆ ವಿಷಯದಲ್ಲಿ ಮತ್ತು ಪ್ರಾತಿನಿಧ್ಯ ಯಾರಿಗೆ ಹೇಗೆ ಕೊಡಬೇಕೆಂಬ ವಿಚಾರದಲ್ಲಿ ವರದಿ ಮಾಡಲು ಅವಕ್ಕೆ ಸೂಚಿಸಲಾಯಿತು. ಆ ಸಮಿತಿಯು ರೆಪ್ರೆಸಂಟೇಷನ್ ವಿಷಯದಲ್ಲಿ ವಾಸ್ತವ ವಿಷಯವನ್ನು ತಿಳಿಸಲಿಲ್ಲ, ಅವರ ಸೂಚನೆಯನ್ನು ತಿರಸ್ಕರಿಸಿ ಸರಕಾರದವರು 1935ರಲ್ಲಿ ಗವರ್ನಮೆಂಟ್ ರೆಪ್ರೆಸೆಂಟೇಷನ್ ಕೊಟ್ಟರು. ನಂತರ ಸಪ್ರೂ ಸಮಿತಿ ರಚನೆಯಾಯಿತು. ಅವೂ ಕೂಡ ರೆಪ್ರಸೆಂಟೇಷನ್ ಮತ್ತು ಮೇಲ್ಮನೆ ವಿಷಯದಲ್ಲಿ ಶಿಫಾರಸು ಮಾಡಲಿಲ್ಲ. ಆದುದರಿಂದ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಲ್ಲಿ ಚರ್ಚೆಯಾಗಿ ಮೇಲ್ಮನೆ ಬೇಕೇ, ಬೇಡವೇ ಪ್ರಾತಿನಿಧ್ಯವೆಷ್ಟಿರಬೇಕು ಎಂಬುದು ನಿರ್ಣಯವಾಗಿ ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯು ಎರಡು ಉಪಸಮಿತಿಗಳನ್ನು ರಚಿಸಿತು. ಒಂದು ಯೂನಿಯನ್ ಕಾನ್‌ಸ್ಟಿಟ್ಯೂಷನ್ ಕಮಿಟಿ, ಮತ್ತೊಂದು ಪ್ರೊವಿನ್‌ಷಿಯಲ್ ಕಾನ್‌ಸ್ಟಿಟ್ಯೂಷನ್ ಕಮಿಟಿ. ಈ ಎರಡೂ ಕೂಡ ಮೇಲ್ಮನೆ ವಿಷಯದಲ್ಲಿ ತುಂಬಾ ವಿಚಾರ ಮಾಡಿ ತಮ್ಮ ವರದಿಯನ್ನು ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಗೆ 1947 ನೆಯ ಜುಲೈ—ಆಗಸ್ಟ್‌ನಲ್ಲಿ ಸಲ್ಲಿಸಿದುವು, ಆ ವಿಷಯ ಸಭೆಯ ಮುಂದೆ ಬಂದು ಚರ್ಚೆಯಾಯಿತು. ಆ ಚರ್ಚೆಯಲ್ಲಿ ಮೇಲ್ಮನೆ ಬೇಕೆಂದು ಕೆಲವರೂ, ಬೇಡವೆಂದು ಕೆಲವರೂ ಟೀಕೆ ಮಾಡಿದರು. ಇದಕ್ಕೆ ಸಂಬಂಧಪಟ್ಟಂತೆ ಶ್ರೀ ಎನ್. ಜಿ. ಐಯ್ಯಂಗಾರ್‌ರವರು ತಮ್ಮ ಅಭಿಪ್ರಾಯವನ್ನು ಈ ರೀತಿ ತಿಳಿಸಿದ್ದಾರೆ.—"ಮೇಲ್ಮನೆ ಅಗತ್ಯವಾಗಿದೆ, ಆದರೆ ಅದು ಸಹಾಯಕಾರಿ ಅಲ್ಲ". ಶ್ರೀ ಎಚ್. ವಿ ಕಾಮತ್‌ರವರು ಮೇಲ್ಮನೆ ವಿಷಯದಲ್ಲಿ ಈ ರೀತಿ ಅಭಿಪ್ರಾಯಪಟ್ಟರು.—The upper house in Delhi is exceptional. But such houses in States are pernicious

ಕೇಂದ್ರದ ಮೇಲ್ಮನೆ ವಿಷಯದಲ್ಲಿ ಹೆಚ್ಚು ಟೀಕೆ ಬರಲಿಲ್ಲ. ಆದರೆ ರಾಜ್ಯದ ಮೇಲ್ಮನೆ ವಿಷಯದಲ್ಲಿ ಟೀಕೆ ತುಂಬ ಬಂದಿದೆ. ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿ ಮೇಲ್ಮನೆ ನಮ್ಮ ದೇಶಕ್ಕೆ ಅಗತ್ಯವೆಂದು ಅಭಿಪ್ರಾಯಪಟ್ಟಿದೆ. ಇದಕ್ಕೆ ಮುಂಚೆ ಬಂಗಾಳ, ಯುನೈಟೆಡ್ ಪ್ರಾವಿನ್ಸಸ್ ಮತ್ತು ಬಿಹಾರದಲ್ಲಿ ಈ ಮೂರು ರಾಜ್ಯಗಳಲ್ಲಿ ರೌಂಡ್ ಟೇಬಲ್ ಕಾನ್‌ಫರೆನ್ಸಿನ ಪ್ರಕಾರ ಮೇಲ್ಮನೆ ಜಾರಿಗೆ ಬಂತು. ಅದೇ ಪ್ರಕಾರ ಮದ್ರಾಸು ಮತ್ತು ಬೊಂಬಾಯಿಗಳಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿ ಅಭಿಪ್ರಾಯದ ಪ್ರಕಾರ ಮೇಲ್ಮನೆ ರಚಿಸಲ್ಪಟ್ಟಿತು ಪಂಜಾಬ್ ರಾಜ್ಯದಲ್ಲಿ 1922 ರಲ್ಲಿ ಮೇಲ್ಮನೆ ಬೇಡ, ಅದರಿಂದ ಪ್ರಯೋಜನವಿಲ್ಲ ಎಂದು ಆಗಿನ ಕಾಲದಲ್ಲಿ ನಿಶ್ಚಯವಾಯಿತು, ಆದರೆ ಸ್ವಲ್ಪ ಸಮಯದ ನಂತರ ಮೇಲ್ಮನೆ ಅಲ್ಲಿ ಆಯಿತು. ಆದರೆ 1969 ರಲ್ಲಿ ರದ್ದುಮಾಡಿದರು. ಸಿಂಧ್ ಮತ್ತು ಸೆಂಟ್ರಲ್ ಇಂಡಿಯಾದಲ್ಲಿ ಮೇಲ್ಮನೆಯನ್ನು ರಚಿಸುವ ವಿಷಯವನ್ನು ತಿರಸ್ಕರಿಸಲಾಯಿತು. ಅಸ್ಸಾಂನಲ್ಲಿ ಎರಡನೆ ಮನೆ ಆಗಿದೆ. ಏಳು ರಾಜ್ಯಗಳಲ್ಲಿ ಮೇಲ್ಮನೆ ಇದೆ. ಉತ್ತರ ಪ್ರದೇಶ, ಬಿಹಾರ, ಮಹಾರಾಷ್ಟ್ರ, ಮೈಸೂರು, ಆಂಧ್ರ, ಜಮ್ಮು—ಕಾಶ್ಮೀರ, ತಮಿಳುನಾಡು ಈ ಪ್ರಾಂತಗಳಲ್ಲಿ ಮೇಲ್ಮನೆಯಿದೆ. ಬಾಕಿ ರಾಜ್ಯಗಳಲ್ಲಿ ಇಲ್ಲ. ನಮ್ಮ ರಾಜ್ಯದಲ್ಲಿ ಸೆಕೆಂಡ್ ಛೇಂಬರ್

ಕಾನ್‌ಸ್ಟಿಟ್ಯೂಷನ್ ಸೆವೆಂತ್ ಅಮೆಂಡ್‌ಮೆಂಟ್ ಆಕ್ಟ್ 1956 ಇದರ ಪ್ರಕಾರ ಮೇಲ್ಮನೆಯಾಗಿದೆ. 1956 ರಲ್ಲಿ ಮೈಸೂರು ರಾಜ್ಯ ಎ ಸ್ಟೇಟ್ ಆಯಿತು. ಅದಕ್ಕೆ ಮುಂಚೆ ಬಿ ಸ್ಟೇಟ್ ಆಗಿತ್ತು. ಆಗಲೂ ಮೇಲ್ಮನೆಯಿತ್ತು.

ಮೇಲ್ಮನೆ ಉದ್ದೇಶವೇನು, ಆದರಿಂದ ಪ್ರಯೋಜನವೇನು ಎಂಬುದನ್ನು ಹೇಳುತ್ತೇನೆ. ಮುಂಚೆ ವೆಸ್ಟ್ ಬೆಂಗಾಲ್ ಮತ್ತು ಪಂಜಾಬು ಈ ಎರಡು ರಾಜ್ಯಗಳಲ್ಲಿ ಪ್ರಜಾಪ್ರಭುತ್ವದಲ್ಲಿ ಪಾರ್ಲಿಮೆಂಟರಿ ಸಿಸ್ಟಂ ಆಫ್ ಗವರ್ನಮೆಂಟ್‌ನಲ್ಲಿ ಮೇಲ್ಮನೆ ಅಗತ್ಯವಿಲ್ಲ ಎಂದು 1968 ಅಥವಾ 1969 ರಲ್ಲಿ ವಿಧಾನಸಭೆಯಲ್ಲಿ ನಿರ್ಣಯಮಾಡಿ ಪಾರ್ಲಿಮೆಂಟಿನಲ್ಲಿ ಒಪ್ಪಿಗೆಯಾಗಿದೆ. ಈಗ ಈ ಎರಡು ರಾಜ್ಯಗಳಲ್ಲಿ ಅದಿಲ್ಲ. ಬಿಹಾರಿನಲ್ಲಿ ದರೋಗರಾಯ ಮಂತ್ರಿಮಂಡಲ ಇರುವಾಗ ವಿಧಾನ ಪರಿಷತ್ತು ಬೇಡ, ಮೇಲ್ಮನೆ ರದ್ದುಮಾಡಬೇಕು ಎಂದು ವಿಧಾನಸಭೆ ನಿರ್ಣಯಮಾಡಿ ಪಾರ್ಲಿಮೆಂಟಿಗೆ ಕಳಿಸಿದಾಗ ಆಗ ಗೋವಿಂದಮೆನನ್‌ರವರು ಲಾ ಸಚಿವರಾಗಿದ್ದರು. ಅವರು ಅದಕ್ಕೆ ಕೆಲವು ಕಾರಣಗಳಿಂದ ಅವಕಾಶ ಕೊಡಲಿಲ್ಲ. ಅದು ಇನ್ನೂ ಪೆಂಡಿಂಗ್ ಇದೆ. ಗುಜರಾತಿನಲ್ಲಿ ಸಹ ಒಂದೇ ಮನೆಯಿದೆ, ಅಲ್ಲಿ ಮೇಲ್ಮನೆ ಬಗ್ಗೆ ಒಂದು ಬಿಲ್ಲನ್ನು ಪಾಸ್ ಮಾಡಿದರು, ಅದು ಪುನರಾಲೋಚನೆಯಲ್ಲಿದೆ. ನಮ್ಮ ಸಂವಿಧಾನದ ಆರ್ಟಿಕಲ್ 198 ರಲ್ಲಿ ಅಧಿಕಾರವಿದೆ. ಆ ಆರ್ಟಿಕಲ್ ಪ್ರಕಾರ ಮೇಲ್ಮನೆಗೆ ಯಾವ ವಿಧವಾದ ಅಧಿಕಾರವೂ ಇಲ್ಲ. ಅದಕ್ಕೆ ಕಳಿಸುವ ಬಿಲ್ಲಿನಲ್ಲಿ ಒಂದು ಅಕ್ಷರವನ್ನೂ ಬದಲಾಯಿಸುವುದಕ್ಕಾಗುವುದಿಲ್ಲ. ಮೇಲ್ಮನೆ 4 ತಿಂಗಳು ಬಿಲ್ಲನ್ನಿಟ್ಟುಕೊಂಡು ವಾಪಸು ಕಳಿಸಬಹುದು. ನಾವು ಕಳಿಸುವ ಬಿಲ್ಲನ್ನು ಅದು ಸ್ವೀಕರಿಸಬೇಕಾದ ಅಗತ್ಯವಿಲ್ಲ. ತಿದ್ದುಪಡಿ ಮಾಡಿ ಕಳಿಸಬಹುದು, ಅದನ್ನು ನಾವು ಸ್ವೀಕರಿಸಬೇಕಾಗಿಲ್ಲ. ನಾವು ಕಳಿಸುವ ಬಿಲ್ಲನ್ನು ತಿರಸ್ಕಾರ ಮಾಡಿ ಅಥವ ತಿದ್ದುಪಡಿ ಮಾಡಿ ಹಿಂದಕ್ಕೆ ಕಳಿಸಬಹುದು. ಒಂದೇ ತಿಂಗಳಲ್ಲಿ ಹಿಂದಕ್ಕೆ ಕಳಿಸಬೇಕಾಗಿಲ್ಲ, 4 ತಿಂಗಳ ಅವಕಾಶವಿದೆ. ಅವಸರದಲ್ಲಿ ಕೆಳಗಿನ ಮನೆ ಬಿಲ್ ಪಾಸ್ ಮಾಡಬಾರದು ಎಂದು ಸ್ಪೀಡ್ ಚೆಕ್ ಮಾಡುವುದು. ನಾವು ಪಾಸು ಮಾಡಿರುವ ಬಿಲ್ಲನ್ನು ಮೇಲ್ಮನೆ ಮೂಲಕ ರಾಜ್ಯಪಾಲರಿಗೆ ಕಳಿಸುವರು ಆದುದರಿಂದ ಮೇಲ್ಮನೆ ಅಗತ್ಯವಿಲ್ಲ. ಕೇಂದ್ರದಲ್ಲಾದರೆ ರಾಜ್ಯಸಭೆ ಮತ್ತು ಲೋಕಸಭೆಗಳ ಜಾಯಿಂಟ್ ಸೆಷನ್ ಆಗುವುದು. ಇಲ್ಲಿ ನಮಗೆ ಅವಕಾಶವಿಲ್ಲ. ರಾಜ್ಯದ ಮೇಲ್ಮನೆಗೆ ಯಾವ ರೀತಿಯ ಅಧಿಕಾರವೂ ಇಲ್ಲ ಎಂದು ಸೂಚನೆ ಮಾಡುತ್ತೇನೆ.

ಇದಲ್ಲದೆ ಪ್ರಜಾಪ್ರಭುತ್ವದಲ್ಲಿ ಒಂದು ಬಿಲ್ಲು ಕಾನೂನಾಗಬೇಕಾದರೆ ಅಥವ ಸರಕಾರ ಸಾಗಬೇಕಾದರೆ ಮೇಲ್ಮನೆಗಿಂತಲೂ ನಮಗೆ ವಿರೋಧ ಪಕ್ಷದ ಅಗತ್ಯವಿದೆ. ಆ ಪಕ್ಷ ನಮ್ಮ ಲೋಪ ದೋಷಗಳನ್ನು ತೋರಿಸಿ ಎಚ್ಚರಿಸುವುದು.

[MR DEPUTY SPEAKER in the chair]

ಇಲ್ಲಿರುವ ವಿರೋಧ ಪಕ್ಷದ ಸಂಖ್ಯೆ ಕಡಮೆಯಾದರೂ ಈಗಿರುವ ಆ ಪಕ್ಷದವರು ಬುದ್ಧಿವಂತರು. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಲೋಪದೋಷಗಳಿರುವ ಬಿಲ್ಲನ್ನು ಸರಿಪಡಿಸುವ ಜವಾಬ್ದಾರಿ ವಿರೋಧ ಪಕ್ಷಕ್ಕೆ ಸೇರಿದೆ. ವಿರೋಧಪಕ್ಷದ ನಾಯಕರಿಗೆ ಎಲ್ಲಾ ರೀತಿಯಿಂದಲೂ ಒಳ್ಳೆಯ ಸೌಲತ್ತನ್ನು ಕೊಡಬೇಕು. ಇಂಗ್ಲೆಂಡಿನಲ್ಲಿ ಪ್ರಧಾನಿಗಳಿಗೆ ಕೊಡುವ ಸೌಲತ್ತನ್ನು ಅವರಿಗೆ ಕೊಡುವರು ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಮನೆ, ಟೆಲಿಫೋನ್ ಮುಂತಾದ ಎಲ್ಲಾ ಸೌಲತ್ತನ್ನು ಅವರಿಗೆ ಕೊಡಬೇಕು. ಇದಕ್ಕೆ ಈ ಅಧಿವೇಶನದಲ್ಲೇ ಬಿಲ್ಲನ್ನು ತರಬೇಕು ಎಂದು ಕೇಳಿಕೊಳ್ಳುತ್ತೇನೆ.

ನಾವು ಇಲ್ಲಿ ಪಾಸು ಮಾಡಿದ ಬಿಲ್ಲನ್ನು ಹೈಕೋರ್ಟು ಮತ್ತು ಸುಪ್ರೀಂ ಕೋರ್ಟು ಇಂಟರ್‌ಪ್ರಿಟ್ ಮಾಡುವುವು. ಮೇಲ್ಮನೆ ವಿಷಯದಲ್ಲಿ ಕೆಲವು ಕಾನ್‌ಸ್ಟಿಟ್ಯೂಷನ್ ಎಕ್ಸ್‌ಪರ್ಟ್ಸ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶ್ರೀ ಕೆ. ಸಂತಾನಂರವರು ರಾಜ್ಯಸಭೆಯ ಸದಸ್ಯರಾಗಿದ್ದಾಗ ಮೇಲ್ಮನೆ ವಿಷಯದಲ್ಲಿ ಹೀಗೆ ಹೇಳಿದ್ದಾರೆ :

"It is unfortunate that the Central Government and the State Governments should treat consideration and discussion of the Bill as a mere formality." ಮಿಯರ್ ಫಾರ್ಮಾಲಿಟಿ ಹೆಚ್ಚು ಕಡಿಮೆ ಮಾಡುವ ಅಧಿಕಾರವಿಲ್ಲ.

(ಶ್ರೀ ಜಯಪ್ರಕಾಶ ಶೆಟ್ಟಿ ಕೊಳ್ಕೆಬೈಲ್)

3-30 P.M.

Mr. Rao has stated: "It needs careful watching and the question of its total abolition should be carefully considered." ಶ್ರೀ ರಾವ್ ಹೇಳಿದ ರೀತಿಯಲ್ಲಿ ನಮ್ಮ ಸರ್ಕಾರ ಕನ್ಸಿಡರ್ ಮಾಡಬೇಕು ಎಂದು ಹೇಳುತ್ತೇನೆ.

Mr. Shukla: said. "The House of Lords has been almost divested of its legislative powers—general and financial powers. This can have no place in Democracy. ಆದುದರಿಂದ ನಮ್ಮ ಕಾನ್‌ಸ್ಟಿಟ್ಯೂಷನ್‌ನಲ್ಲಿ ಮೇಲ್ಮನೆಯನ್ನು ಅಬಾಲಿಷ್ ಮಾಡುವುದಕ್ಕೆ ಆರ್ಟಿಕಲ್ 169ರ ಪ್ರಕಾರ ಕಾನೂನು ಇದೆ. ಪ್ರಜಾಪ್ರಭುತ್ವದಲ್ಲಿ ಈ ತರಹ ಬಿಲ್ಲನ್ನು ತಂದು ಮೇಲ್ಮನೆಯನ್ನು ತೆಗೆಯಬಹುದು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಒಂದುವೇಳೆ ಮೇಲ್ಮನೆ ಇರಬೇಕು ಎಂದು ಹೇಳುವುದಾದರೆ ಹೆಚ್ಚಿನ ಅಧಿಕಾರ ಕೊಡಿ. ಒಂದು 'ವೀಟೋ ಪವರ್'' ಕೊಡಿ. ಹಾಗೇನಾದರೂ ಕೊಡದೇ ಇದ್ದ ಪಕ್ಷದಲ್ಲಿ ಆರ್ಟಿಕಲ್ 169ರ ಪ್ರಕಾರ ತೆಗೆಯಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ನ್ಯಾಯ ವಿಚಾರಣೆ ಮತ್ತು ತೀರ್ಪು ನೀಡತಕ್ಕಂಥ ಬಗ್ಗೆ ದೂರುಗಳು ಬೇಕಾದಷ್ಟು ಬರುತ್ತದೆ. ಈ ವಿಚಾರದಲ್ಲಿ ತೀರ್ಪು ನಿಧಾನವಾಗಿ ಬಂದರೆ ಇದರಿಂದ ಬಡ ಕಕ್ಷಿಗಾರರಿಗೆ ತುಂಬಾ ಕಷ್ಟವಾಗುತ್ತದೆ. ಆದುದರಿಂದ ಈ ನಿಧಾನವಾಗುವ ಸಮಸ್ಯೆಯನ್ನು ನಮ್ಮ ರಾಜ್ಯ ಸರ್ಕಾರ ಪರಿಶೀಲನೆ ಮಾಡಬೇಕು. ಇದಕ್ಕೆ ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ. ಈ ನಿಧಾನ ಸಮಸ್ಯೆ ಬಗೆ ಹರಿಯಲಿಕ್ಕೆ ಗಜೇಂದ್ರಗಡ್ಕರ್ ಆಯೋಗದ ಸಲಹೆಗಳನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಜಾರಿಗೆ ತಂದು ಪೆಂಡಿಂಗ್ ಇರುವ ಕೇಸುಗಳನ್ನು ಆದಷ್ಟು ಬೇಗ ಡಿಸ್‌ಪೋಸಲ್ ಮಾಡುವ ಹಾಗೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದಲ್ಲದೆ ಇನ್ನು ಸೌತ್ ಕೆನರಾ ಜಿಲ್ಲೆಯಲ್ಲಿ ತೀರ್ಪು ಕೊಡಬೇಕಾದ ಕೇಸುಗಳು ಬಹಳ ಜಾಸ್ತಿ ಇರುವುದರಿಂದ ಅದನ್ನು ಕಡಿಮೆ ಮಾಡಲಿಕ್ಕೆ 5 ಅಡಿಷನಲ್ ಮುನ್ಸೀಫ್ ಕೋರ್ಟ್ ಅಗತ್ಯ ಉಂಟು. ಇದರಲ್ಲಿ ಉಡುಪಿಯಲ್ಲಿ ಬಹಳ ಅಗತ್ಯ ಇರುವುದರಿಂದ ಅವರ ಬಗ್ಗೆ ಹೈಕೋರ್ಟ್‌ನವರ ಸಲಹೆ ತೆಗೆದುಕೊಂಡು ಕೂಡಲೇ ಒಂದು ಮುನ್ಸೀಫ್ ಕೋರ್ಟನ್ನು ಸ್ಯಾಂಕ್ಷನ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಉಪಾಧ್ಯಕ್ಷರೇ ತಮ್ಮ ಬಗ್ಗೆ ನನಗೆ ಅಪಾರ ಗೌರವವಿದೆ. ತಾವು ನನ್ನ ಮಾತನ್ನು ಕೇಳಬೇಕು. ವಿರೋಧ ಪಕ್ಷದವರು ಈ ಸಭೆಯಲ್ಲಿ ಭಾಗವಹಿಸಬೇಕೇ ಬೇಡವೇ? ಭಾಷಣ ಮಾಡುವುದು ಬೇಡ ಎಂದು ಹೇಳಿಬಿಟ್ಟರೆ ನಾವುಯಾರೂ ಬರುವುದಿಲ್ಲ. ಹೊರಗೇ ಇದ್ದುಕೊಂಡು 25 ರೂಪಾಯಿ ತೆಗೆದುಕೊಂಡು ಹೋಗುತ್ತೇವೆ. ನನಗೆ ಭಾಷಣ ಮಾಡಲು ಒಂದು ಗಂಟೆ ಹಿಂದೆಯೇ ಅವಕಾಶ ಸಿಕ್ಕಬೇಕಾಗಿತ್ತು, ಇದುವರೆಗೂ ಸಿಕ್ಕಲಿಲ್ಲ. ಇದರಲ್ಲಿ ಏನೋ ರಾಜಕೀಯ ಇದೆ ಎಂದು ನನಗೆ ಅನಿಸುತ್ತದೆ. ಆಡಳಿತ ಕಾಂಗ್ರೆಸ್ಸಿನವರು ಅವರ ಪಾರ್ಟಿಯಲ್ಲಿ ಮಾತನಾಡಬಹುದು. ಇಲ್ಲೂ ಅವರ ಪಾರ್ಟಿಯವರೇ ಭಾಷಣ ಮಾಡುವುದಾದರೆ ನಿಮ್ಮ ಉದ್ದೇಶ ಏನು ಇದೆ? ನಮ್ಮನ್ನು ಕೈ ಕಟ್ಟಿಬಿಟ್ಟಿದ್ದೀರಿ. ನಿಮಗೆ ನಾವು ಏನು ಆಡಳಿತ ಸೂತ್ರವನ್ನು ಕೊಟ್ಟಿದ್ದೇವೋ, ಏನು ಆಡಳಿತ ಜವಾಬ್ದಾರಿಯನ್ನು ವಹಿಸಿದ್ದೇವೋ ಅದರ ನಿರ್ವಹಣೆಯಲ್ಲಿ ನಿಮ್ಮ ಲೋಪದೋಷಗಳು ಏನು ಇರುತ್ತದೆ ಆ ಲೋಪದೋಷಗಳನ್ನು ತಿದ್ದತಕ್ಕಂಥ ಅಧಿಕಾರ ವಿರೋಧ ಪಕ್ಷದವರಿಗೆ ಇದೆ. ಅದು ಬಿಟ್ಟು "ಜನ ನಮ್ಮನ್ನು ಕಳುಹಿಸಿ ಕೊಟ್ಟಿದ್ದಾರೆ, ನಮಗೆ 165 ಜನರ ಬೆಂಬಲ ಇದೆ, ನಾವು ಭಾರಿ ಸಂಖ್ಯೆಯಲ್ಲಿದ್ದೇವೆ" ಎಂದು ತಿಳಿದುಕೊಂಡು ವಿರೋಧ ಪಕ್ಷದವರನ್ನು ತಳ್ಳಿ ಹಾಕುವಂಥ ನೀತಿ ಅನುಸರಿಸಬಾರದು. ನೀವು ನಮ್ಮನ್ನು ಸದಸ್ಯರು ಅಂತ ಪರಿಗಣನೆ ಮಾಡುತ್ತೀರೋ ಇಲ್ಲವೋ? ಸಂಜೆ 5¼ ಗಂಟೆಯವರೆಗೂ ಅವರೇ ಮಾತನಾಡಿಬಿಟ್ಟು, ಅನಂತರ 5-5 ನಿಮಿಷ ಮಾತನಾಡಿ ಎಂದು ನಮಗೆ ಹೇಳಿಬಿಟ್ಟು ನಮ್ಮನ್ನು ತುಳಿಯುವಂಥ ನೀತಿ ಸರಿಯಿಲ್ಲ. 3 ಜನ ಮಂತ್ರಿಗಳಿಗೆ 4 ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ. ಅವರು ಉದ್ದುದ್ದವಾದ ಭಾಷಣ ಮಾಡುವುದಕ್ಕೆ ಗಂಟೆ ಗಂಟೆಗೆ ನೀರನ್ನು ಕುಡಿದುಕೊಂಡು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರಿ. ಆಡಳಿತ ಪಕ್ಷದವರಿಗೆ ಮಾತನಾಡು

ವುದಕ್ಕೆ ಹೆಚ್ಚು ಕಾಲಾವಕಾಶ ಕೊಟ್ಟು ನಾವು ಮಾತನಾಡುವುದಕ್ಕೆ ನಮಗೆ ಕೊಟ್ಟಿರತಕ್ಕಂಥ 5 ನಿಮಿಷಕ್ಕೆ ಮುಂಚೆಯೇ ಬೆಲ್ಲು ಹೊಡೆದು ನಮ್ಮ ಮನಸಿನಲ್ಲಿ ಏನು ಮಾತನಾಡಬೇಕೆಂದು ಇರುತ್ತದೆಯೋ ಆ ಅಭಿಪ್ರಾಯಗಳನ್ನು ಹಾಳುಮಾಡುತ್ತೀರಿ. ವೈಯುಕ್ತಿಕವಾಗಿ ತಮ್ಮ ಬಗ್ಗೆ ನಮಗೆ ಅಪಾರ ಗೌರವ ಇದೆ. ಇದರಲ್ಲಿ ನಿಮ್ಮ ಜವಾಬ್ದಾರಿ ಹೆಚ್ಚಿಗೆ ಇದೆ. ಆದುದರಿಂದ ನಮಗೆ ಮಾತನಾಡಲು ಹೆಚ್ಚು ಕಾಲಾವಕಾಶ ಕೊಡಬೇಕು. ನಾವು ಇಲ್ಲಿಗೆ ಬಂದಿರುವುದು ನಮ್ಮ ಸರ್ಕಾರ ಮಾಡಿರತಕ್ಕಂಥ ಲೋಪದೋಷಗಳನ್ನು ಬಯಲಿಗೆ ಎಳೆಯುವುದಕ್ಕೆ. ಈ ಒಂದು ಅಧಿಕಾರ ವಿರೋಧ ಪಕ್ಷದವರಿಗೆ ಇದೆ. ವಿರೋಧಪಕ್ಷದಲ್ಲಿ ಇರತಕ್ಕಂಥ ಜನ ಕಡಿಮೆ, ಕೇವಲ 45 ಜನ ಇದ್ದಾರೆ ಆ ರೀತಿ ತುಳಿಯುವ ಮಟ್ಟಕ್ಕೆ ಹೋಗದೆ ನಮಗೆ ರಕ್ಷಣೆ ಕೊಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Sri C. M. ARUMUGAM (K.G.F.). —First of all Mr. Deputy Speaker, there are several demands put up on the List of Business today and three Ministers are going to reply. It is unfortunate that so many demands are put up for a day and the Ministers require so much time for reply. The Ministers will get enough opportunities of making speeches when they go on tour. They can make public speeches. On this side, we have given a list. We are not here to question the discretion of the Speaker. The Speaker has enormous power and authority to regulate business in this House. It is purely the discretion of the Speaker to give chances for Members to speak. What we submit is: we have given a list from this side and a list is given from the other side. If you recognise the Leader of the Opposition and if he is really given due respect as Leader of the Opposition, the list must be followed. It has not been followed now. I understand that Mr. Bangarappa's name stands first in the list given by the Leader of the Opposition.

Mr. DEPUTY SPEAKER.—He is going to get the next chance.

Sri C. M. ARUMUGAM.—Instead of following the list, in your discretion, you have called other Members. How far the lists are being followed and whether such lists are necessary in future in view of our experience has to be examined. You gave two chances to the other side.

Sri R. GUNDU RAO (Somwarpet).—You are wasting time.

Sri C. M. ARUMUGAM.—I am not wasting time. Please withdraw what you have said. Yesterdy Sri K. H. Patil wasted one full day by his speech.

ಶ್ರೀ ವಾಟಾಳ್ ನಾಗರಾಜ್.—ಉದ್ದೇಶಪೂರ್ವಕವಾಗಿ ಕಾಲಹರಣ ಮಾಡುತ್ತಿರುವವರು ಗುಂಡೂರಾವ್ ಮತ್ತು ಅವರ ಮಿತ್ರರು. ಯಾರೂ ಮಾತನಾಡಬೇಡಿ ಎಂದರೆ ನಾವು ಎದ್ದು ಹೋಗುತ್ತೇವೆ. ಅವರೇ ಎಲ್ಲ ಮಾತನಾಡಲಿ.

Mr. DEPUTY SPEAKER.—In my opinion, the difficulty is created by the Opposition itself. Yesterday the Hon'ble Speaker has informed the House the time taken by the Ruling Party and also the Opposition. In fact, double the time has been taken by the Opposition. These are matters which should have been discussed in the Business Advisory Committee. The Hon'ble Leader of the Opposition has been a party to many of the decisions arrived at unanimously and these decisions the Presiding Officers have been striving to adhere. That exactly has been

(MR. DEPUTY SPEAKER)

done. Please remember that the Presiding Officer has no ill-will or rancour against anybody. In fact there are double the number of members on this side today in the list. Even the Leader of the Opposition has been gracious enough to give to make some adjustments here and there, to make room for members and groups who do not exactly belong to any party or group. In fact the Presiding Officers have been gracious enough time to the Leaders of other parties, whoever it is. Taking into consideration the time taken by the Hon'ble Member Sri Vatal Nagaraj, he has been so vociferous—Sri Arumugam, will kindly realise that no wrong has been done to him. On the other hand, abundant good-will has been shown towards both. In order to make some adjustment, two Members on this side have been given chances. It is not that it will be done every time. Probably a time will come when one member on this side and one Member from the other side will be called.

When there are double the number of members who have given their names, what is to be done?

If I could make a reference to the Rules, these lists have no place in the Rules of Procedure. The Rules of Procedure states that the Member should stand and catch the eye of the Speaker. But certain conventions are there and we are adhering to them as far possible and let there be no impression that some harm is done to somebody. In fact, sufficient goodwill has been displayed towards the Members in Opposition Party. Let it be clearly borne in mind.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ ಮಾತನಾಡುವವರ ಪಟ್ಟಿಯನ್ನು ಕೊಟ್ಟು ಆ ಪ್ರಕಾರ ಅನುಸರಿಸಬೇಕು ಎನ್ನುವುದು ಇಲ್ಲ ಎನ್ನುವ ಮಾತನ್ನು ಒಪ್ಪಿಕೊಳ್ಳುತ್ತೇನೆ. ಡಿಸ್ಕ್ರಿಷನರಿ ಪವರ್ಸ್ ಆಫ್ ದಿ ಸ್ಪೀಕರ್ ಎನ್ನುವ ಮಾತನ್ನೂ ಒಪ್ಪುತ್ತೇನೆ. ಆದರೆ ಪಟ್ಟಿಯನ್ನು ಈ ಕಡೆಯವರು ಮತ್ತು ಆ ಕಡೆಯವರು ಕೊಟ್ಟಾಗ, ಈ ಕಡೆಯಿಂದ ಒಬ್ಬರನ್ನು ಕರೆದರೆ ಆ ಕಡೆಯಿಂದ ಒಬ್ಬರನ್ನು ಕರೆಯತಕ್ಕದ್ದು ಕನ್‌ವೆನ್‌ಷನ್ ಆಗಿದೆ, ಸಂಪ್ರದಾಯವಾಗಿದೆ. ಆ ಸಂಪ್ರದಾಯವನ್ನು ಮುರಿಯತಕ್ಕ ಪದ್ಧತಿ ಈ ಹೊತ್ತು ಮಾನ್ಯ ಸದಸ್ಯರನ್ನು ಕರೆಯುವುದು ಇಲ್ಲಿ ನಡೆದಿದೆ. ವಿರೋಧ ಪಕ್ಷದಿಂದ ಕೊಟ್ಟಿರುವ ಪಟ್ಟಿಯಲ್ಲಿ ಮೊದಲನೆಯ ಹೆಸರು ನನ್ನದಿದೆ. ಪಟ್ಟಿಯನ್ನು ಕೊಟ್ಟಮೇಲೆ ಆ ಪ್ರಕಾರವಾಗಿ ಹೆಸರುಗಳನ್ನು ಕರೆಯದೆ ಬೇರೆಯವರನ್ನು ಕರೆಯಲಾಯಿತು. ಇದರ ಬಗ್ಗೆ ವಿರೋಧ ಪಕ್ಷದ ಸದಸ್ಯರಲ್ಲಿ ಉಂಟಾಗಿರುವ ಆತಂಕದ ಬಗ್ಗೆ ಈ ದಿವಸ ಒಂದು ತೀರ್ಮಾನವಾಗಬೇಕು. ಆ ಪಟ್ಟಿ ಕೊಟ್ಟಮೇಲೆ, ಅದಕ್ಕೆ ಬೆಲೆ ಇಲ್ಲ ಎನ್ನುವುದು ವಿರೋಧ ಪಕ್ಷದ ನಾಯಕರ ಮುಖಕ್ಕೆ ಮಸಿ ಬಳಿಯತಕ್ಕ ಕೆಲಸ ನಡೆಯುತ್ತಿದೆ. ಮೂರು ಜನ ಮಂತ್ರಿಗಳು ರಿಪ್ಲೈ ಕೊಡುವುದಕ್ಕೆ ಕಾಲ ನಿಗದಿಯಾಗಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಇದಕ್ಕೆ ಹೇಗೆ ಒಪ್ಪಿತು ಎಂದು ಕೇಳಬೇಕಾಗಿದೆ. ನಾನು ಇಲ್ಲಿಗೆ ಭಾಷಣ ಮಾಡತಕ್ಕ ಆಸೆಯಿಂದ ಬಂದಿಲ್ಲ. ನಮ್ಮ ಮೇಲೆ ಜವಾಬ್ದಾರಿ ಹೊರಿಸಿ ಜನ ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ಅದನ್ನು ನಾವು ಡಿಸ್‌ಚಾರ್ಜ್ ಮಾಡಬೇಕು. ಸರ್ಕಾರದ ಲೋಪದೋಷ ಏನು ಇದೆ ಅದನ್ನು ಎತ್ತಿ ತೋರಿಸುವುದಕ್ಕೆ ಅವಕಾಶ ಇದೆ. ನಮಗೆ ಭಾಷಣ ಮಾಡಲಿಕ್ಕೆ ಐದು ನಿಮಿಷ ಕೊಡಿ, 10 ನಿಮಿಷ ಕೊಡಿ ಎಂದು ಕೇಳುವುದಕ್ಕೆ ನಮಗೂ ಕೂಡ ಘನತೆ, ಗೌರವ, ಮಾನ, ಮರ್ಯಾದೆ, ಸ್ಥಾನಮಾನ ಇದೆ. ಈ ಪ್ರಜಾಪ್ರಭುತ್ವ ಪದ್ಧತಿಗೆ ಎಲ್ಲರೂ ಬೆಲೆ ಕೊಡಬೇಕಾಗಿದೆ. ಉಪಾಧ್ಯಕ್ಷರು ವಿರೋಧ ಪಕ್ಷವನ್ನು ಈ ರೀತಿ ಕಾಣತಕ್ಕ ಪದ್ಧತಿ ಸರಿಯಲ್ಲ. ವಿರೋಧ ಪಕ್ಷದ ನಾಯಕರು ಕೊಟ್ಟ ಲಿಸ್ಟನಲ್ಲಿ ನನ್ನದು ಮೊದಲನೆಯ ಹೆಸರು ಇದ್ದಾಗ, ಅದನ್ನು ಕೈಬಿಟ್ಟು ಬೇರೆಯವರ ಹೆಸರನ್ನು ಕರೆದಿದ್ದೀರಿ. ಇದು ವಿರೋಧ ಪಕ್ಷದ ನಾಯಕರಿಗೆ ಕೊಟ್ಟಿರತಕ್ಕ ಬೆಲೆಯೇ ಎಂದು ಕೇಳುತ್ತೇನೆ? ತಾವು ಈ ರೀತಿ ಮಾಡಿದ್ದು ತಪ್ಪು.

Mr. DEPUTY SPEAKER.—Sri Bangarappa was a member last time. He is a lawyer too. He knows the Rules of Procedure. Lists have absolutely no importance under the Rules. The Speaker has discretion and has to exercise it looking to the time taken by the members.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ, ನಾವು ಯಾರೂ ಇರುವುದು ಬೇಡ, ನಮಗೆ ಜವಾಬ್ದಾರಿ ಇಲ್ಲ ಎಂದ ಹಾಗಾಯಿತು.

Mr. DEPUTY SPEAKER.—Sri Bangarappa's name is in the list. No injustice has been done to Sri Bangarappa.

Sri S. BANGARAPPA.—Injustice has been done to me. When first place is given to me, I have not been given a chance.

†ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಚರ್ಚೆ ಮಾಡುವ ಕಾಲದ ಬಗ್ಗೆ ಒಂದು ಜಿಜ್ಞಾಸೆ ಪ್ರಾರಂಭವಾಗಿದೆ. ಕಳೆದ 20 ದಿವಸಗಳಿಂದ ಈ ಸಭೆಯ ಕಾರ್ಯಕಲಾಪಗಳು ನಡೆಯುವ ಕಾಲದಲ್ಲಿ ಅಧ್ಯಕ್ಷರು ಸದಸ್ಯರ ಕಾತುರತೆಯನ್ನು ಅರಿತು ಕಾಲದ ಮಿತಿಯನ್ನು ಅಡ್ಜಸ್ಟ್ ಮಾಡಿಕೊಂಡು ಬಂದಿದ್ದಾರೆ. ಈಗ ಬಂದಿರತಕ್ಕ ಸಮಸ್ಯೆ ನಿನ್ನೆ ರೂಲಿಂಗ್ ಪಾರ್ಟಿಯೊಳಗೆ ಎರಡು ಜನ ಕರೆದು ನಮ್ಮ ಕಡೆ ಒಬ್ಬರನ್ನು ಕರೆಯುವುದು ಈ ರೀತಿಯಾಗುತ್ತಾ ಇದೆ. ನಾನು ಕೊಟ್ಟ ಲಿಸ್ಟ್ ಪ್ರಕಾರ ಅಡಿಯರ್ ಆಗಿಲ್ಲ. ತಮಗೆ ರೂಲ್ಸ್ ಪ್ರಕಾರ ಡಿಸ್‌ಕ್ರಿಷನ್ ಇದೆ, ತಾವು ಯಾರನ್ನು ಬೇಕಾದರೂ ಕರೆಯಬಹುದು, ಪಟ್ಟಿ ಕೊಡತಕ್ಕ ಕನ್ವೆನ್ಷನ್ ಪ್ರತಿ ವರ್ಷವೂ ನಡೆದುಕೊಂಡು ಬಂದಿದೆ. ಸಂಖ್ಯಾಬಲದ ಮೇಲೆ ಈ ಡಿಮ್ಯಾಂಡ್ ಮೇಲೆ ಚರ್ಚೆ ಮಾಡುವ ಸಮಯವನ್ನು 200 ಜನ ಸದಸ್ಯರಿಗೆ ಹಂಚಿದರೆ, ಒಬ್ಬೊಬ್ಬರಿಗೆ ಒಂದು ನಿಮಿಷ ಬರುತ್ತದೆ. ನಮಗೆ 40 ನಿಮಿಷ ಕೊಟ್ಟು ಬಿಟ್ಟು, ನಮ್ಮ ಕಾಲ ಮುಗಿದು ಹೋಯಿತು, ಉಳಿದಿದ್ದನ್ನು ರೂಲಿಂಗ್ ಪಾರ್ಟಿಗೆ ಕೊಡಬೇಕು ಎಂದರೆ, ವಿರೋಧಪಕ್ಷಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅಧ್ಯಕ್ಷರು, ಹೆಚ್ಚು ಕಾಲ ಕೊಟ್ಟುಕೊಂಡು ಬಂದಿದ್ದಾರೆ. ಕಳೆದ 20 ದಿವಸಗಳಲ್ಲಿ ವಿರೋಧಪಕ್ಷದವರು ಎಷ್ಟು ಕಾಲ ತೆಗೆದುಕೊಂಡಿದ್ದಾರೆ, ಎಂಬುದನ್ನು ಈ ಸಭೆಯಲ್ಲಿ ತಿಳಿಸಿದ್ದಾರೆ. ಅದರಲ್ಲೂ ಜ್ಞಾಪಕವಿಟ್ಟುಕೊಳ್ಳಬೇಕು, ಸರ್ಕಾರ ರಿಪ್ಲೈ ಕೊಡುವುದಕ್ಕೆ ತೆಗೆದುಕೊಂಡ ಕಾಲವನ್ನು ಇದರಲ್ಲಿ ಸೇರಿಸಿಲ್ಲ; ಮುಖ್ಯಮಂತ್ರಿಗಳು ಮೂರು ಗಂಟೆ ಭಾಷಣ ಮಾಡಿದ್ದಾರೆ. ನಿನ್ನೆ 10 ಗಂಟೆಗೆ ಕೂತು ಒಂದೂವರೆ ಗಂಟೆಯವರೆಗೆ ಸರ್ಕಾರದ ರಿಪ್ಲೈ ಕೇಳಿದ್ದೇವೆ. ಈ ಕಾಲವನ್ನು ಇದರಲ್ಲಿ ಸೇರಿಸಿಲ್ಲ. ನಾವು ಅಧ್ಯಕ್ಷರ ಮೇಲೆ ಆಪಾದನೆ ಮಾಡುತ್ತಿಲ್ಲ. ಅವರು ಸಾಕಷ್ಟು ನಮ್ಮ ಕಡೆ ಸಹಕರಿಸಿಕೊಂಡು ಬಂದಿದ್ದಾರೆ.

Mr. DFPUTY SPEAKER.—I am glad that the Leader of the Opposition concedes that point.

Sri C. M. ARUMUGAM.—We are one with him. We are not saying anything against you.

ಶ್ರೀ ಎಚ್. ಡಿ. ದೇವೇಗೌಡ.—ಆಡಳಿತ ಪಕ್ಷದ ಮಿತ್ರರಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ, ತಮಗೆ ತಮ್ಮ ಕ್ಷೇತ್ರದ ಬಗ್ಗೆ ರೆಪ್ರೆಸೆಂಟ್ ಮಾಡಲು ಪಾರ್ಟಿ ಮೀಟಿಂಗ್‌ಗಳಲ್ಲಿ ಅವಕಾಶವಿದೆ. ಆದರೆ ವಿರೋಧಪಕ್ಷದವರಿಗೆ ಈ ಫೋರಮ್ ಬಿಟ್ಟರೆ ಬೇರೆ ಕಡೆಗೆ ಮಾತನಾಡುವ ಅವಕಾಶವಿಲ್ಲ.

Mr. DEPUTY SPEAKER.—That is why we have been unduly fair to the Opposition.

I fully appreciate the feelings of the Leader of the Opposition. But we have to respect the convention.

Sri S. BANGARAPPA.—What is the convention ?

Mr. DEPUTY SPEAKER.—In democracy, we have to adjust, we have to tolerate. We must have a good deal of restraint. In democracy effective opposition is necessary. That is exactly the reason why we have encouraged the Opposition. Certain hon. members are imputnig some motives when none exists.

Sri S. BANGARAPPA.—We have not imputed motives against anybody.

Mr. DEPUTY SPEAKER.—Let us learn to understand each other and adjust among ourselves so that the discussions would be in a very, very sober way. And that is exactly how we will learn better and we will contribute better.

Sri S. BANGARAPPA.—Real sober is we must go on weeping before you and cringing before you.

Mr. DEPUTY SPEAKER.—I never want Sri Bangarappa to weep. I will be the saddest person to see him weep. I am anxious to help him provided he understands our difficulties. I am a Presiding Officer and I have only duties to perform.

ಶ್ರೀ ಎಚ್. ಡಿ. ದೇವೇಗೌಡ.—ಬಂಗಾರಪ್ಪನವರ ಹೆಸರು ಮೊದಲು ಹಾಕಿತ್ತು. ತಮ್ಮ ಡಿಸ್ಕ್ರಿಷನ್‌ನಲ್ಲಿ ಶ್ರೀ ಎಂ. ಎಸ್. ಕೃಷ್ಣನ್ ಅವರನ್ನು ಕರೆದಿದ್ದೀರಿ.

Mr. DEPUTY SPEAKER.—I was not in the Chair. That is the discretion of the speaker. How can the hon. member comment on it ?

ಶ್ರೀ ಎಚ್. ಡಿ. ದೇವೇಗೌಡ.—ತಾವು ಬಹುಶಃ ಬಂಗಾರಪ್ಪನವರಿಗೆ ಇನ್‌ಸಲ್ಟ್ ಮಾಡುವ ದೃಷ್ಟಿಯಿಂದ ಬೇರೆಯವರನ್ನು ಕರೆದಿರಲಿಕ್ಕಿಲ್ಲ. ಪಾರ್ಟಿ ಲೀಡರ್ಸ್—ಸಿ. ಪಿ. ಐ., ರಿಪಬ್ಲಿಕನ್, ಎಸ್. ಎಸ್. ಪಿ., ಗ್ರೂಪ್ ಲೀಡರ್ಸ್ ಕರೆಯಬೇಕು ಎಂದು ಬಹುಶಃ ಕರೆದಿರಬಹುದು. ನಾನು ಲಿಸ್ಟ್ ಕೊಡುವಾಗ ಅವರನ್ನು ಕನ್ಸಲ್ಟ್ ಮಾಡಿ ಫಸ್ಟ್ ಚಾನ್ಸ್ ಯಾರಿಗೆ ಕೊಡಬೇಕು ಎಂದು ನೋಡಿ ಕೊಟ್ಟಿರುತ್ತೇನೆ. ಆ ಪ್ರಕಾರ ಫಾಲೋ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದು ಒಳ್ಳೆಯದು.

4–00 P. M.

Mr. DEPUTY SPEAKER.—I quite understand what the Leader of the Opposition has said but when members sometimes say that they want to go to the hospital some adjustment has to be made. Some hon. Members are not in their seats when their chance comes. I was feeling unhappy when Sri Bangarappa was not there in his seat. In fact, I sent for him. I request hon. Members not to magnify small things. Let us understand each other and discharge our duties. We will be held responsible by the public for every minute wasted here. I hope members are aware how much money is spent for every day's sitting.

Sri S. BANGARAPPA.—The electors in my constituency have taken so much of pains in electing me.

Mr. DEPUTY SPEAKER.—People have taken lot of trouble in electing each one of us. Everyone of us represents over a lakh of people and every one has come here to discharge his duties in a very noble manner. Let us understand each other and adjust each other. Many of these things could have been discussed in the Business Advisory Committee. Now, I call upon Sri Jayaram to speak.

† **Sri M. R. JAYARAM** (Devanahalli).—Sir, while supporting the Demand before the House, I would like to make certain suggestions to the Government.

It has been the usual practice that the loans which have been given to the public sector undertakings or the quasi-industrial undertakings is completely converted into equity capital. This is a very bad augury from the point of development of the public sector undertakings. This amount is used for the purpose of making up the losses incurred by the public sector undertakings. This is not a healthy sign for the development of such undertakings. I therefore suggest that such conversion of share capital should not be done at least in future for the simple reason that we would like the public sector undertakings to come up in a very healthy manner. For example, in the NGEF they have converted to the tune of Rs. 1.50 crores. This amount has been used for the recurring expenses *i.e.* to make up the losses incurred by the company so far. This becomes almost a waste. Government will not get back the money. Another thing is that the management will become slack and once the losses are made up they will take things easy. The management should feel that the loan that the Government have given should be repaid and for that they should see that good profit is made by the industry.

The second point I would like to impress upon the Government is the development of industrial estates, especially the ancillary units. Today the object of starting industrial estates is to help the ancilliary units, but what is happening to them today ? Neither have they got capital nor help from the main industries. Therefore, they have been suffering to a very great extent. They must help the ancilliary units by giving first preference to the industrial estates. They do not have the capital to develop but they have got the technical know-how and entrepreneurship. As a matter of fact, in India we are very short of entrepreneurship. If we do not encourage our entrepreneurs, we will be simply wasting their energy and knowledge. So, I would request the Government to help these people by giving them the first preference in the matter of these industrial estates.

Today, what is happening is that we have neglected the sub-contractor. For example, in many of the industries the industrialists give some sub-contracts to some persons. For example, they give electric motor to one man ; he winds it at home and gives it to the company. The sub-contractor is the man who works ; he knows the technical know-how. It is almost a home industry. For such things we do not have capital. When this is the case, we should help the small contractors in whatever little way we can. We can encourage these people by giving some help by way of liberal finance and such other things.

The third point I would suggest is labour participation in the equity capital of public sector undertakings. The Central Government is thinking of trying to bring the labour into the management. I would go a step further and say that it will be a good augury for the public sector

(SRI M. R. JAYARAM)

undertakings if there are better relations between the labour and management by giving the workers even shares in these undertakings. This would help the undertakings themselves to a very great extent. To give an example, in New York the Drug Corporation has been losing very heavily from the inception. The management was thinking what to do. At that time they introduded this novel method of giving shares to the workers and taking them into the management. As a result of this, within one year the profits increased to 80 per cent and the next year it increased to 150 per cent. More than anything else, the relations between the labour and the management were very very cordial and there was no union existing as such. So, when we are thinking of the interests of the labour, it will be better to see that we help the labour by taking them into confidence and giving them a place in the industry—not only by way of taking them into the management but also by giving them shares in the concern so that they may feel that it is their concern and put forth their best to increase production.

The last point I would like to mention is about the constituency to which I belong. Even though that place is about [illegible]0 miles from this city, there is no development and not even one industry is there. On the other hand if we take Bangalore-Tumkur Road or Bangalore-Mysore Road or Bangalore-Madras Road, we see a number of industries. But on Bellary Road there is not even one industry there. Agriculture is the backbone of our taluk but if you look to the water table you will find that water has gone down and one cannot get water unless one goes deep down to 70 or 80 feet. So no agriculture can be done there. The only alternative is to find some industries there. I would request the government to think of starting one or two industries in that place, and while giving any new licence my taluk should be given preference. It will go a long way to help the people of my constituency.

With these words I thank the Chair for giving me this opportunity to speak.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸದನದ ಒಪ್ಪಿಗೆಗಾಗಿ ಮಂಡನೆ ಮಾಡಿರತಕ್ಕ ಬೇಡಿಕೆಗಳನ್ನು ವಿರೋಧಮಾಡಿ ಮಾತನಾಡಲು ಇಚ್ಛಿಸುತ್ತೇನೆ. ಮಾನ್ಯ ಶ್ರೀ ಕೃಷ್ಣರವರ ಬಗ್ಗೆ ಒಂದು ಮಾತು ಇಲ್ಲಿ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಯುವಕರು, ಇವರ ಕೈಯಲ್ಲಿ ಕೈಗಾರಿಕೆ ಇಲಾಖೆ ಇರುವುದರಿಂದ ಇವರು ಈ ಇಲಾಖೆಯಲ್ಲಿ ಆಗಿರುವ ಅನ್ಯಾಯಗಳನ್ನು ಎತ್ತಿ ಜನರಿಗೆ ತೋರಿಸುವ ಧೈರ್ಯ ಹಾಗೂ ಆಸೆ ಇದೆ ಎಂದು ನಾನು ಇವರಿಂದ ನಿರೀಕ್ಷೆ ಮಾಡುತ್ತಿದ್ದೆ. ಆದರೆ ಒಂದೇ ಒಂದು ವಿಚಾರದಲ್ಲಿ ಇವರ ಆಡಳಿತವನ್ನು ನೋಡಿ ಇವರು ಇದರಲ್ಲಿ ಫೈಲ್ ಆಗಿದ್ದಾರೆ ಎನ್ನುವ ತೀರ್ಮಾನಕ್ಕೆ ನಾನು ಬಂದೆ. ಭದ್ರಾವತಿ ಕಬ್ಬಿಣದ ಕಾರ್ಖಾನೆಯ ವಿಷಯ ಏನಿದೆ ಅದಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಹಿಂದೆ ಇದ್ದ ಅಧಿಕಾರಿಗಳು ಎಂದರೆ ಶ್ರೀ ಐ. ಪಿ. ಮಲ್ಲಪ್ಪನವರು. ಇವರು ಇಲ್ಲಿನ ಆಡಳಿತವನ್ನು ಬಹಳ ಯಶಸ್ವಿಯಾಗಿ ನಡೆಸಿಕೊಂಡು ಬಂದರು. ನಾನು ಇಲ್ಲಿ ಯಾವ ಒಬ್ಬ ಅಧಿಕಾರಿಗಳ ಬಗ್ಗೆ ಮಾತನಾಡಿದರೂ

ಕೂಡ ಅವರಿಗೂ ನನಗೂ ಯಾವ ಸಂಬಂಧವೂ ಇಲ್ಲ. ಆದರೆ ಇಲಾಖೆಯಲ್ಲಿ ಕೆಲಸ ಮಾಡುವುದರ ಬಗ್ಗೆ ಮಾತ್ರ ಇಲ್ಲಿ ಹೇಳಬೇಕಾಯಿತು. ಇಂದು ನಮ್ಮ ದೇಶದಲ್ಲಿ ಇಂತಹ ಒಂದು ಕಬ್ಬಿಣದ ಕೈಗಾರಿಕೆ ಉದ್ಯಮದಲ್ಲಿ ಕೆಲಸ ಮಾಡಿ ಇದು ಉಳಿಯಬೇಕು ಮತ್ತು ಮುಂದಕ್ಕೆ ಬರಬೇಕು ಎಂದು ಹೇಳುವ ಜನರಲ್ಲಿ ನಾನೂ ಒಬ್ಬ. ಶ್ರೀ ಐ. ಪಿ. ಮಲ್ಲಪ್ಪನವರು ಈ ಕಾರ್ಖಾನೆಯಲ್ಲಿದ್ದಾಗ ಇವರು ಬಹಳ ಕಟ್ಟುನಿಟ್ಟಾಗಿ ಧೈರ್ಯದಿಂದ ಕೆಲಸ ಮಾಡಿದ ಅಧಿಕಾರಿಗಳು ಎಂದು ಹೇಳಬೇಕಾಗಿದೆ ಮತ್ತು ಇವರು ಇಲ್ಲಿ ಚೆನ್ನಾಗಿ ಕೆಲಸ ಮಾಡಿ ಒಳ್ಳೆಯ ಹೆಸರು ತೆಗೆದುಕೊಂಡಿದ್ದಾರೆ. ಪ್ರತಿಯೊಬ್ಬ ಸಣ್ಣ ಪುಟ್ಟ ಅಧಿಕಾರಿಗಳೊಡನೆಯೂ ಹೊಂದಿಕೊಂಡು ಅನೇಕ ಉತ್ತಮವಾದ ಕೆಲಸಗಳನ್ನು ಇಲ್ಲಿ ಮಾಡಲು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಇದರಲ್ಲಿ ಹೆಚ್ಚು ದುರಾಡಳಿತ ವಾಗಿರುವುದು ಹಿಂದೆ ಇಲ್ಲಿ ಅಧಿಕಾರಿಗಳಾಗಿದ್ದ ಶ್ರೀ ಎಂ. ಡಿ. ಶಿವನಂಜಪ್ಪನವರ ಕಾಲದಲ್ಲಿ. ಈಗ ಶ್ರೀ ಚಂದಪ್ಪ ಪಾಟೀಲರವರು ಇಲ್ಲಿ ಅಧಿಕಾರಿಗಳಾಗಿ ಬಂದಿದ್ದಾರೆ. ಇವರನ್ನು ಇಲ್ಲಿಂದ ತೆಗೆಯ ಬೇಕು, ಇಲ್ಲದಿದ್ದರೆ ಈ ಭದ್ರಾವತಿ ಕಾರ್ಖಾನೆ ಉಳಿಯುವುದಿಲ್ಲ ಎಂದು ಈಗಾಗಲೇ ಕೆಲವು ಸದಸ್ಯರು ಇವರ ಬಗ್ಗೆ ಇಲ್ಲಿ ಹೇಳಿದ್ದಾರೆ.

Mr. DEPUTY SPEAKER.—While referring to persons, please refer to their designations. As far as possible please avoid giving names because they are not here to defend themselves.

ಶ್ರೀ ಎಸ್. ಬಂಗಾರಪ್ಪ.—ಸ್ವಾಮೀ ನಮಗೆ ಕೊಟ್ಟಿರುವ ಆಡಿಟ್ ರಿಪೋರ್ಟುಗಳಲ್ಲಿ ಇವರ ಹೆಸರುಗಳೆಲ್ಲಾ ಇವೆ. ಅದನ್ನು ಓದಿಕೊಂಡೇ ಇಲ್ಲಿ ನಾನು ಹೇಳುತ್ತಿರುವುದು. 1969-70ರ ರಿಪೋರ್ಟಿನಲ್ಲಿ ಹಾಗೂ 1970ರ ಆಡಿಟ್ ರಿಪೋರ್ಟ್‌ನಲ್ಲಿ ಪುಟ 9ರಲ್ಲಿ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಅವನ್ನು ಮಾತ್ರ ಸಭೆಯ ಅವಗಾಹನೆಗಾಗಿ ಇಲ್ಲಿ ಓದುತ್ತೇನೆ.

"Purchase of coal and coke: In respect of purchase of coal and coke the appointment of agents had been made without calling for tenders. Further the appointment of agents had not been formally made and agreement specifying minimum guarantee of supply, jurisdiction and responsibility for timely and complete despatches of coal and coke from the specific collieries, etc., had not been entered into with the agents. It was observed that a few firms were treated as agents and commission at 75 paise per M. T. (coal) and Rs. 1.50 per M. T. (coke) was paid to three firms. Such payments amounted to Rs. 7.60 lakhs for the period 1962-63 to 1969-70."

ಏಳು ವರ್ಷಗಳಲ್ಲಿ ಏಜಂಟರುಗಳಿಗಾಗಿ ಇಷ್ಟು ಕಮಿಷನ್ ಕೊಟ್ಟಿದ್ದಾರೆ. ಇವೊತ್ತು ಭದ್ರಾವತಿ ಯಲ್ಲಿ ತಯಾರು ಮಾಡಿ ಮಾರಾಟ ಮಾಡತಕ್ಕಂಥ ಬೆಲೆ ನೂರು ರೂಪಾಯಿ ಇದ್ದರೆ ಅದನ್ನು ಕೇವಲ 50-60 ರೂಪಾಯಿಗಳಿಗೆ ಏಜೆನ್ಸಿಗಳಿಗೆ ಮಾರಾಟ ಮಾಡಿದ್ದಾರೆ. ಇದರಿಂದ ಭದ್ರಾವತಿ ಕಾರ್ಖಾನೆಗೆ ಬಹಳಷ್ಟು ಹಣ ಲುಕ್ಸಾನಾಗಿದೆ. ಉದಾಹರಣೆಗೆ ಕೆಲವು ಐಟಮ್‌ಗಳನ್ನು ಮಾತ್ರ ಹೇಳುತ್ತೇನೆ.

"9. Sales Policy—Certain points noticed in regard to sale of its products were mentioned in paragraphs 8 and 17 of the Audit Report (Commercial) 1970. It is, however, seen that no definite policy with regard to pricing or sales had so far been made (November 1970). Certain cases wherein the

(ಶ್ರೀ ಎಸ್. ಬಂಗಾರಪ್ಪ)

Company suffered heavy losses due to fixation of prices below cost of manufacture are given below.

Sl. No.	Department.	Product	Cost of production per tonne.	Selling rate realised per tonne.	Difference per tonne.	Quantity in tonnes	Amount of loss (in lakhs of rupees)
			1969-70	1969-70		1969-70	
			Rs. p.	Rs. p.	Rs. p.		
1	Old Rolling Mills (Light Section Mills)	M. S. Sections	829.19	765.21	63.98	24,154.910	15.45
			Rs. p.	Rs. p.	Rs. p.		
2	New Rolling Mills	M. S. Sections	982.88	730.38	252.50	1,275.624	3.22

ಈ ರೀತಿ ಕಂಪನಿಗೆ ಲಾಸ್ ಆಗಿದ್ದು ಹಿಂದಿನ ಸರ್ಕಾರ ಇದ್ದಾಗ ಎಂದು ಈಗಿನ ಸರ್ಕಾರದವರು ಹೇಳಬಹುದು. ತಾವು ಅಧಿಕಾರಕ್ಕೆ ಬಂದಮೇಲೆ ಸೇಲ್ಸ್ ಪಾಲಿಸಿಯನ್ನು ಏನಾದರು ಮಾಡಿದ್ದೀರಾ ಎಂದು ಕೇಳುತ್ತೇನೆ. ಇನ್ನೂ ಮಾಡುವುದಕ್ಕೆ ನಿಮಗೆ ಆಗಿಲ್ಲ. ತಾವು ದಯಮಾಡಿ ಆದಷ್ಟು ಜಾಗ್ರತೆ ಸೇಲ್ಸ್ ಪಾಲಿಸಿ ಮಾಡಬೇಕು. ಈಗ ಸೇಲ್ಸ್ ಪಾಲಿಸಿ ಇಲ್ಲದಿರುವುದರಿಂದ ಹಲವಾರು ಕೋಟಿ ರೂಪಾಯಿಗಳವರೆಗೆ ಲುಕ್ಸಾನಾಗಿದೆ. ಇನ್ನು ಮುಂದೆಯೂ ಕೂಡ ತಯಾರಾದಂಥ ಮಾಲುಗಳನ್ನು ಅಧಿಕಾರಿಗಳು ಮನಸೋ ಇಚ್ಛೆ ಮಾರಾಟ ಮಾಡಬಹುದು. ಈ ಭದ್ರಾವತಿ ಕಾರ್ಖಾನೆಯಲ್ಲಿ ಇನ್ನೂ ಅನೇಕ ಅಂಟು ಜಾಡ್ಯಗಳಿವೆ. ನಿಜಲಿಂಗಪ್ಪನವರಿಗೆ ಸಂಬಂಧಪಟ್ಟಂತೆ ಇರುವ ಕರ್ನಾಟಕ ಟ್ರೇಡರ್ಸ್ ಅವರಿಗೆ ಈ ಕಾರ್ಖಾನೆಯವರು ಕಡಿಮೆ ಬೆಲೆಯಲ್ಲಿ ಸ್ಟೀಲ್ ರಾಡ್ಸನ್ನು ಮಾರಾಟ ಮಾಡುತ್ತಿದ್ದಾರೆ. ಮತ್ತು ವಿದ್ಯುಚ್ಛಕ್ತಿಯನ್ನು ಉಪಯೋಗ ಮಾಡದೆ

ವಿದ್ಯುಚ್ಛಕ್ತಿ ಬಿಲ್ ಹಣವನ್ನು ಸಂದಾಯ ಮಾಡಿದ್ದಾರೆ. ನೂರು ಲಾರಿ ಕಲ್ಲಿದ್ದಲು ಕಾರ್ಖಾನೆಗೆ ಬಂದು ಬಿದ್ದರೆ 200 ಲಾರಿ, 300 ಲಾರಿ ಕಲ್ಲಿದ್ದಲು ಬಂದಿದೆ ಎಂದು ಲೆಕ್ಕ ಬರೆದಿದ್ದಾರೆ. ಮಾನ್ಯ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಈ ಕಾರ್ಖಾನೆಯ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬ ಬಗ್ಗೆ ದಯಮಾಡಿ ಈ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು ಮುಖ್ಯವಾದ ವಿಷಯವೆಂದರೆ, ಜಿ. ಐ. ಎಫ್. ನಲ್ಲಿ ತಯಾರಾದ ಟೇಬಲ್ ಫ್ಯಾನ್, ಸೀಲಿಂಗ್ ಫ್ಯಾನ್ ಮತ್ತು ಪೆಡೆಸ್ಟಲ್ ಫ್ಯಾನ್‌ಗಳನ್ನು ಮಾರಾಟ ಮಾಡುವ ಬಗ್ಗೆ ಬಜಾಜ್ ಕಂಪನಿಯವರೊಡನೆ ಒಪ್ಪಂದ ಮಾಡಿಕೊಂಡಿರುವುದು. ಈ ಒಪ್ಪಂದದಲ್ಲಿ ರೇಟನ್ನು ಆಗಾಗ್ಗೆ ಬದಲಾವಣೆ ಮಾಡುವುದಕ್ಕೆ ಯಾವ ಕಂಡೀಷನ್ ಇಲ್ಲ. ಒಂದು ಟೇಬಲ್ ಫ್ಯಾನ್ ತಯಾರು ಮಾಡಲು ಈ ಕಂಪನಿಯವರಿಗೆ 97 ರೂಪಾಯಿ ಖರ್ಚು ಬರುತ್ತದೆ. ಅದನ್ನು ಬಜಾಜ್‌ನವರಿಗೆ 107 ರೂಪಾಯಿಗಳಿಗೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದ್ದಾರೆ. ಬಜಾಜ್ ಕಂಪನಿಯವರು ತಮ್ಮ ಏಜೆಂಟ್‌ಗಳ ಮೂಲಕ ಅದೇ ಫ್ಯಾನ್‌ಗಳನ್ನು 300 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದಾರೆ. ಅಂದರೆ ಅವರಿಗೆ ಒಂದು ಫ್ಯಾನ್‌ಗೆ 200 ರೂಪಾಯಿಗಳ ಲಾಭ ಸಿಗುತ್ತಿದೆ. ನಮ್ಮವರು ತಯಾರು ಮಾಡಿದ್ದು. ಲಾಭ ತೆಗೆದುಕೊಳ್ಳುತ್ತಿರುವುದು ಬೇರೆಯವರು. ಈಗೇನಾದರು ರೇಟನ್ನು ಬದಲಾವಣೆ ಮಾಡುವುದಕ್ಕೆ ಹೋದರೆ ಅವರು ಕೋರ್ಟಿಗೆ ಹೋಗುತ್ತಾರೆ. ಈ ಒಂದು ಒಪ್ಪಂದದಿಂದ ಸರ್ಕಾರಕ್ಕೆ ಹಲವಾರು ಲಕ್ಷ ರೂಪಾಯಿಗಳವರೆಗೆ ನಷ್ಟವಾಗುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಯೋಚನೆ ಮಾಡಿದ್ದಾರೆಂಬುದನ್ನು ತಿಳಿಸಬೇಕು ?

ಶ್ರೀ ಎಸ್. ಎಂ. ಕೃಷ್ಣ.—ಏನು ಮಾಡಬಹುದು ಎಂಬುದನ್ನು ತಿಳಿಸುತ್ತೀರಾ ?

Sri H. D. DEVE GOWDA.—We are going to give a report on that point. The matter is under examination of the Public Accounts Committee. The Committee will consider it in detail and give a report to Government. Since the hon. member is also a member of that Committee let him not go into those details.

ಮಾನ್ಯ ಬಂಗಾರಪ್ಪನವರು ಎರಡು ವಿಷಯಗಳನ್ನು ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಒಂದನೆಯದು ಎಂದರೆ ಶ್ರೀ ಚಂದಪ್ಪ ಪಟೇಲ್ ಅವರ ಕಾಲದಲ್ಲಿ ಅನ್ಯಾಯವಾಗಿದೆ ಮತ್ತು ಶ್ರೀ ಎಂ. ಬಿ. ಶಿವನಂಜಪ್ಪನವರ ಕಾಲದಲ್ಲಿ ಅನ್ಯಾಯವಾಗಿದೆ ಎಂದು ಹೇಳಿದರು. I welcome it. Hon. Member is free to say whatever he wants to say. ಕರ್ನಾಟಕ ಟ್ರೇಡರ್ಸ್ ಬಗ್ಗೆ ಕೂಡ ಅವರು ಪ್ರಸ್ತಾಪ ಮಾಡಿದರು. ಈ ಕರ್ನಾಟಕ ಟ್ರೇಡರ್ಸ್ ಎಂಬತಕ್ಕಂಥ ಏಜೆನ್ಸಿಯಲ್ಲಿ ಯಾರು ಯಾರು ಇದ್ದಾರೆ ಎಂಬ ಬಗ್ಗೆ ಉತ್ತರ ಕೊಡಬೇಕು. ಅದರಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ವೀರೇಂದ್ರಪಾಟೀಲ್ ಅವರು ಮತ್ತು ಅವರ ಬಂಧುಬಳಗದವರು, ಅತ್ತೆಸೊಸೆಯಂದಿರು ಏನಾದರೂ ಇದ್ದಾರೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಏಕೆಂದರೆ ಕರ್ನಾಟಕ ಎಂದರೆ ಲಿಂಗಾಯಿತರು ಎಂಬ ಭಾವನೆ ಬರುತ್ತದೆ, ಮೈಸೂರು ಎಂದರೆ ಒಕ್ಕಲಿಗರು ಎಂಬ ಭಾವನೆ ಬರುತ್ತದೆ. ಆದಕಾರಣ ಕರ್ನಾಟಕ ಟ್ರೇಡರ್ಸ್‌ನಲ್ಲಿರುವ ಮೆಂಬರ್ಸ್ ಯಾರು ಯಾರು, ಅದರಲ್ಲಿ ಸರ್ಕಾರದ ಷೇರ್ ಏನಾದರೂ ಇದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಶ್ರೀಮಾನ್ ಚಂದಪ್ಪಪಾಟೀಲ್ ಅವರು ಆ ಕಾರ್ಖಾನೆಗೆ ಹೋಗಿ ಅಧಿಕಾರ ವಹಿಸಿಕೊಂಡು ಕೇವಲ 8—9 ತಿಂಗಳಾಗಿರಬಹುದು. ಅವರು ಆ ಕಾರ್ಖಾನೆಯನ್ನು ಯಾವ ರೀತಿ ಹಾಳು ಮಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. What all he has done against the interests of the factory let him say. C.B.I. is also investigating the matter and if that investigation is over and if they have given any report let that also be made known to us by the Hon. Minister. Let there be no mis-interpretation of the issue. ಸಿ.ಬಿ.ಐ. ಅವರಿಂದ ಇನ್‌ವೆಸ್ಟಿಗೇಷನ್ ಆಗುತ್ತಿದೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ಉತ್ತರ ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ಚಂದಪ್ಪಪಾಟೀಲ್ ಅವರ ಕಾಲದಲ್ಲಿಯೂ ಸಹ ಅನ್ಯಾಯವಾಗಿದೆ ಎಂದು ನನ್ನ ವಾದ. ಅವರು ಅಪಾಯಿಂಟ್ ಆದಮೇಲೆ ಮತ್ತು ಅದಕ್ಕೂ ಮುಂಚೆ ಕೂಡ ಮಿಸ್-ಮೇನೇಜ್‌ಮೆಂಟಿನಿಂದಾಗಿ ಭದ್ರಾವತಿ ಕಾರ್ಖಾನೆ ಹಾಳಾಗುವುದಕ್ಕೆ ಕಾರಣವಾಗಿದೆ. ತನ್ಮೂಲಕ ರಾಜ್ಯಸರ್ಕಾರದ ಬೊಕ್ಕಸಕ್ಕೆ ಒಂದು ದೊಡ್ಡ ಹೊರೆ ಬಿದ್ದಿದೆ ಎಂದು

(ಶ್ರೀ ಎಸ್. ಬಂಗಾರಪ್ಪ)

ನನ್ನ ಮಾತಿನ ಅರ್ಥ. ಈ ಕಾರ್ಖಾನೆಯ ಬಗ್ಗೆ ಸಿ.ಬಿ.ಐ. ರಿಪೋರ್ಟ್ ಏನು ಬರುತ್ತದೆ ಅದನ್ನು ಮುಚ್ಚು ಮರೆ ಮಾಡದೆ ಈ ಸಭೆಗೆ ತಿಳಿಸಬೇಕೆಂದು ಹೇಳುತ್ತೇನೆ. ಮತ್ತು ಬಜಾಜ್ ಕಂಪನಿಯವರಿಗೆ ಫ್ಯಾನ್ ಮಾರಾಟ ಮಾಡುವ ವಿಷಯದಲ್ಲಿ ಸರ್ಕಾರದವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆಂಬುದನ್ನು ಸಹ ತಿಳಿಸಬೇಕು. ಮಾನ್ಯ ಕೃಷ್ಣ ಅವರ ಕಾಲದಲ್ಲಿ ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳು ಬೆಳೆಯಬೇಕಲ್ಲದೆ, ಅಲ್ಲಿ ತಯಾರಾಗುವ ವಸ್ತುಗಳಿಗೆ ಹೆಚ್ಚಿನ ಬೆಲೆ ದೊರೆಯುವಂತೆ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇವೊತ್ತು ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳಿಗಿಂತ ಖಾಸಗೀ ಕ್ಷೇತ್ರದ ಕೈಗಾರಿಕೆಗಳು ಬಹಳ ಚೆನ್ನಾಗಿವೆ ಎಂಬತಕ್ಕಂಥ ಕೂಗು ದೇಶದಲ್ಲಿ ಏನಿದೆ ಅದನ್ನು ಮಾನ್ಯ ಮಂತ್ರಿಗಳು ಹೋಗಲಾಡಿಸಬೇಕು. ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳು ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳಬೇಕಲ್ಲದೆ, ಖಾಸಗಿಯವರು ಕೈಗಾರಿಕೆ ನಡೆಸಿ ಹಣವೆಲ್ಲಾ ಒಬ್ಬರಲ್ಲಿ ಅಥವಾ ಕೆಲವೇ ಜನರ ಕೈಯಲ್ಲಿ ಸೇರುವುದನ್ನು ನಿಲ್ಲಿಸಬೇಕು. ಈ ರೀತಿ ಮಾಡಿದರೆ, ತಾವೇನು ಸಮತಾವಾದ ಸಮಾಜವನ್ನು ನಿರ್ಮಾಣ ಮಾಡುತ್ತೇವೆಂದು ಬೊಬ್ಬೆ ಹೊಡೆಯುತ್ತಿದ್ದೀರಿ, ಅದನ್ನು ಜಾರಿಗೆ ತರುವುದಕ್ಕೆ ಕಾರಣವಾಗುತ್ತದೆ. ಇಂದು ಸರ್ಕಾರೀ ಕ್ಷೇತ್ರದಲ್ಲಿರುವ ಕೈಗಾರಿಕೆಗಳು ಹಾಳಾಗಿರುವುದಕ್ಕೆ ಮುಖ್ಯವಾದ ಕಾರಣವೇನೆಂದರೆ, ಈ ಕಾರ್ಖಾನೆಗಳಲ್ಲಿ ಮಿಸ್‌ಮೇನೇಜ್‌ಮೆಂಟ್ ಮಾಡತಕ್ಕಂಥ ಅಧಿಕಾರಿಗಳಿರುವುದು. ಇದಕ್ಕೆ ಬಜಾಜ್ ಕಂಪನಿಯೊಂದಿಗೆ ಫ್ಯಾನ್ ಮಾರಾಟದ ಬಗ್ಗೆ ಮಾಡಿಕೊಂಡಿರುವ ಒಪ್ಪಂದವನ್ನೇ ಉದಾಹರಣೆಯನ್ನಾಗಿ ಕೊಡುತ್ತೇನೆ. ಇದರ ಜೊತೆಗೆ ಜಿ.ಇ.ಎಫ್.ನಲ್ಲಿ ತಯಾರಾದ ಟ್ರಾನ್ಸ್‌ಫಾರಮ್ಸ್‌ನ್ನು ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳವರಿಗೆ ಮಾರಾಟ ಮಾಡಿ, ಅದರ ಹಣವನ್ನು ವಸೂಲಿ ಮಾಡುವುದಕ್ಕೋಸ್ಕರ ಈ ಕಾರ್ಖಾನೆಯ ಅಧಿಕಾರಿಗಳು ಅನೇಕ ಸಲ ವಿಮಾನದಲ್ಲಿ ಪ್ರಯಾಣ ಮಾಡಿ ಹಲವಾರು ಲಕ್ಷ ರೂಪಾಯಿಗಳವರೆಗೆ ಖರ್ಚು ತೋರಿಸಿದ್ದಾರೆ. ಈ ಕಾರಣದಿಂದಲೇ ಸರ್ಕಾರೀ ಕ್ಷೇತ್ರದ ಕೈಗಾರಿಕೆಗಳು ಹಾಳಾಗುವುದಕ್ಕೆ ಕಾರಣವಾಗಿರುವುದು.

ಇದರ ಬಗ್ಗೆ ಸರ್ಕಾರದವರು ಒಂದು ಹೊಸ ನೀತಿಯನ್ನು ಮಾಡಬೇಕು. ಮೊದಲು ಆಫೀಸರುಗಳನ್ನು ಕಂಟ್ರೋಲ್ ಮಾಡುವುದನ್ನು ಕಲಿಯಬೇಕು. ಇಲ್ಲದಿದ್ದರೆ ಆಫೀಸರೇ ನಿಮ್ಮನ್ನು ಕಂಟ್ರೋಲ್ ಮಾಡುತ್ತಾರೆ. ಯಾವುದೇ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿದರೂ ಕೂಡ ಅದರಲ್ಲಿ ಕನ್ನಡಿಗರಿಗೆ ಹೆಚ್ಚು ಅವಕಾಶವನ್ನು ಕೊಡಬೇಕು. ಬೆಂಗಳೂರಿನಲ್ಲಿ ಹೆಚ್ಚು ಕೈಗಾರಿಕೆಗಳು ಮಿತಿಮೀರಿ ಬೆಳೆದಿದೆ. ಜನಸಂಖ್ಯೆಯೂ ಜಾಸ್ತಿ ಬೆಳೆದಿದೆ. ಆದ್ದರಿಂದ ಮೈಸೂರು ರಾಜ್ಯದಲ್ಲಿ ಎಲ್ಲೆಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿದೆ ಅಲ್ಲೆಲ್ಲಾ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಶಿವಮೊಗ್ಗದಲ್ಲಿ ಏತಕ್ಕೆ ಯಾವುದಾದರೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬಾರದು? ಧಾರವಾಡ, ಹುಬ್ಬಳ್ಳಿಯಲ್ಲಿ ಬಿಜಾಪುರ ಹೀಗೆ ಬೇರೆ ಜಿಲ್ಲೆಗಳಲ್ಲಿಯೂ ಬೇರೆ ಬೇರೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ನಮ್ಮ ಕನ್ನಡಿಗರಿಗೆ ಕೆಲಸಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈ ವಿಷಯಕ್ಕೆ ಸರ್ಕಾರದವರು ಹೆಚ್ಚು ಗಮನವನ್ನು ಕೊಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

Sri ABDUL KHUDDUS ANWAR (Bhadravati).—Mr. Deputy Speaker, Sir,

While supporting the Demands for Industries, I would just like to point out some of the irregularities that are really going on in our major industry, the Mysore Iron and Steel Limited. As my friends Sriyuths S. Bangarappa and M. S. Krishnan pointed out there are lots of irregularities and I am one with them to condemn those who are responsible for irregularities. Sri Bangarappa referred to the officers Sriyuts Chandappa Patel, the present Chairman, and M. D. Shivananjappa and I. P. Mallappa, past Vice-Chairmen. No doubt Sri. I.P.

Mallappa might have sold some cars and made some savings. But, actually it is during the regime of Sri M. D. Shivananjappa and Sri Jatti, ex-Chief Minister that the minimum wage of Rs. 100 was given to our people, and our industry is one of the best industries in India, for which we must appreciate the service rendered by Sri Shivananjappa.

Sri S. BANGARAPPA.—But, what about the losses ?

Sri ABDUL KHUDDUS ANWAR.—The losses were mainly due to the appointment of a foreigner, Mr. Hooth, on a monthly salary of Rs. 25,000. He was swindling away our money, and he mislead our officers. When I represented this to the management, they said: 'as long as the agreement is there he should continue—we cannot terminate his services'.

Mr. DEPUTY SPEAKER.—Please avoid referring to names as far as possible.

Sri ABDUL KHUDDUS ANWAR.—Actually, there was loss of production. Though that foreigner was paid such a heavy amount our people who were trained in foreign countries are not placed well. A mechanical man is put in the production Department, a Civil Engineer in some administrative department and so on. Now we have an energetic and young Minister and a new Director, and I am sure things will certainly improve. I have one suggestion to make. A lot of gas is being wasted which would result in a loss of Rs. 5,000 per day. If some amount is paid in the form of production bonus, I am sure production will improve. In the Old Rolling Mill, when I was there, I was giving a production of 150 tonnes per day. But, today, it has come down to 80 tonnes per day. There are officers who are paid Rs. 2,000 to Rs. 3,000 per month in production department and their duty is only to dismiss and suspend people and create problems to the Government. I suggest that such people should be changed immediately—let them be posted to other departments. There is the alloy steel plant But, so far they have not made any alloy. previously the cost of steel per tonne was Rs. 800, but today it is Rs. 1,800 per tonne. People might say that sales have improved, but I should like to point out that the improvement is only on account of cost rise. No doubt, the sales figures have gone up to Rs. 30 crores, but the production has gone down to nearly 50 per cent. Why not the management take stern action against those responsible for the loss of production ? Unless those people are changed and unless proper people are posted in proper places, I am afraid there is no future for this industry. Payment of production bonus is pending for the last one year. I am representing every now and then to the Government, the Hon'ble Minister and the Managing Director that unless the system of production bonus is introduced things will not improve. I should say that the two General Managers who are there at present are at the helm of affairs ; they are not competent people, and therefore they should be changed.

(Sri Abdul Khuddus Anwar)

With great pain I want to bring to the notice of the Government I have sent a Call Attention Notice also in this connection that the Kemmanagundi Mines is proposed to be disposed of to some private person. We have invested about Rs. 6 crores on this project. The production has gone down in this Mines on account of lack of efficiency, mis-management and want of proper use of the machinery. They say that the ore produced here is not suitable for our furnace. We have used the same ore for nearly 30 years. They are now purchasing ore from outside—of course at a lesser rate.

Sri S. M. KRISHNA.—The hon member made a statement about the Kemmanagundi Mines. I would like to know from him, if the ore that is being supplied by private parties is of a superior quality and which could be got at a cheaper price, what is it that he would like the Company to do ?

Sri ABDUL KHUDDUS ANWAR.—Now the production is less-only 800 tonnes in spite of having modern machinery. If the production is more, naturally the cost will be less. Let them purchase both the qualities and blend it. Let them put better people on the job so that more ore is extracted and sent outside. Then, you can get this ore at a lesser rate, and you can have control over the outside Purchases.

Erection of Cintre plant :—Inspite of my protest this plant has been erected with foreign collaboration. For all these ills that foreigner was responsible. But that gentleman is not in our country now. The very same person was working as the production Manager of Durgapur Steel plant. He came to Bhadravati from Durgapur to erect the plant. Other plants for the present day trouble, he alone is responsible but not the local people. I would therefore suggest that the Kemmangundi Mines should not be closed and the Sintre plant should be reopened immediately. If you give the R. mills on contract basis I will be able to give you Rs. one lakh profit every month. I am a person who has gained considerable experience in the working of the R. mills for the last 30 years. I am prepared to give you 150 tonnes every day. You are losing every day one lakh of rupees due to non-payment of D. A. deferences , and production Bonous. The bonus which has been declared about 6 years back has not been paid to the labourers, with the result the production has fallen.

With regard to the posting of proper personnel, I request the Government to post suitable persons to properly manage the plants. The loss in the Ferro Silicon Plant and the Rolling Mills is due to the wrong persons posted there. These people do not have the knowledge of the working of these plants. The Town Administrator who is posted there does not know his job well. I am sure the present dynamic Minister will take immediate action to post suitable persons.

I have heard a lot of talk about the loss sustained on account of the purchase of scrap and coal. But the actual state of affairs is quite different. The production in the Mills is about one lakh tonnes per annum. When the steel is converted into steel, only 80 per cent of the raw material will be good (o.k) and the rest will be a scrap. About 40,000 tonnes of scrap should be there in the Mills. Even after this episode, I want to know whether the financial controller has evinced interest in saving the loss to the Factory. He is simply living in the well furnished bungalow. I would have appreciated him had he made attempts to save the loss to the Factory. Empty lorries will be coming and going. Somebody will weigh the scrap and payment will be made. The money will go to some outsiders who will not be associated with the supply of scrap. The Finance Director who has come all the way from Delhi has not done anything to avoid such swindling of money. He is living in a bungalow which has been recently furnished at a cost of Rs. 25,000 which information has been furnished in today's answers but the Minister was hesitant to tell us.

I do not like to take much of the time of the House.

I thank the Chair for having given me this opportunity to speak on the Industries Demand.

† Sri AMIER RAHAMATULLA KHAN (Basavangudi).—Mr. Speaker Sir, while welcoming the demand for Industries, I would like to offer few suggestions for the improvement of the working of the Department. We are thinking of decentralisation of planning. This would be an important step in the right direction as that would help the industrial development in our state. The initiative for the industrial development should come from the districts. This will happen only if local enterpreneurs are encouraged. The persons with technical qualifications in the State must be encouraged to form themselves into groups or associations to assess the industrial potential of this State and plan the industries on the economic basis. This would help in the proper utilsation of the indigenous resources. They must be given proper guidance from the Industries Department.

The Assistant Directors of Industries working in the Districts must have the knowledge of planning. They must be in a position to know the technique and the commercial aspect of the industries. The leading banks and other co-operative institutions must be given directions to help the district entrepreneurs and they must also be advised to have on their staff Engineers. The entrepreneurs must be helped in obtaining licences at Bangalore itself because they are required to go to Delhi for obtaining licences. Suitable procedural changes must be effected in the grant of licences.

The quota distribution should be made properly. At present quota is supplied to some bogus firms and this should be avoided. The lands granted to the bogus firms must be cancelled immediately.

(SRI AMIER RAHAMATULLA KHAN)

If the Government were to take steps on the lines I have indicated I am sure, we will be able to have rapid industrial development in our State.

I request the Hon. Minister to give impetus to the officers of Industries Department. He may direct the officers to take decisions for the starting of industries in consultation with the people who are interested in the setting up of industries.

With these few words, I conclude my speech.

I thank the Chair for having given me an opportunity to speak on this demand.

MR. DEPUTY SPEAKER.—A little while ago, some hon. Members asserted that the list supplied by the Whips should be adhered to. At that time I had made it abundantly clear that it is the unfettered right of the Chair to call upon the hon. members to speak and that discretion cannot be challenged by anybody. In support of my statement, I would just read a paragraph from the 'Practice of Procedure of Parliament by Kaul'. Selection of Members--page 742 :

> " The Speaker determines the order in which he would call upon the members to speak. A member cannot indicate order in which he is to be called. List of spokesmen are supplied by whips of the Parliamentary Party Groups to enable the speaker to select members so as to ensure well organised and balanced debate. He is however not bound by such lists prepared. It can be changed by the speaker."

The position has been made very clear earlier by me that the rules and regulations are to be adhered to. I personally request all the members to co-operate with me so that it will be possible to adhere to the rules and procedure.

SRI K. M. NAGANNA (Chickpet).—I submit to the Chair that nobody questioned the right of the Speaker to call the members to speak. We are prepared to adhere to your decision.

MR. DEPUTY SPEAKER.—I very much appreciate the gesture of the hon. members.

† C. M. ARUMUGAM.—Mr. Deputy Speaker Sir, at the outset, I support the statement made by the Leader of the Opposition so far as this Legislature Secretariat is concerned. I am one with him in so far as increasing the strength of the Kannada Reporters. We must have more number of reporters and they should have fair treatment so far as their emoluments are concerned. Their scale of pay should be on par with the pay scales of Maharashtra and Andhra Pradesh.

I would like to bring to the notice of this August House that the members of the Assembly gave a lot of promises before they were elected. Quite a lot of promises have been held out to the voters of

their respective constituencies. The Ruling Party have proclaimed that they are going to establish a socialistic pattern of Society. They have held out this promise both in their speeches and in resolutions at Bombay. I am one of those who admire the Prime Minister Smt. Indira Gandhi for her talk. She wants to make the people of this country happy. Sri D. Devaraj Urs is one of the admirers of Mrs. Gandhi. Even the Congress President is one of the admirers of Mrs. Gandhi. Our Chief Minister and others in the State are creating a good impression in the minds of the public about Smt. Indira Gandhi. The people, with the result, are under impression that the ruling party will do something good for them. The workers are in a belief that their lot will be improved. I have seen in the report that the ruling party is planning to increase the emoluments of the members of the Assembly by 50 per cent. If they do so, I think, it will have a demoralising effect. They will have no face to go to their constituencies. How can they increase their salary by 50 per cent when the poor man and an ordinary worker are still struggling for two square meals a day ? The plea for increasing the emoluments is that they are spending something towards telephone and all that. To meet this expenditure they are increasing their salary to 50 per cent. They may incur the expenditure for their own purposes. They may incur this expenditure for their household affairs. For this, do you want to increase your salary by Rs. 200 ? Is it desirable that the expenditure of the M.L.A.s should be met by the Government itself ? When you go out on tour, the Revenue Inspector has to make arrangements for your food and coffee. He has to meet the expenditure. You are in majority. But you are representing the common people, the workers, Scheduled Castes and Scheduled Tribes. The poor people have voted you to power. The people will be dissatisfied if your salary is increased by Rs. 200.

Mr. DEPUTY SPEAKER.—Voting has not been done by caste-wise.

Sri C. M. ARUMUGAM.—The proposal to increase the salary of the Legislators should be dropped in the interest of the State. I think the Chief Minister will kindly realise and do the needful in the matter. I request you to save your party and also save the State of Mysore by withdrawing this proposal.

You are spending a lot of money for election purposes. But the accounts given are not correct. If you are for the poor and poor should be elected, the expenditure should be reduced and get a good name. You can improve your party position also.

When the Prime Minister came here, an amount of nearly Rs. 60,000 to 1 lakh was spent. This amount should not have been spent by the State Exchequer. On the other hand this amount should be distributed among the Congress Candidates. It is the decision of the Supreme Court. The expenditure of an election should also be reduced to Rs. 2,000. Sri D. Devaraj Urs conducted a number of

(SRI C. M. ARUMUGAM)

meetings in connection with his election in Hunsur Constituency. He did it as Chief Minister of the State. The expenditure on election by the State Ministers and the Central Ministers should be stopped. Therefore, any expenditure made for the party in connection with election, should be equally distributed among the candidates. Justice Hegde has opined that even Rs. 20 more than the limit in connection with the election should be borne by the candidate. This is what the Supreme Court has said. Sri D. Devaraj Urs has conducted several meetings and his Ministers had gone to Hunsur for canvassing. The expenditure in this connection should be taken into consideration. The Congress President had also visited Hunsur. According to the party principle, a candidate should spend a certain amount. But in this particular case the expenditure might be more than the stipulated amount. Sri D. Devaraj Urs should specify how much he has spent for conducting election meetings and for all that.

So far as the judicial administration is concerned, I wish to draw attention to one point, which nobody touched. Some time back, the Governor laid the foundation stone for the extension of High Court building. I do not know for what reason-I do not know if it is for a political reason, the construction of the building has not been taken up. The Minister for Justice or Law may please look into this matter.

5-00 p.m.

Next, I want to say a few words about the Industries. But before I go to the Industries, I will take one other important subject, the Tourism Development Corporation. It comes under 'Capital Outlay and Economic Development'. It is of course, functioning. I am not going to say what its functions are, because the Hon. Chief Minister knows about these Tourist Homes, Tourist Houses, Guest Houses and the recreation and entertainment provided to the tourists. I had an occasion to visit Mysore. There was a little stinking all over ; very bad stinking. I think you may mistake me if I say it is political stinking. The stinking is about the two hotels-the Metropolitan Hotel and Hotel Brindavan. Sir, these have been managed by one Mr. Kapoor of Bombay, who is a big proprietor of several hotels. He is paying about 3,000 rupees. One interesting thing-peculiarity about it is that the Government-the P.W.D. are maintaining the building and the Municipality are looking after the sanitation. Ashoka Hotel is being managed by the Government of India—by the Corporation. So many hotels in Delhi have been managed by the Government of India-Tourist Development Corporation. Here, I do not know why it should be given to a private party who pays only very little when there are persons who can pay more. Government should give serious thought to this matter, because the Commissioner declared that it should be handed over to the Government. They must think seriously as to what they should do in

this regard. The public are asking why the hotels are given to this Kapoor again when his term of ten years was over. After this lease period of ten years was over, again he was given one year's further lease. The Governor was all in all under the President's Rule. I want to know the details of all the orders passed during the President's Rule by His Excellency the then Governor, Sri Dharma Veera. Government should look into it. He was given one more year's extension. The Municipality passed a resolution in this behalf and the people are also asking why Government has not taken any action to take them over from Mr. Kapoor.

So far as the Industry is concerned, I want to say something about the Bhadravathi Iron and Steel Works Limited. My hon. friends Mr. H. D. Devegowda and Mr. S. Bangarappa have said enough about it but I want to ask only one point. Why is the present Chairman, who was posted as Chairman of M.S.E.B., was transferred to Bhadravathi? Was there any political motive? Are you effecting transfers without following any rules of procedure and transferring officers as you like? An officer is posted to some place and very shortly afterwards, he is again transferred to some other place. What was wrong with the previous Chairman or the present Municipal Commissioner who is here? I do not want to mention names, because you will raise objection. These are the two points I wanted to mention.

All the private Iron and Steel Industries are making profits. Loans are converted into share amounts here. You say there is some profit now. I want to know why there was loss all these years. This also requires to be clarified. Then I want to say one thing about the Commissioners of Industries. Instead of calling them Secretaries, you call them Secretary and Commissioner. Call him either Secretary or Commissioner. Let there be one nomenclature. He is also the Commisioner; he is also the Secretary. Why do you not call him the Secretary? Government of India also calls by the name of Secretary. You may say: 'Secretary' is a glorified term for a Head Clerk. The same person is in all departments as an Adviser, as a Director or Chairman. What is he meant for? Is he inevitable? Can you not put some other man? Retired persons are being given extension of service. I only submit that if somebody wants to escape from probe, and wants to retire, you are going to help that person or persons by giving them re-employment in the Industries Department.

There is an Aluminium factory in Belgaum, a place in Bambay-Karnatak area. Of course, Belgaum is a disputed area and I do not know whether it has to go to Bombay or Mysore. There, in that factory, some big man who held a big post in the country, is the Chairman to-day. I do not want to mention his name. What I am saying is that the Concern is making a very good profit. It is a private concern. The Hon. Chief Minister of course, is not concerned with these affairs, because he has come to power only three months ago. One of the raw materials for this industry is electricity or electrical energy

(SRI C. M. ARUMUGAM)

or electric power, whatever you may call it. He has been given some concessions to start various factories in Mysore State—Belgaum and other places. It is a very good thing that such factories are encouraged. But, what is the period covered by the agreement ? You have entered into agreement for a period of thirty years. It is alright if it is for one year, or two years, or three years or even five years. But you have entered into an agreement for 25 or 30 years. When I say 'you' I do not refer to the present Government, since that was constituted about three months ago. But it is a continuous process. The Concern is continuing to make good profit. In the agreement, nothing is mentioned about the revision of rates for supply of electricity. The agreement never says that they could revise the rates for supply of electricity.

I know there are hundreds of big officers. We have them in the Law Department and in other Departments. As Mr. Bangarappa put it, some factory close to our headquarters, and the GEF have entered into an agreement where they have to supply one lakh fans at Rs. 125 to Bajaj. The cost of the end product is 200 whereas they have entered into a contract with Bajaj to supply at a lower price. The selling price of Bajaj is as follows :—

42 inches	Rs. 240
36 inches	Rs. 224
48 inches	Rs. 286
56 inches	Rs. 301
Table fans	Rs. 230

Sri D. DEVARAJ URS.—Excuse me. When was this Contract entered into ?

Sri C. M. ARUMUGAM.—I do not have the agreement with me. The GEF is working at a loss. On a particular day they have bought stock to the factory worth 99 lakhs. Something is wrong there. You are posting IAS officer as Director who knows nothing about the factory. That is wrong. Proper men have not been posted to proper place.

Now about Hatti Gold Mines-I have read press reports that gold worth 60 lakhs has been held up at the Reserve Bank. It is not disposed of and the financial position of the Mines is in a serious situation. Further the Government of India have given them four crores. Very recently it has been said that gold mining has not been economical because the rate has been fixed by the International Monetary Fund of which the Government of India is also a Member. Recently the KGF gold mining company has been converted into a company with 5-6 crores and this Mysore Government has no hold on it. Formerly an officer of Mysore Government was the Chairman or the Managing Director of that company. But now he is replaced by an officer of the Government of

India since it covers the entire country, why not we merge this with the Barath Gold Mining Company where 50 per cent would be Mysoreans who will fill the post of Chairman or Manager or Managing Director. That means the Mines Department will give enough loans and the Government of India will take the burden of disposing of the gold.

Sri S. M. KRISHNA.—The Hatti Gold Mines has declared a dividend and it has been doing reasonably well.

Sri C. M. ARUMUGAM.—it is a open hearth mine, Sir. It is not possible there to go deeper in the Hatti Mines. It is not highly mechanised as in the case of KGF, or the gold Mines in Australia or Natal. Instead of taking that burden, what I submit is that the Bharat Gold Mining Co. has been constituted by the Government of India in the interest of the whole country, why not merge with it. You can think of that proposal.

Sir, for the entire industries in the State of Mysore, there is no staff pattern. What is the staff you require: what would be the establishment charge, labour charges. There are so many general managers so many managing directors and others at that, every body wants to become a chairman or managing director, like the Dutch army where there were more generals than the army. Secondly, there is no quality control. I need not say that the transformers manufactured by the GEF were rejected out-right by the Maharashtra, U.P. and even Hariyana because they were defective, because there is no design. What they had 30 years ago when the factory was established, the same arrangement still continues. Nobody thought of it. So many people without any background and without any knowledge or experience are put into industries. Sometimes, they become a menace. Somebody is made Chairman and somebody is given licence to manufacture stainless steel. There was a lot of demand for stainless steel and the stainless steel that was given on permit was misused. That was at the time of the previous Ministry. You take action now. Mr. S. M. Krishna who has got a lot of interest in industry, can take action now.

Now about the Vijayanagar Steel plant. It is a new plant. With great efforts of the Industries Minister and Chief Minister we have at last got an assurance that the industry is going to come up. It was being said previously that the Government of India were thinking in some other direction. Some rumours were there and we have now got it. I have got these questions to be considered by the Minister.

One : there are three steel plants sanctioned, one at Vizag, one at Vijayanagar each of 700 crores and the third plant is at Salem of 350 crores. I was told subject to correction, this Salem Steel plant of 350 crores is licensed to manufacture stainless steel which has a lot of market and though the Vijayanagar Steel Plant is of 700 crores, you are permitted to make only structurals and pig-iron. Would it be possible for you to ask the Government of India to permit us to manufacture

(SRI C. M. ARUMUGAM)

whatever we want, whether stainless steel or anything we want and is it possible for you to get permit or licence to manufacture only certain items of steel ?

Secondly, the location of the Vijayanagar Steel Plant is going to be a sort of competition with Mr. Ghorpade-not our Finance Minister, but the Managing Director and Chairman of the Sandoor Mines. That also you must think about.

Sri S. M. KRISHNA.—There is no such thing.

Sri C. M. ARUMUGAM.—Further, it appears in regard to location, that if you locate it at the village now spoken of, it will cost Rs. 40 crores more than the estimate and it is said that because some people interested have insisted, they have selected that place, and that is going to cost Rs. 40 crores more. You have got to get water from the Thungabhadra Reservoir and there is no other water source. How are you going to use the water ? These are the things I want our Hon'ble Minister for Industries to look into.

Sir, on the whole, I suggest that certain industries owned by the Government are not working properly. Therefore, I suggest that they must constitute an expert body consisting of members drawn from the General Pool to go into the details of the working of the industries and try to work these industries profitably based on the findings of that committee.

Thank you, Sir.

† ಶ್ರೀ ಮಲ್ಲಿಕಾರ್ಜುನ್ (ಗುರಮಿಟ್ಕಲ್).—ಅಧ್ಯಕ್ಷರೇ, ಈವೊತ್ತು ಮಂಡಿಸಿದಂಥ ಬೇಡಿಕೆಗೆ ಬೆಂಬಲ ಕೊಡುತ್ತಾ ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್ ವಿಚಾರವಾಗಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಹಿಂದೆ ಇದ್ದ ಸರ್ಕಾರ ಎಂ.ಎಸ್.ಕೆ. ಮಿಲ್ ಗುಲ್ಬರ್ಗಾದಲ್ಲಿ ಏನು ಇದೆ ಅದರ ಸಲುವಾಗಿ ಒಂದು ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಭದ್ರಾವತಿ ಕಾರ್ಖಾನೆಯಲ್ಲಿ ಚಂದಪ್ಪ ಪಾಟೀಲ್ ಏನು ಛೇರ್ಮನ್ ಆಗಿದ್ದಾರೋ ಅವರನ್ನೇ ಎಂ. ಎಸ್.ಕೆ. ಮಿಲ್‌ಗೂ ಛೇರ್ಮನ್‌ರಾಗಿ ಹಿಂದೆ ಇದ್ದ ಸರ್ಕಾರದವರು ನೇಮಿಸಿದ್ದಾರೆ. ಹಿಂದೆ ಇದ್ದ ಸರ್ಕಾರ ಯಾವ ಉದ್ದೇಶದಿಂದ ಎಂ. ಎಸ್. ಕೆ. ಮಿಲ್‌ಗೆ ಹಣವನ್ನು ಒದಗಿಸಿ ಕೊಟ್ಟಿತ್ತೊ ಆ ಉದ್ದೇಶ ಸಫಲವಾಗುತ್ತಾ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಏತಕ್ಕೆಂದರೆ ಅದು ಡೆಲ್ಲಿ ಕ್ಯಾಪಿಟಲಿಸ್ಟರುಗಳಾದ ಶ್ರೀ ಕೇಸರಿವಾಲ ಮತ್ತು ಹೆಚ್. ಆರ್. ಕೇಸರಿವಾಲ ಅವರಿಗೆ ಕೊಟ್ಟಂತಾಗಿದೆ. ಸರ್ಕಾರದವರು ಲೇಬರರ್ಸ್‌ಗೆ ಒಳ್ಳೆಯದಾಗಲಿ ಎನ್ನುವ ಉದ್ದೇಶದಿಂದ ಈ ದುಡ್ಡು ಕೊಟ್ಟಿದ್ದರೇ ವಿನಃ ಅವರ ಸ್ವಂತ ಉಪಯೋಗಕ್ಕಲ್ಲ. ಎಂ.ಎಸ್.ಕೆ ಮಿಲ್‌ನಲ್ಲಿ ಹೋದ ವರ್ಷ 20 ಲಕ್ಷ ರೂಪಾಯಿ ಲಾಸ್ ಆಯಿತು, ಈ ವರ್ಷ 16 ಲಕ್ಷ ರೂಪಾಯಿ ಲಾಸ್ ಆಯಿತು. ಈ ರೀತಿಯಾಗಿ ವರ್ಷೇ ವರ್ಷೇ ಈ ಮಿಲ್ ಲಾಸ್ ಆಗುತ್ತಾ ಇದೆ. ಇದಕ್ಕೆ ಕಾರಣಕರ್ತರು ಯಾರು ಎಂದರೆ ಹಿಂದಿನ ಸರ್ಕಾರದಲ್ಲಿದ್ದ ಕೈಗಾರಿಕಾ ಮಂತ್ರಿಗಳಾಗಿದ್ದ ಶ್ರೀಮಾನ್ ರಾಜಶೇಖರ ಮೂರ್ತಿಯವರು. ಅವರು ಗುಲ್ಬರ್ಗಾಕ್ಕೆ ಬಂದಿದ್ದರು. ಆವಾಗ ಎಂ.ಎಸ್.ಕೆ. ಮಿಲ್ ಕೆಲಸಗಾರರು ಇವರನ್ನು ಕಂಡು ನಮಗೆ ಆಲ್ ಇಂಡಿಯಾ ಟೆಕ್ಸ್‌ಟೈಲ್ ವೇಜ್ ಬೋರ್ಡ್‌ನ್ನು ಕೊಡಿಸಿ ಕೊಡಬೇಕೆಂದು ಅರಿಕೆ ಮಾಡಿಕೊಂಡರು. ಶ್ರೀಮಾನ್ ರಾಜಶೇಖರ ಮೂರ್ತಿಯವರು ಹೇಳಿದರು ಅದು ಲಾಸ್‌ನಲ್ಲಿ ನಡೆಯುತ್ತಾ ಇದೆ ಆದಕಾರಣ ಕೆಲಸಗಾರರಿಗೆ ಡಿಯರ್‌ನೆಸ್ ಅಲೋಯೆನ್ಸ್ ಎನ್‌ಹಾನ್ಸ್ ಮಾಡುವುದಕ್ಕಾಗುವುದಿಲ್ಲ ಎಂದು. ಆಗ ಕೆಲಸಗಾರರು ರಾಜಶೇಖರಮೂರ್ತಿ

ಮೈದಾಬಾದ್ ಎಂದು ಕೂಗಿದರು. ಆಗ ರಾಜಶೇಖರ ಮೂರ್ತಿಯವರು ಆ ಮಿಲ್‌ನ್ನು 2 ತಿಂಗಳು ಕಾಲ ಬಂದ್ ಮಾಡಿ ಲಾಕ್‌ಔಟ್ ಮಾಡಿದರು. ಇದರಿಂದ ಕೆಲಸಗಾರರಿಗೆ ಕೆಲಸ ಇಲ್ಲದ ಹಾಗೆ ಆಯಿತು, ಸರ್ಕಾರಕ್ಕೆ ಲಾಭವೂ ಇಲ್ಲದಂತಾಯಿತು. ಆದುದರಿಂದ ಇದಕ್ಕೆ ಯಾರು ಕಾರಣ ಭೂತರು ಎನ್ನುವುದನ್ನು ತಿಳಿಯುವುದಕ್ಕೆ ಒಂದು ಎನ್‌ಕ್ವೈರಿ ಕಮಿಟಿಯನ್ನು ನೇಮಿಸಬೇಕು. ಶ್ರೀಮಾನ್ ಕೇಸರಿವಾಲಗಳು ಇದರಲ್ಲಿ ಈ ಮಿಲ್‌ಗೆ ಒಂದು ನಯಾಪೈಸೇ ಕೂಡ ಇನ್‌ವೆಸ್ಟ್ ಮಾಡಿಲ್ಲ. ಆದರೆ ಈವೊತ್ತಿನ ದಿವಸ ಅವರು ಲಕ್ಷಾಧಿಪತಿಗಳಾಗಿ ಲಕ್ಷಗಟ್ಟಲೆ ಹಣವನ್ನು ತೆಗೆದುಕೊಂಡು ಹೋಗುತ್ತಾರೆ. ಎಷ್ಟು ಟಿ. ಎ. ತೆಗೆದುಕೊಂಡು ಹೋಗಿದ್ದಾರೆ ನೋಡಿ. ಅವರ ಬ್ಯಾಲೆನ್ಸ್ ಷೀಟ್ ತೆಗೆದು ನೋಡಿದರೆ ಅವರು ಟಿ. ಎ. ಗಾಗಿ 1 ಲಕ್ಷ 50 ಸಾವಿರ ರೂಪಾಯಿ, ಟೆಲಿಫೋನ್ ಮತ್ತು ಟ್ರಂಕ್ ಕಾಲ್ ಛಾರ್ಜಸ್‌ಗಾಗಿ 60 ಸಾವಿರ ರೂಪಾಯಿ ತೆಗೆದುಕೊಂಡು ಹೋಗಿದ್ದಾರೆ, ಅವರು ಇರತಕ್ಕಂಥ ಸ್ಥಳಗಳು ಡೆಲ್ಲಿ, ಕಲ್ಕತ್ತಾ, ಬಾಂಬೆ ಮತ್ತು ಬೆಂಗಳೂರು. ಅವರು ತಿಂಗಳಿಗೊಂದು ಸಾರಿ ಬಂದು ಎಂ.ಎಸ್.ಕೆ. ಮಿಲ್‌ಗೆ ಭೇಟಿ ಕೊಟ್ಟು ತಮ್ಮ ಮಾಮೂಲ್ ತೆಗೆದುಕೊಂಡು ಮನೆಗೆ ಹೋಗುತ್ತಾರೆ. ಇದರ ಬಗ್ಗೆ ಸರ್ಕಾರ ಲಕ್ಷ ಕೊಡುತ್ತಾ ಇಲ್ಲ. ಅಲ್ಲಿರತಕ್ಕಂಥ ಲೇಬರರ್ಸ್‌ಗೆ ಆಲ್ ಇಂಡಿಯಾ ಟೆಕ್ಸ್‌ಟೈಲ್ ವೇಜ್ ಬೋರ್ಡ್‌ನ್ನು ಇಂಪ್ಲಿಮೆಂಟ್ ಮಾಡಬೇಕು ಎಂದು ಕೇಳಿದಾಗ ಹಿಂದಿನ ಕೈಗಾರಿಕಾ ಮಂತ್ರಿಗಳು ಅದೇ ಛಲ ಹಿಡಿದುಕೊಂಡು ವರ್ಕರ್ಸ್‌ಗೆ ಯಾವ ಸೌಕರ್ಯವನ್ನೂ ಒದಗಿಸಿ ಕೊಡಲಿಲ್ಲ. ಅದಕ್ಕೆ ನಾನು ಹೇಳುವುದು ಏನೆಂದರೆ ಈ 2 ತಿಂಗಳಿನಲ್ಲಿ ಲಾಸ್ ಏನು ಆಯಿತು ಇದಕ್ಕೆ ಹಿಂದಿನ ಸರ್ಕಾರವೇ ಕಾರಣವಾದ್ದರಿಂದ ಸರ್ಕಾರದವರು ಎನ್‌ಕ್ವೈರಿ ನಡೆಸಬೇಕು ಎಂದು ಹೇಳುತ್ತೇನೆ.

ಇನ್ನು ಶ್ರೀ ಚಂದಪ್ಪ ಪಾಟೀಲ್‌ರವರ ಬಗ್ಗೆ ಹೇಳುವುದಾದರೆ ಅವರಿಗೆ ಟೆಕ್ಸ್‌ಟೈಲ್ ಬಗ್ಗೆ ಏನೂ ಮಾಹಿತಿ ಇಲ್ಲ. ಅವರು ಪ್ರತಿ ತಿಂಗಳೂ ಬರುತ್ತಾರೆ. ಬಂದು ತಮ್ಮ ಟಿ.ಎ. ಮತ್ತು ಡಿ.ಎ. ಮಾಡಿಕೊಂಡು 4 ಜನಗಳ ಜೊತೆಗೆ ಚಹಾ ಕುಡಿದುಕೊಂಡು ಹೊರಟು ಹೋಗುತ್ತಾರೆ. ಅದಕ್ಕೆ ಬದಲು ನೀವು ಯಾರನ್ನಾದರೂ ಟೆಕ್ಸ್‌ಟೈಲ್ ಎಕ್ಸ್‌ಪರ್ಟ್‌ನ್ನು ಕಳುಹಿಸಿ ಪ್ರತಿವರ್ಷವೂ 20 ಲಕ್ಷ ರೂಪಾಯಿ ಲಾಸ್ ಆಗುತ್ತಾ ಇರುವುದನ್ನು ತಪ್ಪಿಸಲು ಪ್ರಯತ್ನ ಮಾಡಬೇಕು. ಹಿಂದೆ ಇದ್ದ ಸರ್ಕಾರದವರೂ ಲೇಬರರ್ಸ್‌ಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಒಂದು ಕೋಟಿ ರೂಪಾಯಿ ಕೊಟ್ಟಿದ್ದರು. ಅದು ಸರಿಯಾಗಿ ಖರ್ಚಾಗಿದೆಯೋ ಇಲ್ಲವೋ ಎನ್ನುವುದನ್ನು ನೋಡಬೇಕು ಏತಕ್ಕೆಂದರೆ ಹಿಂದೆ ಇದ್ದ ಸರ್ಕಾರ ಇದರ ಬಗ್ಗೆ ಗಮನ ಕೊಟ್ಟಿಲ್ಲ.

ಅದೇ ರೀತಿ ಇನ್ನೊಂದು ವಿಷಯ ಹೇಳುವುದಾದರೆ ಅಲ್ಲಿಗೆ ಹೊಸ ಮಿಷನರಿ ಬೇಕಾದರೆ ಹಳೇ ಮಿಷನರಿ ಮಾರಿಬಿಟ್ಟು ಅವರಿಗೆ ಪರಿಚಯ ಇದ್ದಂಥ ಕಡೆ ಇಂಡೆಂಟ್ ಹಾಕಿಸಿಬಿಟ್ಟು ಫಾಲ್ಸ್ ಅಕೌಂಟ್‌ನ್ನು ತೋರಿಸುತ್ತಾರೆ. ಈ ಮಿಲ್‌ನಲ್ಲಿ ಲಕ್ಷಾಂತರ ರೂಪಾಯಿ ಲಾಸ್ ಆಗುತ್ತಾ ಇದೆ. ಲೇಬರರ್ಸ್‌ಗೂ ಲಾಭವಾಗುತ್ತಾ ಇಲ್ಲ, ಸರ್ಕಾರಕ್ಕೂ ಲಾಭವಾಗುತ್ತಾ ಇಲ್ಲ. ಒಂದು ಪೈಸೇ ಕೂಡ ಈ ಮಿಲ್‌ಗೆ ಇನ್‌ವೆಸ್ಟ್ ಮಾಡದೇ ಇರತಕ್ಕಂಥ ಕೇಸರಿವಾಲ್‌ಗಳು ಮಿಲ್ ಓನರ್ ಆಗಿಬಿಟ್ಟಿದ್ದಾರೆ. ಅಪೋಸಿಷನ್ ಲೀಡರ್‌ನವರು ಒಂದು ಮಾತು ಹೇಳಿದರು ಏನೆಂದರೆ ಎಷ್ಟೋ ಮೈಸೂರಿನವರು ಹೊರಗಡೆ ಹೋಗಿ ಕೆಲಸ ಮಾಡಿ ಹೆಸರು ತೆಗೆದುಕೊಂಡಿದ್ದಾರೆ ಎಂದು. ಅದು ಹೆಮ್ಮೆಯ ಮಾತು. ಹೀಗಿರುವಾಗ ಡೆಲ್ಲಿಯಲ್ಲಿರುವ ಕೇಸರಿವಾಲ್, ಹೀರೇವಾಲ್, ಆ ಲಾಲ್ ಈ ಲಾಲ್ ಅನ್ನುವವರನ್ನು ಏತಕ್ಕೆ ಈ.ಎಂ.ಎಸ್.ಕೆ.ಮಿಲ್‌ಗೆ ಕರೆಸಬೇಕಾಗಿತ್ತು ? ಅವರು ಏನು ಮಾಡಿದ್ದಾರೆ ಎಂದರೆ ಇಲ್ಲಿ ಒಂದು ಅಪಾಯಿಂಟ್‌ಮೆಂಟ್ ಕೊಡಬೇಕಾದರೆ ರಾಜಾಸ್ತಾನ ಮತ್ತು ಡೆಲ್ಲಿಯಿಂದ ಕರೆಸಿ ಕೊಡುತ್ತಾರೆ. ಇದಕ್ಕೆ ಸರ್ಕಾರ ಗಮನ ಕೊಡುತ್ತಾ ಇಲ್ಲ. ಇನ್ನೊಂದು ವಿಷಯ ಹೇಳಬೇಕಾದರೆ ಅವರ ಕಾರಿಗೆ ಪ್ರತಿವರ್ಷವೂ 22 ಸಾವಿರ ರೂಪಾಯಿ ಖರ್ಚು ಆಗಿದೆ ಮತ್ತು ಲೀಗಲ್ ಛಾರ್ಜಸ್ 30 ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅದಕ್ಕಾಗಿ ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅವರು ಏನು ಮಾಡಿದ್ದಾರೆ ಎನ್ನುವುದನ್ನು ಪರಿಶೀಲಿಸಲು ಸರ್ಕಾರದ ವತಿಯಿಂದ ಒಬ್ಬ ಅಕೌಂಟ್ ಆಫೀಸರ್ ಮತ್ತು ಒಬ್ಬ ಲೇಬರ್ ವೆಲ್‌ಫೇರ್ ಆಫೀಸರ್‌ನ್ನು ಕಳುಹಿಸಿಕೊಡಬೇಕು. ಈ ಮಿಲ್‌ಗೆ ಒಂದು ಕೋಟಿ ರೂಪಾಯಿ ಸರ್ಕಾರ ಗ್ರಾಂಟ್ ಕೊಟ್ಟಿದ್ದೂ ಕೂಡ ಲಾಸ್ ಆಗಿದೆ. ಹಿಂದಿನ ಸರ್ಕಾರದವರು ಯಾವ ಉದ್ದೇಶದಿಂದ ಕೊಟ್ಟಿದ್ದರೋ ಅದು ಸಫಲವಾಗುತ್ತಾ ಇಲ್ಲ. ಆದಕಾರಣ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈವೊತ್ತು ಈ ಮಿಲ್ ಲಾಸ್ ಆಗುವುದಕ್ಕೆ ಕಾರಣ ಏನೆಂದರೆ ಶ್ರೀ ಸಿ. ಕೆ. ಕೇಸರಿವಾಲ, ಶ್ರೀ ಹೆಚ್. ಆರ್. ಕೇಸರಿವಾಲ, ಶ್ರೀ ಸತೀಶ್‌ಚಂದ್ರ, ಶ್ರೀ ರಮೇಶ ಚಂದ್ರ ಮತ್ತು ಶ್ರೀ ಚಂದಪ್ಪ ಪಾಟೀಲ್ ಈ 5 ಮಂದಿ ಡೈರೆಕ್ಟರುಗಳಾಗಿದ್ದಾರೆ. ಈ 5 ಜನ ಡೈರೆಕ್ಟರ್ಸ್‌ನಲ್ಲಿ ರಮೇಶ ಚಂದ್ರ ಅವರು ಒಬ್ಬರು ಬಿಟ್ಟು ಬೇರೆ ಯಾರಿಗೂ ತಾಂತ್ರಿಕ ಜ್ಞಾನ ಇಲ್ಲ. ಇಂಡಸ್ಟ್ರೀಸ್ ಬಗ್ಗೆ ಯಾವ ಮಾಹಿತಿಯೂ ಇಲ್ಲ,

(ಶ್ರೀ ಮಲ್ಲಿಕಾರ್ಜುನ್)

ಅಂಥವರನ್ನು ಇಲ್ಲಿಗೆ ನೇಮಿಸಿರುವುದರಿಂದ ಸರ್ಕಾರದ ದುಡ್ಡು ಹಾಳಾಗುತ್ತಾ ಇದೆ. ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಈ ಇಂಡಸ್ಟ್ರಿಸ್ ಯೋಗ್ಯರೀತಿಯಲ್ಲಿ ನಡೆಯಬೇಕಾದರೆ ಸರ್ಕಾರದ ವತಿಯಿಂದ ಒಬ್ಬ ಅಕೌಂಟ್ಸ್ ಆಫೀಸರ್ ಮತ್ತು ಒಬ್ಬ ವೆಲ್‌ಫೇರ್ ಆಫೀಸರ್‌ನ್ನು ನೇಮಿಸಬೇಕು.

ಇನ್ನೊಂದು ವಿಷಯ ಏನೆಂದರೆ ಶ್ರೀಮಾನ್ ಸಿ. ಕೆ. ಕೇಸರಿವಾಲ ಮತ್ತು ಶ್ರೀಮಾನ್ ಹೆಚ್. ಆರ್. ಕೇಸರಿವಾಲ್‌ರವರು ಇದೇ ರೀತಿಯಾಗಿ ಕೆ.ಆರ್. ಮಿಲ್ ಕೂಡ ನಡೆಸುತ್ತಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಕೆ.ಆರ್. ಮಿಲ್‌ನಲ್ಲಿರುವ ಲೇಬರರ್ಸ್‌ಗೆ ಕೊಡುವ ಡಿ. ಎ. 132 ರೂಪಾಯಿಗಳು. ಎಂ. ಎಸ್. ಕೆ. ಮಿಲ್‌ನಲ್ಲಿರುವ ಲೇಬರರ್ಸ್‌ಗೆ ಕೊಡುವ ಡಿ. ಎ. 78 ರೂಪಾಯಿಗಳು. ಸರ್ಕಾರವೇ ಇವೆರಡಕ್ಕೂ ಕ್ಯಾಪಿಟಲ್ ಹಾಕಿ ನಡೆಸುತ್ತಾ ಇದ್ದರೂ ಕೂಡ ಏತಕ್ಕೆ ಈವೊತ್ತಿನ ದಿವಸ ಕೆ. ಆರ್. ಮಿಲ್‌ನಲ್ಲಿರುವ ಲೇಬರರ್ಸ್‌ಗೆ 132 ರೂಪಾಯಿಗಳು, ಎಂ. ಎಸ್. ಕೆ. ಮಿಲ್‌ನಲ್ಲಿರುವ ಲೇಬರರ್ಸ್‌ಗೆ 78 ರೂಪಾಯಿಗಳು ಕೊಡುತ್ತಾ ಇರುವುದು. ಈ ಡಿಸ್ಕ್ರಿಮಿನೇಷನ್ ಏತಕ್ಕೆ? ಇದು ನ್ಯಾಯವೇ? ಈ ಎರಡು ಮಿಲ್‌ಗಳನ್ನೂ ಶ್ರೀ ಸಿ. ಕೆ. ಕೇಸರಿವಾಲ ಮತ್ತು ಹೆಚ್. ಆರ್. ಕೇಸರಿವಾಲ್‌ರವರಿಗೆ ಯಾವ ಟರ್ಮ್ಸ್ ಅಂಡ್ ಕಂಡೀಷನ್ಸ್ ಮೇಲೆ ಕೊಟ್ಟಿದ್ದೀರಿ? ಇದನ್ನು ಲೀಸ್ ಬೇಸಿಸ್‌ಮೇಲೆ ಕೊಟ್ಟಿದ್ದೀರಾ? ಇದರ ಬಗ್ಗೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಗುಲ್ಬರ್ಗ ಡಿಸ್ಟ್ರಿಕ್ಟ್‌ನಲ್ಲಿ ಯಾದಗಿರಿಯಲ್ಲಿ ಸಾಕಷ್ಟು ರಾಮೆಟೀರಿಯಲ್ಸ್ ಇವೆ. ಆದರೂ ಕೂಡ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾ ಇಲ್ಲ. ಆದುದರಿಂದ ಅಲ್ಲಿಗೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಕಳುಹಿಸಿ, ಸರ್ವೆ ಮಾಡಿಸಿ, ಏನು ರಾಮೆಟೀರಿಯಲ್ಸ್ ಸಿಕ್ಕುತ್ತದೆ ಅದನ್ನು ಉಪಯೋಗಿಸಿಕೊಂಡು ಒಂದು ಗ್ಲಾಸ್ ಫ್ಯಾಕ್ಟರಿಯನ್ನು ಹಾಕಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಖಾದಿ ಬೋರ್ಡ್ ವಿಷಯವಾಗಿ ಹೇಳಬೇಕಾದರೆ ಅಲ್ಲಿ ಬಹಳ ಅನ್ಯಾಯ ನಡೆಯುತ್ತಾ ಇದೆ. ಅದನ್ನು ಸೂಪರ್‌ಸೀಡ್ ಮಾಡಿ ಇಲ್ಲವೇ ರೀಕಾನ್ಸ್ಟಿಟ್ಯೂಟ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಗುರುಮಿಟ್‌ಕಲ್‌ನಲ್ಲಿ ಒಂದು ಕಲೆಕ್ಟೀವ್ ಸೆಂಟರ್ ಕೊಡಬೇಕು. ಏತಕ್ಕೆಂದರೆ ಅಲ್ಲಿ ಕೈಮಗ್ಗದವರ ಪಾಪ್ಯುಲೇಷನ್ ಕಡಿಮೆಯಾಗುತ್ತದೆ. ಅದಕ್ಕೋಸ್ಕರ ಪಾಪ್ಯುಲೇಷನ್ ರೇಷಿಯೋವನ್ನು ಮೆಂಟೇನ್ ಮಾಡುವುದಕ್ಕೆ ಒಂದು ಕಲೆಕ್ಟೀವ್ ವೀವಿಂಗ್ ಸೆಂಟರ್ ಕೊಡಬೇಕಾದ್ದು ಆವಶ್ಯಕ ಎಂದು ಹೇಳುತ್ತೇನೆ.

5-30 P.M.

ಇನ್ನೊಂದೇನೆಂದರೆ ಬಡ ಜನರಿಗೆ ಉಪಯುಕ್ತವಾಗುವ ಲೆದರ್ ಬೋರ್ಡ್ ಒಂದನ್ನು ಸ್ಥಾಪನೆ ಮಾಡಬೇಕು. ಯಾವ ರೀತಿ ಖಾದಿ ಬೋರ್ಡ್ ಇದೆಯೋ ಅದೇ ರೀತಿ ಲೆದರ್ ಬೋರ್ಡ್ ಮಾಡಿ ಬಡ ಜನರಿಗೆ ಉಪಯೋಗವಾಗುತ್ತದೆ. ಇಷ್ಟು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

As regards Legislature, in all the States the scale of pay of a Reporter is on par with that of the Section Officer of the Secretariat, but in our State the Tukol Pay Commission has not done justice to them and have given them a lesser scale of pay than the Section Officers. Further, the qualifications prescribed for the Reporters here are higher than those prescribed for Judgment Writers of the High Court. The starting pay of a Reporter is Rs. 200 whereas the starting pay of a Judgment Writer is Rs. 250. This is a discrimination since the qualification of Reporters is higher than those of Judgment Writers. I therefore feel that the Reporters should be given the same scale as that of a Section Officer in the Secretariat.

Due to the heavy load of work on the Reporters during session and non-session time, a special pay is given to them in other States like Andhra and Maharashtra. Similarly, the Reporters of this Legislature should also be given a special pay.

With these few words, I thank the Chair for giving me this opportunity to speak.

ಶ್ರೀ ಎಚ್. ಡಿ. ದೇವೇಗೌಡ.—ಈ ದಿನ 5-30ಕ್ಕೆ ಮಂತ್ರಿಗಳು ಉತ್ತರ ಕೊಡಬೇಕು ಎಂದು ಒಂದು ತೀರ್ಮಾನಕ್ಕೆ ಬಂದಿದ್ದೆವು. ಆದರೆ ಸುಮಾರು 45 ನಿಮಿಷ ಎಷ್ಟು ಸಮಯದವರೆಗೆ ಮಾತನಾಡಲು ಅವಕಾಶ ಕೊಡಬೇಕು ಎಂಬ ವಿಷಯದಲ್ಲಿನ ಚರ್ಚೆಯಲ್ಲಿ ಹೋಯಿತು. ನಮ್ಮ ಕಡೆಯಿಂದ ನಾಲ್ಕು ಜನರು ಮಾತ್ರ ಮಾತನಾಡಿದ್ದಾರೆ. ಆ ಕಡೆಯೂ ಮಾತನಾಡುವವರಿದ್ದಾರೆ. ಆದುದರಿಂದ ಈ ದಿವಸ 7 ಗಂಟೆಯವರೆಗೂ ಮಾನ್ಯ ಸದಸ್ಯರು ಮಾತನಾಡಲು ಅವಕಾಶ ಕೊಟ್ಟು, ನಾಳೆ ಬೆಳಿಗ್ಗೆ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ನನ್ನ ಸಲಹೆ. ನಾಳೆ ಬೆಳಿಗ್ಗೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳದೆ, ಸಾಧ್ಯವಾದರೆ 9 ಗಂಟೆಗೆ ಬದಲಾಗಿ 8-30 ಗಂಟೆಗೆ ಸೇರಬಹುದು. ಮಾನ್ಯ ಸಭಾ ನಾಯಕರು ಇದಕ್ಕೆ ಒಪ್ಪುತ್ತಾರೆಂದು ಭಾವಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಬೆಳಿಗ್ಗೆ 9 ಗಂಟೆಗೆ ಸೇರೋಣ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಕೈಗಾರಿಕೆಯ ಬಗ್ಗೆ ಮಾತನಾಡಬೇಕಾದರೆ ಒಂದು ವಿಷಯವನ್ನು ನಮ್ಮ ಕೈಗಾರಿಕಾ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಮೈಸೂರು ರಾಜ್ಯ 1947ನೇ ಇಸವಿಗೆ ಹಿಂದೆ ಕೈಗಾರಿಕೆಯಲ್ಲಿ ಬಹಳ ಮುಂದುವರಿದ ರಾಜ್ಯವೆಂಬುದಾಗಿ ಹೆಸರಾಗಿತ್ತು. ಯಾವ ದಿವಸದಿಂದ ಜನತಾ ಸರ್ಕಾರ ಮೈಸೂರು ರಾಜ್ಯದಲ್ಲಿ ಬಂತೋ ಆ ದಿವಸದಿಂದ ಕೈಗಾರಿಕೆ ಬಹಳಮಟ್ಟಿಗೆ ಕುಂಠಿತ ಸ್ಥಿತಿಯಲ್ಲಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಉದಾಹರಣೆಯಾಗಿ, ಜನತಾ ಸರ್ಕಾರ ಅಥವಾ ಪ್ರಜೆಗಳಿಂದ ಆಡಳಿತ ನಡೆಸುವ ಸರ್ಕಾರ ಬಂದ ಮೇಲೆ ನಮ್ಮ ಮೈಸೂರು ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳು ಸ್ಥಾಪನೆಯಾದುವು ಮತ್ತು ನೆರೆ ರಾಜ್ಯವಾದ ಮದ್ರಾಸಿನಲ್ಲಿ ಎಷ್ಟು ಕೈಗಾರಿಕೆಗಳು ಸ್ಥಾಪನೆಯಾದುವು ಎನ್ನುವುದನ್ನು ನೋಡಿದರೆ ನಾವು ಬಹಳ ಹಿಂದುಳಿದಿದ್ದೇವೆ. ಇದಕ್ಕೆ ಸರ್ಕಾರದವರ ಕರ್ತವ್ಯಲೋಪ ಕಾರಣವೆಂದರೆ ತಪ್ಪಲ್ಲವೆಂದು ನನ್ನ ಭಾವನೆ. ಬೇಕಾದಷ್ಟು ಕೈಗಾರಿಕೆಗಳು ಮದ್ರಾಸು ರಾಜ್ಯದಲ್ಲಿ ಆಗಿದ್ದರೂ ಅದರಲ್ಲಿ ಅರ್ಧ ಭಾಗ ಕೂಡ ಮೈಸೂರು ರಾಜ್ಯದಲ್ಲ ಆಗಿಲ್ಲ.

ಕೈಗಾರಿಕೆಗಳ ಬಗ್ಗೆ ಮಾತನಾಡುತ್ತ ಒಂದು ನಿದರ್ಶನವನ್ನು ಕೊಡುತ್ತೇನೆ ಮಂಡ್ಯ ಸಕ್ಕರೆ ಕಾರ್ಖಾನೆ ಸ್ಥಾಪಿತವಾಗಿ ಎಷ್ಟೋ ವರ್ಷಗಳಾದುವು. ನಮ್ಮ ಜನತಾ ಸರ್ಕಾರದ ಮೆಲ್ವಿಚಾರಣೆ ಅದಕ್ಕೆ ದೊರಕುವ ಮುನ್ನ ಅದರ ಷೇರ್ ವಾಲ್ಯೂ 10 ರೂಪಾಯಿಗಳಿತ್ತು. ಆಗ ಆ ಷೇರಿನ ಬೆಲೆ 52–60 ರೂಪಾಯಿಗಳವರೆಗೂ ಹೋಗಿತ್ತು. ನಮ್ಮವರು ಆಡಳಿತಕ್ಕೆ ಬಂದ ಮೇಲೆ ಅದರ ಗತಿ ಈಗ ಏನಾಗಿದೆ ಎಂಬುದಾಗಿ ಸರ್ಕಾರದವರೇ ಪರ್ಯಾಲೋಚನೆ ಮಾಡಬೇಕು. ನಮ್ಮ ಕೈಗಾರಿಕಾ ಮಂತ್ರಿಗಳವರಿಗೆ ಮಂಡ್ಯ ಸಕ್ಕರೆ ಕಾರ್ಖಾನೆಯ ಬಗ್ಗೆ ಒಳ್ಳೆಯ ಮಾಹಿತಿ ಇದೆ. ಅವರು ಅದೇ ಜಿಲ್ಲೆಯವರು. ಅವರಾದರೂ ಏಕೆ ಈ ದುರ್ದೆಶೆ ಈ ಕಾರ್ಖಾನೆಗೆ ಬಂತು ಎಂದು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಈ ವರ್ಷ ಒಂದೂವರೆ ಕೋಟಿ ರೂಪಾಯಿ ಲಾಭ ಬಂದಿದೆ.

ಶ್ರೀ ಕೆ. ಎಂ. ನಾಗಣ್ಣ.—1949 ರಿಂದ 1970 ರ ವರೆಗೆ ಅದರ ಗತಿ ಏನಾಗಿದೆ ಎಂಬುದನ್ನು ಹೇಳುತ್ತೀರಾ ?

[MADAM SPEAKER in the Chair.]

ಹೊಸದಾಗಿ ನಮ್ಮ ರಾಜ್ಯದಲ್ಲಿ ಸಿನಿಮಾ ಹಿಡಿಯುವ ಫಿಲಂ ಕಾರ್ಪೊರೇಷನ್ ಮಾಡುತ್ತಿದ್ದೇವೆ. ಅದಕ್ಕೆ ಹಲವಾರು ಕೋಟಿ ರೂಪಾಯಿಗಳನ್ನು ಸರ್ಕಾರ ವೆಚ್ಚ ಮಾಡಬೇಕಾಗಿ ಬರಬಹುದು. ಅದರ ಬಗ್ಗೆ ನಾಗರಿಕರಲ್ಲಿ ಒಳ್ಳೆಯ ಭಾವನೆ ಇಲ್ಲ. ಅವರು ಒಂದು ಲಕ್ಷ ರೂಪಾಯಿ ಷೇರು ಬಂಡವಾಳವನ್ನು ವಸೂಲ್ಮಾಡಿದ್ದಾರೆಂದು ಹೇಳಿರುವ ಹಾಗೆ ಜ್ಞಾಪಕ. ಒಂದು ಲಕ್ಷ ರೂಪಾಯಿ

(ಶ್ರೀ ಕೆ. ಎಂ. ನಾಗಣ್ಣ)

ಷೇರು ಹಣವನ್ನು ವಸೂಲ್ಮಾಡುವುದಕ್ಕೆ ಆಗಿರುವ ಖರ್ಚಿನ ಪ್ರಮಾಣವನ್ನು ನೋಡಿದರೆ ಬಹಳ ಅಂತರವಿದೆ. ಇದು ಮಾನ್ಯ ಮುಖ್ಯ ಮಂತ್ರಿಗಳ ಖಾತೆಯಲ್ಲಿ ಸೇರಬಹುದು ಎಂದು ಕಾಣುತ್ತದೆ. ಕೈಗಾರಿಕಾ ಮಂತ್ರಿಗಳಿಗೇನಾದರೂ ಸೇರುತ್ತದೆಯೋ ಏನೋ ಗೊತ್ತಿಲ್ಲ. ಒಳ್ಳೆಯ ಹೆಸರು ಬರಬೇಕಾದರೆ ಇಲಾಖೆಯಲ್ಲಿ ಬಹಳ ದಕ್ಷರಾದ ಅಧಿಕಾರಿಗಳನ್ನು ಹಾಕಬೇಕು, ಅನುಭವ ವಿರುವವರನ್ನು ಹಾಕಬೇಕು. ನಾಲ್ಕೈದು ಕೋಟಿ ರೂಪಾಯಿ ಮೈಸೂರು ಸರ್ಕಾರ ಖರ್ಚು ಮಾಡಬೇಕಾದರೆ ಅದಕ್ಷರಾದ ಮತ್ತು ಅನುಭವವಿಲ್ಲದ ಅಧಿಕಾರಿಗಳನ್ನು ಹಾಕಿದರೆ ಈ ಕೈಗಾರಿಕೆಯ ಮೇಲೆ ಹಾಕುವ ಹಣ ಪೋಲಾಗುವುದಕ್ಕೆ ಅವಕಾಶವಿದೆ. ಹೆಸರುಘಟ್ಟದ ಬಳಿ 300 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಅಲ್ಲಿ ಅವರು ಏನೇನೋ ಪ್ಲಾನ್ ಹಾಕಿಕೊಂಡಿದ್ದಾರೆ. ಎಷ್ಟರ ಮಟ್ಟಿಗೆ ಅದು ನಡೆಯುತ್ತದೆ ಎಂದು ಯೋಚನೆ ಮಾಡುವುದು ಒಳ್ಳೆಯದು. ದಕ್ಷರಾದ ಅಧಿಕಾರಿಗಳನ್ನು ಹಾಕದ ಹೊರತು ಅಲ್ಲಿ ಕೆಲಸ ಸರಿಯಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಫಿಲಂ ಸ್ಟುಡಿಯೋ ಕೈಗಾರಿಕೆ ಎಲ್ಲಾ ಕಡೆಗಳಲ್ಲಿಯೂ ಸಾಕಷ್ಟು ಸರಿಯಾದ ರೀತಿಯಲ್ಲಿ ಕೆಲಸ ನಡೆಯದೆ ಇರುವುದಕ್ಕೆ ಅವಕಾಶವಿದೆ. ಅದನ್ನು ಕಂಡು ಹಿಡಿಯುವುದಕ್ಕೆ ಬಹಳ ಕಷ್ಟ. ನನಗೆ ಇದರಲ್ಲಿ 30 ವರ್ಷಗಳ ಅನುಭವವಿದೆ. 1940 ನೆ ಇಸವಿಯಲ್ಲಿ ಎಕ್ಸಿಬಿಟರ್ ಆದೆ, 1945 ರಲ್ಲಿ ಡಿಸ್ಟ್ರಿಬ್ಯೂಟರ ಆದೆ, 1952 ರಿಂದ ಪ್ರೊಡ್ಯೂಸರ್ ಆಗಿದ್ದೇನೆ. ಆದ್ದರಿಂದ ಅಲ್ಲಿ ಏನೇನು ನಡೆಯುತ್ತದೆ, ಅದರಲ್ಲಿ ಏನೇನು ಕಷ್ಟಗಳಿವೆ, ಏನೇನು ತೊಡಕುಗಳಿವೆ, ಯಾವ ರೀತಿಯಲ್ಲಿ ಹಣ ಪೋಲಾಗುತ್ತದೆ ಎನ್ನುವುದರ ಅನುಭವವಿದೆ. ಆದುದರಿಂದ ಮಾನ್ಯ ಸರ್ಕಾರದಲ್ಲಿ ಹೇಳುವುದೇನೆಂದರೆ, ಈ ಬಗ್ಗೆ ಬಹಳ ಜಾಗ್ರತೆ ವಹಿಸಿ, ಯಾರೂ ಸರ್ಕಾರದ, ಬಡ ಜನರ ಬಡ ಬೋರೇಗೌಡನ ಹಣವನ್ನು ಪೋಲು ಮಾಡದ ಹಾಗೆ ಸಾಕಷ್ಟು ದಕ್ಷತೆಯಿಂದ ಕೆಲಸ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಬೆಂಗಳೂರು ನಗರದಲ್ಲಿನ ಕೋರ್ಟುಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಕೋರ್ಟುಗಳ ಗತಿ ಏನಾಗಿದೆ ಎಂದರೆ ಕುರ್ಚಿಗಳಿಗೆ ಮೂರು ಕಾಲು ಇದ್ದು ಬ್ಯಾಕ್ ಇರುವುದಿಲ್ಲ, ಹಣ ಕೊಟ್ಟು ಕೋರ್ಟಿಗೆ ಹೋದವರು ಕೂಡುವುದಕ್ಕೆ ಆಸನಗಳಿಲ್ಲ. ಇಂಥ ದುಸ್ಥಿತಿ ಇದೆ. ಕೋರ್ಟಿನ ಆವರಣದಲ್ಲಿ ದೇಹಬಾಧೆ ತೀರಿಸಿಕೊಳ್ಳುವುದಕ್ಕೆ ಸಾಕಷ್ಟು ವ್ಯವಸ್ಥೆ ಕೂಡ ಇಲ್ಲ. ಹೆಣ್ಣು ಮಕ್ಕಳು ನ್ಯಾಯಾಲಯಕ್ಕೆ ಹೋದಾಗ ಅವರ ಗತಿ ಏನು ಎಂದು ಸರ್ಕಾರ ಯೋಚನೆ ಮಾಡಬೇಕಾಗಿದೆ. ಆದುದರಿಂದ ಜನಗಳಿಗೆ ಸಾಕಷ್ಟು ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ನಿಸಾನ್ ಷೆಡ್ಸ್‌ನಲ್ಲಿ ಕೋರ್ಟುಗಳು ನಡೆಯುತ್ತಿವೆ. ಅಲ್ಲಿ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ. ಜನ ನಿಂತುಕೊಂಡೇ ಬರಬೇಕಾಗಿದೆ. ಈ ಅವ್ಯವಸ್ಥೆಗಳನ್ನು ಆದಷ್ಟು ಜಾಗ್ರತೆ ಸರಿಪಡಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ.

ರೇಷ್ಮೆ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿ ಬರುತ್ತದೆ. ನಾನು ಹಿಂದೆ ಒಂದು ಠರಾವನ್ನು ಮಂಡಿಸಿ ಅದರ ಬಗ್ಗೆ ಭಾಷಣ ಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಆದಷ್ಟು ಜಾಗ್ರತೆ ಬಡ ನೇಕಾರರಿಗೆ ಏನಾದರೂ ಒಂದು ರೀತಿ ಮಾಡುವುದಕ್ಕೆ ಯೋಚನೆ ಮಾಡುತ್ತೇನೆ, ಒಂದು ಕಮಿಟಿ ಮಾಡುತ್ತೇನೆ ಎಂದು ಹೇಳಿದ್ದರೆಂದು ಜ್ಞಾಪಕವಿದೆ. ಆ ದೆಸೆಯಲ್ಲಿ ಏನು ಯೋಚನೆ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಈಗ ಕೊಳ್ಳೇಗಾಲದಲ್ಲಿ ಗೂಡು ಹರಾಜು ಹಾಕುತ್ತಾರೆ. ಗೂಡು ಹರಾಜು ಹಾಕುವಾಗ ಮಧ್ಯವರ್ತಿಗಳ ಕೈವಾಡ ಬಹಳವಿದೆ.

ಈ ಮಧ್ಯವರ್ತಿಗಳ ಕೈವಾಡ ಹೇಗೆ ಇದೆಯೆಂದರೆ, ಗೂಡನ್ನು ತಯಾರಿಸತಕ್ಕ ಬಡ ಜನರು ಹಣದ ಅಭಾವದಿಂದ ಇರುವಾಗ ಮಧ್ಯವರ್ತಿಗಳು ಅವರಿಂದ ಗೂಡನ್ನು ತೆಗೆದುಕೊಂಡು ಆಮೇಲೆ ಹರಾಜು ಹಾಕುತ್ತಾರೆ. ಯಾರು ಗೂಡು ತಯಾರು ಮಾಡುತ್ತಾರೋ ಅವರಿಗೆ ಲಾಭವಿಲ್ಲ. ಮಧ್ಯವರ್ತಿಗಳಿಗೆ ಲಾಭ ಹೋಗುತ್ತದೆ. ಇದನ್ನು ತಪ್ಪಿಸಲಿಕ್ಕೆ ಸರ್ಕಾರ ಪ್ರಯತ್ನ ಪಡಬೇಕು ಇನ್ನು ನಮ್ಮ ಮೈಸೂರು ದೇಶದಲ್ಲಿ ತಯಾರಾದಂಥ ಫಿಲೇಚರ್ ಸಿಲ್ಕ್ ಜಪಾನ್ ಮುಂತಾದ ಕಡೆಗಳಿಗೆ ರಫ್ತು ಆಗುವ ಹಾಗೆ ಏರ್ಪಾಡು ಮಾಡಬೇಕು. ಈ ಬಗ್ಗೆ ಕೇಂದ್ರ ಸರ್ಕಾರದಿಂದ 9 ಕೋಟಿ ರೂಪಾಯಿ ನೆರವು ಬರುತ್ತದೆ ಎಂದು ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ರೇಷ್ಮೆ ಬೆಲೆ ವಿಪರೀತ ಜಾಸ್ತಿಯಾಗಿ ಹತ್ತಾರು ಮಗ್ಗಗಳು ಈಚೆಗೆ ನಿಂತುಹೋಗಿವೆ. ಇದರಿಂದ ಮೈಸೂರು ರಾಜ್ಯದಲ್ಲಿ ಕೊನೆಯಪಕ್ಷ ಒಂದುಲಕ್ಷ ಜನರಿಗಿಂತ ಹೆಚ್ಚಾಗಿ ಕೈಮಗ್ಗದ ನೇಕಾರರುಗಳಿಗೆ ಬಹಳ ತೊಂದರೆಯಾಗಿದೆ. ಈ ವಿಚಾರವನ್ನು ಹಿಂದೆ ನಾನು ಮುಖ್ಯಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಿದೆ. ಈಗಂತೂ ಸುತರಾಂ ವ್ಯಾಪಾರ ಇಲ್ಲ. ಕಾರ್ಖಾನೆಗಳವರಿಗೆ ದಿವಸಕ್ಕೆ ಎರಡು ಗಂಟೆಕಾಲ ಕೆಲಸಮಾಡಬೇಕೆಂದು ಹೇಳುತ್ತಿದ್ದಾರೆ. ಇವರು ತಯಾರು ಮಾಡಿದ ಮಾಲು ಖರ್ಚಾಗುತ್ತಿಲ್ಲ. ಏಕೆ ಖರ್ಚಾಗು

ತ್ತಿಲ್ಲ ಎಂದರೆ, ಅದಕ್ಕೆ ಕೋರಿಕೆ ಇಲ್ಲ. ರೇಷ್ಮೆ ತಯಾರು ಮಾಡುವವರಿಗೆ, ಕಕೂನ್ ತಯಾರು ಮಾಡುವವರಿಗೆ ಎಷ್ಟರಮಟ್ಟಿಗೆ ಸರ್ಕಾರ ಸಹಕಾರ ನೀಡುತ್ತದೋ ಅದೇ ರೀತಿ ಸಹಕಾರವನ್ನು ರೇಷ್ಮೆಯಿಂದ ಜವಳಿಯನ್ನು ತಯಾರು ಮಾಡಿ ಬಿಕರಿ ಮಾಡುವವರಿಗೂ ಕೊಡಬೇಕು. ರೇಷ್ಮೆ ಕೈಗಾರಿಕೆಯಿಂದ ಹೊರಗಡೆಯ ದೇಶಗಳಿಗೆ ರಫ್ತಾಗುವ ಮಾಲು ಹೋದ ವರ್ಷ 10 ಕೋಟಿ ರೂಪಾಯಿ ಆಗಿತ್ತು ಎಂದು ಕಾಣುತ್ತದೆ. ಸರ್ಕಾರ ಈ ವಿಚಾರದಲ್ಲಿ ಆಸಕ್ತಿ ವಹಿಸಿ ಹೊರ ದೇಶಕ್ಕೆ ರಫ್ತಾಗುವ ವಸ್ತುಗಳನ್ನು ಮಗ್ಗದಲ್ಲಿ ತಯಾರು ಮಾಡುವುದಕ್ಕೆ ಅವಕಾಶ ಕೊಟ್ಟು ಹೆಚ್ಚಿನ ಹಣ ಸಂಪಾದನೆ ಮಾಡಲಿಕ್ಕೆ ಅವಕಾಶ ಕೊಡಬೇಕು. ಬೆಂಗಳೂರು ನಗರದಲ್ಲಿ ಈದಿವಸ ಈ ಉದ್ಯಮವನ್ನು ಅವಲಂಬಿಸಿರುವ ಜನರು ಹೊಟ್ಟೆಗೆ ಇಲ್ಲದೆ ಸಾಯುತ್ತಿದ್ದಾರೆ. ತಕ್ಷಣ ಅವರ ರಕ್ಷಣೆಗೆ ಹೋಗದಿದ್ದರೆ, ಅವರಿಗೆ ಊಟಕ್ಕೆ ಇರುವುದಿಲ್ಲ, ನೀವೇ ಊಟ ಹಾಕಬೇಕಾಗುತ್ತದೆ. ನಾನು ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಎರಡು ಗಂಟೆ ಕೆಲಸಮಾಡಲು ಕೂಡ ಅವರಿಗೆ ಕೆಲಸ ಸಿಗುತ್ತಿಲ್ಲ. ಏಕೆಂದರೆ, ರೇಷ್ಮೆ ಬೆಲೆ ಎಷ್ಟು ಜಾಸ್ತಿಯಾಗಿದೆ ಎಂದರೆ ಒಂದು ಕೆ. ಜಿ. ಗೆ 120 ರೂಪಾಯಿ ಇದ್ದುದು ಈಗ 220 ರೂಪಾಯಿ ಆಗಿದೆ. ಅದಕ್ಕೆ ಹಲವಾರು ಕಾರಣಗಳು ಇವೆ. ಸರ್ಕಾರದವರು ರೇಷ್ಮೆ ತಯಾರು ಮಾಡುವವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ಹಾಗೆ ನೇಕಾರರಿಗೂ ರಕ್ಷಣೆ ಕೊಡುವುದು ಅಗತ್ಯ. ಈ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಈ ಬಗ್ಗೆ ಮಾತನಾಡುವಾಗ ಕೆಲವು ವಿಷಯಗಳನ್ನು ನಾವು ಗಮನಕ್ಕೆ ತೆಗದುಕೊಳ್ಳಬೇಕಾಗಿದೆ. ಮುಖ್ಯಮಂತ್ರಿಗಳಿಗೆ ಪುನಃ ಮನವಿ ಮಾಡುತ್ತೇನೆ—ಬೆಂಗಳೂರು ನಗರದಲ್ಲಿಯೇ ಅಲ್ಲ ಇಡೀ ಮೈಸೂರು ದೇಶದಲ್ಲಿ ನೇಕಾರರು ದುಸ್ಥಿತಿಯಲ್ಲಿದ್ದಾರೆ. ಅವರ ನೆರವಿಗೆ ತಾವು ಬಾರದೆ ಹೋದರೆ ತಾವು ಇಲ್ಲಿ ಆಡಳಿತ ನಡೆಸಿ ಏನು ಪ್ರಯೋಜನ? ಅವರಿಗೆ ತಕ್ಷಣ ಸಹಾಯ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಅಂದಾನಯ್ಯ (ಕುಣಿಗಲ್).—ಅಧ್ಯಕ್ಷಿಣಿಯವರೇ, ನಮ್ಮ ಮುಂದೆ ಮಂಡಿಸಿರತಕ್ಕ ಈ ಮೂರು ಬೇಡಿಕೆಗಳ ಬಗ್ಗೆ ನಾನು ಪೂರ್ತಿಯಾಗಿ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ. ಮೊದಲನೆಯದಾಗಿ, ಕೈಗಾರಿಕಾ ವಿಚಾರದಲ್ಲಿ ಮಾತನಾಡುತ್ತೇನೆ. ಸರ್ಕಾರದವರು ಯಾವುದೇ ಹೊಸ ಕೈಗಾರಿಕೆಯನ್ನು ತೆರೆದರೂ ಬೆಂಗಳೂರಿನಲ್ಲಿ ತೆರೆಯುತ್ತಾರೆ. ಇದರಿಂದ ಜನಸಂಖ್ಯೆ ಬೆಂಗಳೂರಿನಲ್ಲಿ ಜಾಸ್ತಿಯಾಗಿ, ಸಿಟಿಯಲ್ಲಿ ಮನೆಗಳು ಬಾಡಿಗೆಗೆ ದೊರೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತದೆ. ಮಾನ್ಯ ಮಂತ್ರಿಗಳಲ್ಲಿ ನಾನು ಅರಿಕೆ ಮಾಡಿಕೊಳ್ಳುವುದು ಏನೆಂದರೆ, ತಾಲ್ಲೂಕುಗಳಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ತೆರೆದು ಅಲ್ಲಿ ಕೆಲಸ ಸಿಕ್ಕುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ. ಇವತ್ತು ಜನ ಕೈಗಾರಿಕೆಗಳನ್ನು ಷುರು ಮಾಡುವ ನೆಪದಲ್ಲಿ ಇಲ್ಲದ ಸಲ್ಲದ ಸುಳ್ಳುಗಳನ್ನು ಹೇಳಿಕೊಂಡು ಸುಳ್ಳು ಬೋರ್ಡುಗಳನ್ನು ಹಾಕಿಕೊಂಡು ಸಿಕ್ಕಿದಷ್ಟು ಸಾಲ ತೆಗೆದುಕೊಂಡು ದುರುಪಯೋಗ ಮಾಡುತ್ತಿದ್ದಾರೆ. ಸರ್ಕಾರದವರು ಇದರ ಕಡೆಗೆ ಗಮನಕೊಡಬೇಕು. ಯಾರು ಯಾರು ಕೈಗಾರಿಕೆಗಾಗಿ ಹಣವನ್ನು ತೆಗೆದುಕೊಂಡು ಹೋಗುತ್ತಾರೆ, ರಾ ಮೆಟೀರಿಯಲ್ಸ್ ತೆಗೆದುಕೊಂಡು ಹೋಗುತ್ತಾರೆ, ಅದನ್ನು ಅವರು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಚೆಕ್‌ಮಾಡಿ, ಕೊಟ್ಟಂಥ ಸಾಲ ತೆಗೆದುಕೊಂಡು ಹೋದಂಥ ರಾಮೆಟೀರಿಯಲ್ಸ್ ಸದ್ವಿನಿಯೋಗವಾಗುತ್ತಿದೆಯೇ ಇಲ್ಲವೇ ಎನ್ನುವುದನ್ನು ತನಿಖೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಡೀ ತುಮಕೂರು ಜಿಲ್ಲೆಯಲ್ಲಿ ಎಷ್ಟು ತರೀ ವ್ಯವಸಾಯವಾಗುತ್ತಿದೆ, ಅದರಲ್ಲಿ 58 ಪರ್ಸೆಂಟ್ ಕುಣಿಗಲ್ ತಾಲ್ಲೂಕು ಒಂದರಲ್ಲೇ ನಡೆಯುತ್ತದೆ. ಅನೇಕ ಜನ ರೈತರು ಕಬ್ಬು ಬೆಳೆಯುತ್ತಾರೆ; ರೈತ ಬೆಳದಂಥ ಕಬ್ಬಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ಖರ್ಚು ಮಾಡಿದಷ್ಟು ಹಣವನ್ನು ವಾಪಾಸ್ ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ಈ ಸಂದರ್ಭದಲ್ಲಿ ಕೈಗಾರಿಕಾ ಮಂತ್ರಿಗಳಲ್ಲಿ ಹೇಳಿಕೊಳ್ಳುತ್ತೇನೆ, ಕುಣಿಗಲ್ ತಾಲ್ಲೂಕಿನಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ತೆಗೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಅದರಿಂದ ಅಲ್ಲಿನ ರೈತ ವರ್ಗದವರಿಗೆ ಸರಿಯಾದ ಬೆಲೆ ಸಿಗುವುದಕ್ಕೆ ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕೈಗಾರಿಕಾ ಮಂತ್ರಿಗಳು ಒಳ್ಳೆಯ ತರುಣರು ಇದ್ದಾರೆ. ಬಹಳ ಉತ್ಸಾಹಶಾಲಿಗಳು ಆಗಿದ್ದಾರೆ. ಕೈಗಾರಿಕಾ ಕ್ಷೇತ್ರದಲ್ಲಿ ಅನೇಕ ಜನ ಬಂಡವಾಳಶಾಹಿಗಳು ಸೇರಿಕೊಂಡು ಹೆಚ್ಚಿನ ಲಾಭ ಸಂಪಾದನೆ ಮಾಡುತ್ತಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ, ಈ ಬಂಡವಾಳಶಾಹಿಗಳಿಗೆ ಅವಕಾಶ ಕೊಡದೆ, ಸಾಮಾನ್ಯ ಜನಕ್ಕೆ, ಹಿಂದುಳಿದ ವರ್ಗದವರಿಗೆ, ರೈತಾಪಿ ಜನಕ್ಕೆ ಅನುಕೂಲವಾಗತಕ್ಕ ಕಾರ್ಖಾನೆಗಳನ್ನು ತಾಲ್ಲೂಕು ಮಟ್ಟದಲ್ಲಿ ತೆರೆದು ಅದರಿಂದ ಬಡ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಅಂದಾನಯ್ಯ)

ಇನ್ನು ರೇಷ್ಮೆ ಕೈಗಾರಿಕೆ ವಿಚಾರದಲ್ಲಿ ಹೇಳುವುದಾದರೆ, ಕುಣಿಗಲ್ ತಾಲ್ಲೂಕಿನಲ್ಲಿ ಇಡೀ ಮೈಸೂರು ದೇಶಕ್ಕೆ ಬೇಕಾಗುವಂಥ ಚಿತ್ತನೆ ಬೀಜವನ್ನು ತಯಾರು ಮಾಡತಕ್ಕ ಜನಕ್ಕೆ ಅಲ್ಲಿ ಏನಾಗಿದೆ ಎಂದರೆ ಕಷ್ಟಪಟ್ಟು ರೈತ ಚಿತ್ತನೆ ಬೀಜ ಬೆಳೆದಾಗ ಯಾವುದೇ ಒಂದು ಸರಿಯಾದ ಬೆಲೆ ಅವನಿಗೆ ಸಿಗುತ್ತಾ ಇಲ್ಲ. ಇವತ್ತು, ಇಡೀ ಮೈಸೂರು ದೇಶಕ್ಕೆ ಬೇಕಾಗುವಂಥ ರೇಷ್ಮೆ ಬಿತ್ತನೆ ಬೀಜವನ್ನು ಕುಣಿಗಲ್ ತಾಲ್ಲೂಕಿನ ಜನತೆಗೆ ಒದಗಿಸಬೇಕಾಗಿರುತ್ತದೆ. ಅಷ್ಟು ಕಷ್ಟಪಟ್ಟು ಬೆಳೆದಂಥ ಗೂಡಿಗೆ ಸರಿಯಾದ ಬೆಲೆ ಬಾರದೆಹೋದರೆ, ರೇಷ್ಮೆ ಕೈಗಾರಿಕೆಗೆ ಕುಂದಕ ಉಂಟಾಗುತ್ತದೆ. ನಾನಾದರೂ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ, '' ಸೀಡ್ ಏರಿಯಾ '' ಎಂದು ಡಿಕ್ಲೇರ್ ಮಾಡಿ ಅಲ್ಲಿ ಬೆಳೆವಂಥ ಗೂಡನ್ನು ಸರ್ಕಾರದವರು ನ್ಯಾಯವಾದ ಬೆಲೆ ಕೊಟ್ಟು ಕೊಳ್ಳಬೇಕು. ಇದಕ್ಕೆ ಸೂಕ್ತ ಏರ್ಪಾಡು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏನು ಮೊಟ್ಟೆಗಳನ್ನು ತಯಾರು ಮಾಡಿ, ಸರ್ಕಾರ ರೈತನಿಗೆ ಕೊಡುತ್ತಾರೆ ಅದರಲ್ಲಿ ಕುಂದುಕಗಳು ಇವೆ. ನಮ್ಮಲ್ಲಿ ಯಾವಾಗಲೂ ರೋಗ ರಹಿತ ಮೊಟ್ಟೆಗಳನ್ನು ತಯಾರು ಮಾಡುತ್ತಾರೆ. ಆದರೆ ಮೊನ್ನೆ ನಮ್ಮ ತಾಲ್ಲೂಕಿನಲ್ಲಿ ಚಪ್ಪೆ ರೋಗ ಬಂತು, ಹೀಗಾಗಿ ಕಷ್ಟಪಟ್ಟು ಸಾಕಿದಂಥ ಬೆಳೆ ನಾಶವಾಗುತ್ತದೆ. ಸರ್ಕಾರ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ರೈತನಿಗೆ ರೋಗ ರಹಿತ ಮೊಟ್ಟೆಯನ್ನು ಸಪ್ಲೈ ಮಾಡಿ. ಇಡೀ ಪ್ರಪಂಚದಲ್ಲಿ ಪ್ರಖ್ಯಾತಿ ಹೊಂದಿದಂಥ ಮೈಸೂರು ಸಿಲ್ಕ್ ಆಕರ್ಷಣೀಯ ಸಿಲ್ಕ್ ಆಗಿದೆ. ಅನೇಕ ಪಾಶ್ಚಿಮಾತ್ಯ ಸ್ತ್ರೀಯರು ಈ ನಮ್ಮ ಮೈಸೂರು ಸೀರೆಗಳನ್ನು ಉಡುವುದಕ್ಕೆ ಅಭ್ಯಾಸ ಮಾಡಿದ್ದಾರೆ. ಈ ಉದ್ಯಮಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಬೇಡಿಕೊಳ್ಳುತ್ತೇನೆ.

ಕೊನೆಯದಾಗಿ ನ್ಯಾಯಾಂಗದ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡುತ್ತೇನೆ. ನ್ಯಾಯಾಂಗ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಜಡ್ಜಿಗಳಿಗೆ ಸಾಕಷ್ಟು ವೇತನ ದೊರಕುತ್ತಾ ಇಲ್ಲ. ಇವತ್ತು ನಾವು ನೋಡುವುದರಲ್ಲಿ ಅಲ್ಪಸ್ವಲ್ಪ ನ್ಯಾಯ ದೊರಕುತ್ತದೆ ಎಂದರೆ ಮತ್ತು ಅಲ್ಪಸ್ವಲ್ಪ ಲಂಚಗುಳಿತನ ಕಡಿಮೆ ಇದೆ ಎಂದರೆ, ಅದು ಈ ನ್ಯಾಯಾಂಗ ಇಲಾಖೆ ಒಂದರಲ್ಲೇ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಹೇಳುವುದು, ಈ ಜಡ್ಜಿಗಳಿಗೆ ಸಾಕಷ್ಟು ಹೆಚ್ಚು ವೇತನ ಮತ್ತು ಪ್ರೋತ್ಸಾಹ ಕೊಟ್ಟರೆ ಎಲ್ಲರಿಗೂ ನ್ಯಾಯ ದೊರಕುವುದಕ್ಕೆ ಅವಕಾಶವಾಗುತ್ತದೆ. ಜಡ್ಜಿಗಳಿಗೆ ಕ್ವಾರ್ಟರ್ಸ್ ಇಲ್ಲದ ಇರುವುದರಿಂದ ಇವರು ಎಲ್ಲರ ಜೊತೆಯಲ್ಲಿ ಸಂಪರ್ಕ ಬೆಳಸಿಕೊಂಡು ವಾಸ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ನಾನು ಸಲಹೆ ಮಾಡುವುದು ಏನೆಂದರೆ, ಈ ಕೋರ್ಟು ಆವರಣದಲ್ಲಿ ಪ್ರತಿಯೊಬ್ಬ ಜಡ್ಜಿಗೂ ಕ್ವಾರ್ಟರ್ಸ್ ಕಟ್ಟಿಸಿಕೊಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೊನೆಯದಾಗಿ ಈ ಜಡ್ಜಿಗಳ ಒಂದು ನಿವೃತ್ತಿ ವಯಸ್ಸಿನ ಬಗ್ಗೆ ಇನ್ನು ಮುಂದೆ 55 ವರ್ಷಗಳಿಂದ 58 ವರ್ಷಗಳು ಮಾಡಬೇಕೆಂದು ಪ್ರೊಪ್ರೋಸಲ್ ಅನ್ನು ತರುತ್ತಾ ಇರುವ ವಿಷಯ ಗೊತ್ತಾಯಿತು. ಇದನ್ನು ಮಾಡುವುದಾದರೆ, ಅನೇಕ ಜನ ನ್ಯಾಯಾಧೀಶರಿಗೆ ತೊಂದರೆಯಾಗುತ್ತದೆ. ಏತಕ್ಕೆ ಈ ಮಾತು ಹೇಳುತ್ತೇನೆಂದರೆ ಇದೇ ರೀತಿ ಮದ್ರಾಸ್ ಮತ್ತು ಇತರ ರಾಜ್ಯಗಳಲ್ಲಿ ನ್ಯಾಯಾಧೀಶರ ನಿವೃತ್ತಿ ವಯಸ್ಸನ್ನು ಹೆಚ್ಚಿಸಬೇಕು ಎಂದು ಶಾಸನ ತಂದರು. ಒಂದು ವರ್ಷದಲ್ಲಿ ಅದನ್ನು ವಾಪಸ್ ತೆಗೆದುಕೊಂಡರು. ಆ ರೀತಿ ಆಗುವುದರಿಂದ ಅನೇಕ ಜನ ಒಂದು ವರ್ಷ 6 ತಿಂಗಳಲ್ಲಿ ಬಡ್ತಿ ಸಿಗುವ ನ್ಯಾಯಾಧೀಶರಿಗೆ ತೊಂದರೆಯಾಗುತ್ತದೆ. ಇದನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲನೆ ಮಾಡಿ ನಿವೃತ್ತಿ ವಯಸ್ಸು ಏನು ಇದೆ ಅದನ್ನು ಹೆಚ್ಚಿಗೆ ಮಾಡುವುದನ್ನು ಕೂಲಂಕಷವಾಗಿ ನೋಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ) —ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಸೂಚನೆಗಳನ್ನು ಕೊಡಲು ಬಯಸುತ್ತೇನೆ. ನ್ಯಾಯಾಂಗ ಸಚಿವರಿಗೆ ನ್ಯಾಯಾಲಯಗಳಲ್ಲಿ ಇರತಕ್ಕ ಕೆಲವು ಕಟ್ಟಡಗಳನ್ನು ನೋಡಿದರೆ ಬಹಳ ಮನಸ್ಸಿಗೆ ಆತಂಕವಾಗುತ್ತದೆ. ನ್ಯಾಯಾಲಯಗಳ ಕಟ್ಟಡಗಳು ಶುದ್ಧವಾಗಿರಬೇಕು ಸ್ವಲ್ಪ ಭದ್ರವಾಗಿರಬೇಕು. ಅನೇಕ ಕಳ್ಳತನ ಮಾಡಿದಂಥ ಪದಾರ್ಥಗಳು ಒಂದೇ ಕಡೆ ಇದ್ದು ನ್ಯಾಯಾಧೀಶರು ಅಲ್ಲೇ ಇದ್ದು ಬಹಳ ಹಿಂಸೆಯಾಗುತ್ತದೆ. ರೈತಾಪಿ ಜನ ಮತ್ತು ಕಕ್ಷಿಗಾರರಿಗೆ ಕೋರ್ಟು ಕಛೇರಿ ಹತ್ತಿರ ಅವರನ್ನು ಕರೆಯುವವರೆಗೆ ಅವರು ಕುಳಿತುಕೊಳ್ಳುವುದಕ್ಕೆ ಸ್ಥಳವಿಲ್ಲದೆ ಕಾಫಿ ತಿಂಡಿ ಸಿಕ್ಕದೇ ಇರತಕ್ಕ ಅನೇಕ ದುರವಸ್ಥೆಗಳಿಗೆ ಒಳಗಾಗಿದ್ದಾರೆ, ಅದಕ್ಕೆ ನಾನು ಸಲಹೆ ಮಾಡುವುದು ಏನೆಂದರೆ, ಕಟ್ಟಡಗಳನ್ನು ಕಟ್ಟಿಸಿ ಆ ಕ್ಯಾಂಟೀನನ್ನು ಟೆಂಡರ್

ರೂಪದಲ್ಲಿ ಕರೆದರೆ ನಿಮಗೆ ಆಗತಕ್ಕ ಖರ್ಚು ಎಲ್ಲವೂ ಬರುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ. ಇನ್ನು ಕೈಗಾರಿಕಾ ಮಂತ್ರಿಗಳಿಗೆ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಭೂಮಿಯಲ್ಲಿ ಬೆಳೆಯುವ ಆಹಾರ ಪದಾರ್ಥಗಳು ಸಿವಾಯಿ ದಿನನಿತ್ಯದ ಬಳಕೆಗೆ ಬೇಕಾಗುವಂತ ಎಲ್ಲಾ ವಸ್ತುಗಳು ಕಾರ್ಖಾನೆಗಳಲ್ಲಿ ತಯಾರಾಗಬೇಕು. ಕಾರ್ಖಾನೆಗಳಲ್ಲಿ ತಯಾರು ಆಗತಕ್ಕ ವಸ್ತು ಅಲ್ಪ ಬೆಲೆಗೆ ಮನುಷ್ಯನಿಗೆ ದೊರೆಯಬೇಕು. ಆಗ ಪ್ರಜಾಪ್ರಭುತ್ವದಲ್ಲಿ ನೆಮ್ಮದಿ ಮತ್ತು ಶಾಂತಿ ಉಳಿಯತಕ್ಕದ್ದು ಕಂಡುಬರುತ್ತದೆ. ಈಗ ಏನಾಗಿದೆ ಒಂದು ಹೆಣ್ಣು ಮಗು ತುಟಿಗೆ ಬಳಿಯುವ ಬಣ್ಣ, ಕಣ್ಣಿಗೆ ಇಟ್ಟುಕೊಳ್ಳುವ ಬಣ್ಣ, ಜಡೆಗೆ ಹಣೆಯುವ ಟೇಪು, ಕ್ಷೌರ ಮಾಡಿಕೊಳ್ಳುವ ಬ್ಲೇಡ್ ಬಹಳ ಬೆಲೆಯಾಗಿದೆ. ಅನೇಕ ಹೆಣ್ಣುಮಕ್ಕಳು ಪೌಡರ್ ಹಚ್ಚಿಕೊಳ್ಳುವುದು ಬಿಟ್ಟಿರುತ್ತಾರೆ. ಅನುಕೂಲಸ್ಥರು ಮೈಗೆ ತಂಬಾ ಪೌಡರ್ ಹಚ್ಚಿಕೊಳ್ಳುವಭೋಗ ವಸ್ತುವನ್ನು ಸಾಮಾನ್ಯವಾಗಿ ಎಲ್ಲರೂ ಹಚ್ಚಬೇಕು. ಅಂಥಾದ್ದು ಸುಲಭ ಬೆಲೆಗೆ ದೊರೆಯಬೇಕಾದರೆ ಕಾರ್ಖಾನೆಯಲ್ಲಿ ಇರತಕ್ಕ ಕಾರ್ಮಿಕರು ಬಹಳ ಶ್ರದ್ಧಾಶಕ್ತಿಯಿಂದ ಕೆಲಸಮಾಡಬೇಕು ಮತ್ತು ಕಾರ್ಖಾನೆಗಳಲ್ಲಿ ವಹಿವಾಟು ನಡೆಸತಕ್ಕ ಇಲಾಖೆಯ ಅಧಿಕಾರಿಗಳ ತಜ್ಞರು ಆಗಿರಬೇಕು. ಶ್ರೀಮಾನ್ ಕೃಷ್ಣರವರು ಯುವಕರು ಮತ್ತು ಬಹಳ ಉತ್ಸಾಹಿಗಳು ಅವರು ಡೆಲ್ಲಿಯಿಂದ ಮೈಸೂರಿಗೆ ಬಂದಿದ್ದಾರೆ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರ ಹಾಗೆ ಆಗಬಾರದು, ಅವರು ಬೆಳೆಯಲಿ ಎಂದು ಈ ಮಾತುಗಳನ್ನು ಹೇಳುತ್ತೇನೆ. ಒಳ್ಳೆಯ ದಕ್ಷ ಮತ್ತು ತಜ್ಞ ಅಧಿಕಾರಿಗಳನ್ನು ಕಾರ್ಖಾನೆಗಳಿಗೆ ಹಾಕಿ. ಯಾವ ಒತ್ತಾಯ ಬಂದರೂ ಲಂಚಕೋರ ಅಧಿಕಾರಿಗಳನ್ನು ಮಾತ್ರ ಹಾಕಬಾರದು, ಮತ್ತು ಅದಕ್ಷ ಅಧಿಕಾರಿಗಳನ್ನು ಹಾಕಬೇಡಿ, ದಕ್ಷರಾಗಿ ಇದ್ದವರಿಗೆ ನಿಮ್ಮ ಕಾಲದಲ್ಲಿ ಪ್ರೋತ್ಸಾಹ ಬರಲಿ. ಖಾಸಗಿ ಜನ ಕಾರ್ಖಾನೆ ಇಟ್ಟರೆ, ಲಕ್ಷೋಪಲಕ್ಷ ರೂಪಾಯಿ ಲಾಭ ಆಗಿರತಕ್ಕದ್ದನ್ನು ಕಣ್ಣಾರೆ ನೋಡುತ್ತಿದ್ದೇವೆ. ಆದರೆ ಸರ್ಕಾರಿ ಕಾರ್ಖಾನೆ ಇಟ್ಟರೆ, ಲುಕ್ಸಾನು ಕಾಣುತ್ತದೆ. ಶ್ರೀಮಾನ್ ದೇವರಾಜ್ ಅರಸ್ ಅವರಿಗೆ ರೇಶ್ಮೆ ಖಾತೆಯ ವಿಷಯ ಚೆನ್ನಾಗಿ ಗೊತ್ತು. ನಮ್ಮ ಸರ್ಕಾರದವರು ಇದರಲ್ಲಿ ಮುಂದುವರೆದಿಲ್ಲ. ನಾಲ್ಕು ಬೇಸಿನ್ ಇಟ್ಟುಕೊಂಡು ಸರ್ಕಾರವನ್ನು ಎದುರಿಸುವ ಶಕ್ತರು ಆಗುತ್ತಾರೆ. ಶ್ರೀಮಾನ್ ಕೃಷ್ಣ ಅವರು ಏನು ರಾಜಕೀಯ ಒತ್ತಡ ಬಂದರೂ ಅದಕ್ಕೆ ಮಣಿಯದೆ ತಜ್ಞ ಅಧಿಕಾರಿಯನ್ನು ಲಂಚಕೋರರು ಇಲ್ಲದೆ ಇರುವವರನ್ನು ನಿಮ್ಮಂಥ ಯುವಕರು ಪ್ರೋತ್ಸಾಹ ಮಾಡಿ ಕೈಗಾರಿಕಾ ಕ್ಷೇತ್ರದಲ್ಲಿ ಲಂಚಕೋರತನ ನಿವಾರಣೆ ಮಾಡಿ ದಕ್ಷ ಆಡಳಿತ ಬೆಳಕಿಗೆ ಬಂದರೆ ಆಗ ಕೈಗಾರಿಕೆ ಚೆನ್ನಾಗಿ ನಡೆಯುತ್ತದೆ ಎನ್ನುವಮಾತನ್ನು ಹೇಳುತ್ತೇನೆ. ಬಂಡವಾಳಗಾರರು ಮತ್ತು ಲಂಚಕೋರ ಅಧಿಕಾರಿಗಳ ಹಿಡಿತಕ್ಕೆ ತಾವು ಯಾವಾಗಲೂ ಹೋಗಬಾರದು ಎಂದು ಹೇಳಿ ಇನ್ನು ರೇಶ್ಮೆ ವಿಭಾಗಕ್ಕೆ ಹೋಗುತ್ತೇನೆ. ಈ ರೇಷ್ಮೆ ವಿಭಾಗ ನಮ್ಮ ರಾಜ್ಯದಲ್ಲಿ ಇಬ್ಬರ ಕೈಗೆ ಸಿಕ್ಕಿಕೊಂಡಿದೆ. ವಾಣಿಜ್ಯ ವಿಭಾಗ ಮುಖ್ಯಮಂತ್ರಿಗಳಿಗೆ ಸೇರಿದೆ, ಸೆರಿಕಲ್ಚರ್, ಸ್ಟೇಟ್ ಮಿನಿಸ್ಟರ್ ಕೈಯಲ್ಲಿ ಇದೆ. ಯಾರಾದರೂ ಇಟ್ಟುಕೊಂಡು ರಾಜ್ಯ ಆಳಲಿ, ನನಗೆ ವ್ಯಸನವಿಲ್ಲ. ಇಲಾಖೆಯಲ್ಲಿ ದಕ್ಷತೆಯಿಂದ ಕಾರ್ಯ ನಡೆಯದೇ ಇರುವುದಕ್ಕೆ ಈ ರೀತಿ ವ್ಯವಸ್ಥೆ ಮಾಡಿರುವುದರಿಂದ ತೊಂದರೆಯಾಗಿದೆ ಎನ್ನುವ ಮಾತನ್ನು ಹೇಳುತ್ತೇನೆ. ಈ ರೇಶ್ಮೆ ಕೈಗಾರಿಕೆ ಮೈಸೂರು ರಾಜ್ಯದಲ್ಲಿ ಬಹಳ ಪ್ರಾಮುಖ್ಯವಾದ ಕೈಗಾರಿಕೆಯಾಗಿದೆ. ರೇಶ್ಮೆ ಉತ್ತಮ ರೀತಿಯಲ್ಲಿ ಚೆನ್ನಾಗಿ ಬೆಳೆದರೆ ಪ್ರಾಯಶಃ ಅನೇಕ ರೈತರ ಮನೆ ಉದ್ಧಾರವಾಗುತ್ತದೆ. ರೈತರ ಮನೆ ಉದ್ಧಾರವಾದರೆ ನೀವು ಉಳಿಯುವುದು ಎಂದು ಅನೇಕಸಾರಿ ಹೇಳಿದ್ದೇನೆ. ನಿಜವಾಗಿ ಮುಂದುವರಿಯಬೇಕಾದರೆ ಒಳ್ಳೆಯ ಹೆಸರು ಎತ್ತಿ ಬೆಳೆಯಬೇಕಾದರೆ, ನಾನು ಜನರಿಗೆ ರೋಗ ವಿಲ್ಲದೆ ಇರುವ ಮೊಟ್ಟೆ ಕೊಡಬೇಕು. ಏತಕ್ಕೆ ಇಷ್ಟು ವರ್ಷಗಳಿಂದ ಆಗಲಿಲ್ಲ? ಇಲಾಖೆಯಲ್ಲಿ ಪರಿಣತಿ ಪಡೆದಂಥ ತಜ್ಞತೆ ಪಡೆದಂಥ ಅಧಿಕಾರಿಗಳು ಬರಲಿಲ್ಲ, ಅದು ಒಂದು ಶಾಪವಾಗಿತ್ತು. ದೇವರ ದಯೆಯಿಂದ ಇವೊತ್ತು ತಜ್ಞರು ಇಲಾಖೆಯಲ್ಲಿ ಇದ್ದಾರೆ, ಅವರಿಗೆ ಅತ್ಯಗತ್ಯವಾಗಿ ಪ್ರೋತ್ಸಾಹ ಸಕಾಲದಲ್ಲಿ ಸಿಕ್ಕಲೇಬೇಕು. ಆಗ ರೈತರ ಗೋಳು ಏನು ಇದೆ ಇದು ನಿವಾರಣೆಯಾಗುತ್ತದೆ ಎಂದು ನಾನು ನಮ್ರತೆಯಿಂದ ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ರೋಗರಹಿತ ಮೊಟ್ಟೆಗಳನ್ನು ಕೊಡುವ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ರೈತ ಬೆಳೆಯತಕ್ಕ ಗೂಡನ್ನು ಸರ್ಕಾರದ ಮಾರ್ಕೆಟ್ಟಿಗೆ ತರಬೇಕು ಎಂದು ಕಡ್ಡಾಯವಾಗಿ ಕಾಯಿದೆ ಮಾಡಿದ್ದಾರೆ. ರೈತರು ಪ್ರೀತಿ ವಿಶ್ವಾಸದಿಂದ ಬೆಳೆದು ತಂದಂಥ ಗೂಡು ಮಾರ್ಕೆಟ್ಟಿಗೆ ಹೋದಾಗ ಏನು ಗತಿ ಆಗುತ್ತದೆ? ಆರೀತಿ ಆಗಬಾರದು. ಮಾರ್ಕೆಟ್ಟು ವ್ಯವಸ್ಥೆ ಚೆನ್ನಾಗಿ ಇರಬೇಕು. ಅವ್ಯವಸ್ಥೆ ಇದ್ದರೆ ಸರ್ಕಾರ ಟೀಕೆಗೆ ಒಳಗಾಗಬೇಕಾಗುತ್ತದೆ. ಆದ್ದರಿಂದ ನಾನು ನಮ್ರತೆಯಿಂದ ಪ್ರಾರ್ಥನೆ ಮಾಡುತ್ತೇನೆ, ಸರ್ಕಾರ ಗೂಡಿನ ಮಾರ್ಕೆಟಿಗೆ ಸೂಕ್ತ ಕಟ್ಟಡ ಕೊಡಬೇಕು. ಪ್ರಾಮುಖ್ಯವಾಗಿ ಮೈಸೂರು ರಾಜ್ಯದಲ್ಲಿ ರೇಶ್ಮೆ ಗೂಡಿನ ಮಾರ್ಕೆಟಿನಲ್ಲಿ ರಾಮನಗರ ಮೊದಲನೆಯದು. ಸಿಡ್ಲಘಟ್ಟ ಮತ್ತು ರಾಮನಗರ ಎರಡೂ ಪ್ರಾಮುಖ್ಯವಾದುವು. ಸರ್ಕಾರ ಶೀಘ್ರವಾಗಿ ಇಲ್ಲಿ ಕಟ್ಟಡಗಳ ವ್ಯವಸ್ಥೆ

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಮಾಡಬೇಕು. ಇನ್ನು ಒಂದು ಕಡೆ ಸರ್ಕಾರ ಇನ್ನೂ ಗಮನಕೊಟ್ಟಿಲ್ಲ. ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ರೈತ ಬೆಳೆದಂಥ ಗೂಡು ಮಾರ್ಕೆಟ್ಟಿಗೆ ಬಂದು ಬಹಿರಂಗವಾಗಿ ವ್ಯಾಪಾರವಾಗಬೇಕು ಎಂದು ಕಡ್ಡಾಯ ಮಾಡಿದ್ದಾರೆ ಸಂತೋಷ. ಬೀಜವಾಗತಕ್ಕ ರೇಷ್ಮೆ ರಾಜ್ಯದಲ್ಲಿ ಬೆಂಗಳೂರು ನಗರದಲ್ಲಿ ಒಂದೇ ಕಡೆ ಬಹಿರಂಗವಾಗಿ ರೆಗ್ಯೂಲೇಟೆಡ್ ಮಾರ್ಕೆಟ್ಟಿನಲ್ಲಿ ಬರಬೇಕಾಗಿದೆ. ಹಾಗೆ ತಂದಂಥ ಬೀಜದ ರೇಷ್ಮೆ ಬೆಳೆಗಾರರಿಗೆ ಸೂಕ್ತವಾದಂಥ ಬೆಲೆಗೆ ದೊರಕುವಂತೆ ವ್ಯವಸ್ಥೆ ನಿಮ್ಮ ಕಾಲದಲ್ಲಿ ಆಗಬೇಕು. ಸಮಾಜವಾದ ಎಂದು ಹೇಳತಕ್ಕ ಜನ ನೀವು ಈ ರೇಷ್ಮೆ ಕೋಟಿಯವರನ್ನು ಬಂಡವಾಳಗಾರರನ್ನು ಬೆಳೆಯುವುದಕ್ಕೆ ಬಿಡುವುದು ಸರಿಯಲ್ಲ. ಶ್ರೀಮಾನ್ ದೇವರಾಜ್ ಅರಸ್ ಅವರಿಗೆ ಈ ರೇಷ್ಮೆ ವ್ಯವಸಾಯದ ಬಗ್ಗೆ ನೈಪುಣ್ಯತೆ ತುಂಬ ಇದೆ ಎಂಬುದು ನನಗೆ ಗೊತ್ತು. ಅನೇಕ ಬಡ ಜನರು ಇಂದು ರೇಷ್ಮೆ ಕೋಠಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ರೇಷ್ಮೆ ಮಾರಾಟಕ್ಕಾಗಿ ಸ್ಟೇಟ್ ಸಿಲ್ಕ್ ಮಾರ್ಕೆಟಿಂಗ್ ಸೊಸೈಟಿ ಎಂದು ಮಾಡಿದ್ದಾರೆ. ಇದರಲ್ಲಿ ಬಹಳ ಅನಾಯಕತ್ವ ನಡೆಯುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಟೆಕ್ನಿಕಲ್ ಆಡಿಟ್ ಸೆಲ್ ಎಂದು ಮಾಡಿದ್ದಾರೆ. ಅವರ ಮೂಲಕ ಈ ಸಂಸ್ಥೆಯ ಲೆಕ್ಕಗಳನ್ನು ಪರಿಶೀಲನೆ ಮಾಡಿ ಇವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಮತ್ತು ರೇಷ್ಮೆ ಮಾರತಕ್ಕ ವ್ಯವಸಾಯಗಾರರಿಗೆ ರೋಗವಿಲ್ಲದ ಮೊಟ್ಟೆಗಳನ್ನು ಸರಬರಾಜು ಮಾಡಿ ಮಾರಬೇಕು ಎಂದು ಸಲಹೆ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

6-00 P.M.

† ಶ್ರೀ ಹೆಗ್ರೆ ಪರಶುರಾಂ ಪದ್ಮಣ್ಣ (ಚಿಕ್ಕೋಡಿ).—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರುವ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ನಮ್ಮ ಸರಕಾರಕ್ಕೆ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಕೆಲವಾರು ವಿಷಯಗಳಲ್ಲಿ ನನ್ನಲ್ಲಿ ನಿರ್ದಿಷ್ಟ ಸೂಚನೆಗಳು ಇಲ್ಲದಿದ್ದರೂ ಸಮಾಜ ವಾದವನ್ನು ನಮ್ಮ ರಾಜ್ಯದಲ್ಲಿ ತರುವ ಎಲ್ಲೆಲ್ಲಿ ಉದ್ದೇಶವನಿಟ್ಟುಕೊಂಡು ಸಾಧ್ಯವಿದೆಯೋ ಅಲ್ಲೆಲ್ಲಾ ಉದ್ಯಮಗಳನ್ನು ನಿರ್ಮಿಸಿ ನಿರುದ್ಯೋಗಿ ಜನರಿಗೆ ತಕ್ಕ ಉದ್ಯೋಗ ದೊರಕಿಸಿಕೊಟ್ಟು ಅವರಿಗೆ ಒಂದು ಉಪ ಜೀವನ ಮಾಡಲು ಅವಕಾಶ ಮಾಡಿಕೊಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಆಮೇಲೆ ನಮ್ಮ ರಾಜ್ಯದಲ್ಲಿರುವ ಕಾಯಿದೆಗಳು ಸಾಮಾನ್ಯ ಜನರ ಉನ್ನತಿಗೆ ಬಹಳ ಅಡಚಣೆಗಳನ್ನು ಉಂಟು ಮಾಡುತ್ತಿವೆ. ಇಂತಹ ಕಾನೂನು ಕಾಯಿದೆಗಳನ್ನು ಸರಕಾರದವರು ಬದಲಿಸಿ ಇದನ್ನು ತಿದ್ದುಪಡಿ ಮಾಡಿ ಸಾಮಾನ್ಯ ಜನಕ್ಕೆ ಅನುಕೂಲವಾಗುವಂತಹ ಕಾಯಿದೆಗಳನ್ನು ತರಬೇಕೆಂದು ಸಲಹೆ ಮಾಡುತ್ತೇನೆ. ಇದರ ಬಗ್ಗೆ ಮುಂದೆ ಕೆಲವಾರು ಉದಾಹರಣೆಗಳನ್ನು ಕೊಡುತ್ತೇನೆ. ನಮ್ಮದು ಪ್ರಜಾಸತ್ತಾತ್ಮಕವಾದ ರಾಜ್ಯ. ರಾಜನೀತಿಜ್ಞರು ಪ್ರಜಾಸತ್ತಾತ್ಮಕರಾಜ್ಯ ಪದ್ಧತಿಯು. ಇದು ಒಂದು ಉತ್ತಮವಾದ ರಾಜಕೀಯ ಪದ್ಧತಿ ಎಂದು ಹೇಳುತ್ತಾರೆ. ಇಂತಹ ಪ್ರಜಾಸತ್ತೆಯನ್ನು ನಾವು ರಕ್ಷಣೆ ಮಾಡಬೇಕೆಂದು ಇದನ್ನು ಸ್ವೀಕರಿಸಿದ್ದೇವೆ ಮತ್ತು ಅದರಲ್ಲೂ ಸಮಾಜವಾದವನ್ನು ತರಬೇಕೆಂದು ನಿರ್ಧಾರ ಮಾಡಿದ್ದೇವೆ ಮತ್ತು ಈ ದಾರಿಯಲ್ಲಿ ನಾವು ಹೊರಟಿದ್ದೇವೆ. ಸರಕಾರ ಕಾಯಿದೆ ಮಾಡುವಾಗ ಅದು ಜನರ ಹಿತಕ್ಕಾಗಿ ಮಾಡಬೇಕು ಆದರೆ ಜನರ ಹಿತಕ್ಕೆ ಅಡಚಣೆಯುಂಟು ಮಾಡುವಂತೆ ಮಾಡಬಾರದು, ಇದು ಸ್ಪಷ್ಟವಾದ ಮಾತು. ನಮ್ಮ ಘಟನಕಾರರು ಇದನ್ನು ಒಪ್ಪಿ ಒಂದು ಘಟನೆಯನ್ನು ಮಾಡಿದ್ದಾರೆ. ಇದರಲ್ಲಿ ಫಂಡಮೆಂಟಲ್ ರೈಟ್ಸ್ ಹಾಗೂ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ಗಳನ್ನು ನಿರ್ಮಿಸಿದ್ದಾರೆ. ಇವುಗಳ ಮಧ್ಯೆ ವಾದ ನಡೆದು ಇವುಗಳಲ್ಲಿ ಯಾವುದು ಶ್ರೇಷ್ಠ ಎನ್ನುವ ವಾದಗಳು ನಡೆಯುತ್ತಿವೆ. ಇದರಲ್ಲಿ ಕೆಲ ತಜ್ಞರು ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ಗಳು ಶ್ರೇಷ್ಠವೆಂದು ಹೇಳುತ್ತಾರೆ. ಇನ್ನು ಕೆಲವರು ಫಂಡಮೆಂಟಲ್ ರೈಟ್ಸ್‌ಗಳು ಶ್ರೇಷ್ಠ ಎಂದು ಹೇಳುತ್ತಾರೆ. ಇವು ಒಂದಕ್ಕೊಂದು ಸಹಾಯಕವಾಗಿ ಹೋಗಬೇಕೇ ಹೊರತು ವಿರುದ್ಧವಾಗಿ ಅಲ್ಲ. ಈಚೆಗೆ ಕೆಲವು ಕೇಸುಗಳಲ್ಲಿ ಅಂದರೆ ಗೋಲಕ್‌ನಾಥ್ ಕೇಸಿನ ಬಗ್ಗೆ ಹಾಗೂ ಬ್ಯಾಂಕುಗಳ ರಾಷ್ಟ್ರೀಕರಣಗಳ ಕೇಸುಗಳು ಬಂದಾಗ ಇದರಲ್ಲಿನ ನ್ಯಾಯಾಧೀಶರುಗಳು ಫಂಡಮೆಂಟಲ್ ರೈಟುಗಳೇ ಶ್ರೇಷ್ಠವೆಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ಡೈರೆಕ್ಟೀವ್ ಪ್ರಿನ್ಸ್‌ಪಲ್ಸ್‌ಗಳಿಗೆ ಯಾವ ಬೆಲೆಯೂ ಇಲ್ಲವೆಂಬಲಾಗಿದೆ. ಫಂಡಮೆಂಟಲ್ ರೈಟ್ಸ್‌ಗಳು ಸಾಮಾನ್ಯ

ಜನರ ಹಕ್ಕು ಆದರೂ ಅವು ಆಸ್ತಿವಂತರ ಆಸ್ತಿಯನ್ನು ರಕ್ಷಣೆ ಮಾಡುವ ಹಕ್ಕುಗಳಾಗಿವೆ. ಆದರೆ ಸರಕಾರದಲ್ಲಿರುವ ಅಧಿಕಾರಿಗಳು ಕಾಯಿದೆ ಬಗ್ಗೆ ಸಾಮಾನ್ಯ ಜನಕ್ಕೆ ಸರಿಯಾದ ತಿಳುವಳಿಕೆ ಕೊಡದೆ ಇಲ್ಲದ ಅಡಚಣೆಗಳನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಕೆಲವು ಕಾಯಿದೆಗಳು ಬಂದಿವೆ. ಉದಾಹರಣೆಯಾಗಿ ಟೆನೆನ್ಸಿ ಆಕ್ಟ್ ಬಂತು. ಇದರ ಜೊತೆ ಟೆನೆನ್ಸಿ ಲಾಸ್‌ಗಳೂ ಬಂದವು. ಆದರೆ ಇದರಿಂದ ಸಾಮಾನ್ಯ ಬಡ ರೈತರಿಗೆ ಹೆಚ್ಚು ಅನುಕೂಲವಾಗುವುದಿಲ್ಲ, ಇಲ್ಲದ ಅಡ್ಡಿ ಆತಂಕಗಳು ಇದರಿಂದ ಬರುತ್ತಿವೆ. ಉದ್ಯಮಗಳನ್ನು ಮಾಡಿ ಜನರಿಗೆ ಉದ್ಯೋಗಗಳನ್ನು ದೊರಕಿಸಿ ಕೊಡುವಾಗ ಸರಿಯಾದ ಅನುಕೂಲಗಳನ್ನು ಕೊಡುತ್ತಿಲ್ಲ. ಸಾಮಾನ್ಯ ಜನರಿಗೆ ಅನುಕೂಲವಾಗುವ ಹಾಗೆ ಅವರು ಒಂದು ಉಪಜೀವನ ಮಾಡಿಕೊಳ್ಳಲು ಸರಕಾರ ಸಹಾಯ ಮಾಡಬೇಕು. ಇದಕ್ಕಾಗಿ ಸಮತಾವಾದ ತರುತ್ತೇವೆ ಎಂದು ಸರಕಾರ ಘೋಷಣೆ ಮಾಡಿದೆ, ಅದರಂತೆ ಜನರಿಗೆ ಅನುಕೂಲ ಮಾಡಿ ಸಹಾಯ ಮಾಡುತ್ತಿಲ್ಲ. ಕೆಲವು ಕಡೆ ಹರಿಜನರಿಗೆ ಜಮೀನುಗಳನ್ನು ಕೊಡಬೇಕೆಂದು ಕಾಯಿದೆ ಇದ್ದರೂ ಅದರಂತೆ ಹರಿಜನರಿಗೆ ಅಲ್ಲಿ ಭೂಮಿಗಳನ್ನು ಕೊಡುತ್ತಿಲ್ಲ. ಇದರಿಂದ ಬಡ ಹರಿಜನರಿಗೆ ತೊಂದರೆಯಾಗಿದೆ. ಹೀಗಾದರೆ ಹರಿಜನರು ಉಪ ಜೀವನ ನಡೆಸಲು ಹೇಗೆ ಅನುಕೂಲವಾಗುತ್ತದೆ. ಇದಕ್ಕಾಗಿ ಇರುವ ಕಾಯಿದೆಯನ್ನು ಬದಲಾವಣೆ ಮಾಡಬೇಕು. ಕೂಳಿಲ್ಲದ ಮಾನವನೇ ಸಂಕಟದಲ್ಲಿದ್ದಾಗ ದನಗಳ ಬದುಕಿನ ಬಗ್ಗೆ ಚಿಂತೆ ಮಾಡುವುದು ಯಾವ ದೃಷ್ಟಿಯಿಂದಲೂ ಯೋಗ್ಯವೆನಿಸಲಾರದು.

ಸಹಕಾರ ಇಲಾಖೆಯಲ್ಲಿ ಜಾಯಿಂಟು ಫಾರ್ಮಿಂಗು ಸೊಸೈಟಿಗಳನ್ನು ಮಾಡುವಾಗ ಇಲ್ಲದ ಆತಂಕಗಳನ್ನು ತಂದು ಜನಕ್ಕೆ ಕೊಡುತ್ತಿದ್ದಾರೆ. ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಸರಕಾರದ ಕಡೆಗೆ ಅಥವಾ ಬೇರೆ ಕಡೆಯೂ ಯಾವ ಸಹಾಯವನ್ನೂ ಕೇಳದೆ ಅವು ತಮ್ಮ ಕಾಲ ಮೇಲೆ ನಿಂತು ಕೆಲಸ ಮಾಡಬೇಕು ಎಂದು ಸಹಕಾರ ಇಲಾಖೆಯವರು ಸೊಸೈಟಿಗಳನ್ನು ಪ್ರತಿಬಂಧಿಸುತ್ತಿದ್ದಾರೆ. ಇಂತಹ ಸೊಸೈಟಿಗಳಿಂದ ಜನಕ್ಕೆ ಅನುಕೂಲವಾಗದೆ ಇದ್ದರೆ ಇಂತಹ ಸಂಸ್ಥೆಗಳನ್ನು ಬಂದ್ ಮಾಡುವುದೇ ಸರಿಯಾಗಿರುತ್ತದೆ. ಇದರ ಬಗ್ಗೆ ಸರಕಾರ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು. ಸರಕಾರ ಭೂಮಿಹೀನ ಜನ ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲಬೇಕು ಎಂದು ಹೇಳುತ್ತಾ ಸಮಾಜವಾದವನ್ನು ತರುತ್ತೇವೆ ಎಂದು ಹೇಳಿದರೆ ಅದರಿಂದ ಜನತೆಗೆ ಅನುಕೂಲವಾಗುತ್ತಿದೆಯೇ ಈ ವಿಷಯದಲ್ಲಿ ಯೋಗ್ಯ ಪರಿಶೀಲನೆ ಮಾಡಿ ಇಂತಹ ಅಡಚಣೆಗಳನ್ನು ಸರಕಾರ ಕೂಡಲೇ ತೆಗೆದುಹಾಕಬೇಕು. ಹೀಗೆ ಮಾಡದೇ ಬರೀ ಸಮಾಜವಾದ ತರುತ್ತೇವೆ ಎಂದು ಹೇಳುವುದನ್ನು ನೋಡಿ ನನಗೆ ತುಂಬಾ ವಿಷಾದವಾಗುತ್ತದೆ.

ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†**Sri M. VEERAPPA MOILY** (Karkal).—Madam Speaker, I welcome the Demands for grant presented by our dynamic Minister for Industries Sri S. M. Krishna. We can classify the industries into two categories, (1) large scale industries, and (2) small scale industries. In these industries, the Government involves itself firstly by way of capital formation by the institutions like the Mysore Industrial Development Corporation and Mysore State Financial Corporation, and secondly by providing infra-structure for the industrial base. But from the practical experience we can find out that they have not provided finance to the industries started on Joint Stock basis as also on public sector basis. They have also not provided finance to the establishments based on proprietor and partnership basis. I understand that the Government will step into those industries which would be started on Proprietory and partnership basis. By providing finance by these financial institutions and also by providing infra-structure, we have not been able to achieve much in our State. One thing we can understand that whenever the Government proposes a plan, it will plan for the people of the State and it is for the industrial and economic development of the State. But by providing finance of the nature which I

(SRI VEERAPPA MOILY)

have already stated, we have only invited the entrepreneurs of outside. For example, somewhere in the latter half of 1970, we have attracted quite a large number of entrepreneurs from Calcutta. They came over to our State because there was industrial unrest in West Bengal. The Cauvery Steel Limited and the Baruqa Steel Limited, have come from Calcutta and have settled in our State. I understand that the Government has financed to the extent of Rs. 22 lakhs to Cauvery Steel Limited. On account of the financial assistance rendered to that firm, that firm has come to stay in our State. After all, as I have already pointed out, we have not done much to the industrial development of our State by providing financial assistance. If we teak the assessment of the industrial development in the State, we can find out that 60 per cent of the entrepreneurs are from Calcutta. We know that by developing the industries, we will be improving our economic condition and we will be solving the unemployment problem.

I would like to offer some suggestions with regard to the development of industries in our State. But before I deal with this point, I would like to state that few officers of the industries department are controlling our industries. If we take the over all position with regard to the Industrial development, I do not think the Industries Department has done much in this direction.

We have the history of industrial development in our State. In fact, our great man Dr. Sir M. Visveswarayya is the person who gave a clarion call to our industrial development in our State. At that time, Madras and some other industrially advanced States were far behind Mysore State. It was Mysore State which came forward for establishing industries. It is only after few years later, the Tatas started the Steel Industry. We were the first to start the Iron Works at Bhadravati. We had started Cement Factory and Paper Mills and the Silk Mills. We cannot say that we have no entrepreneurs in our State to start the industries.

With regard to the localisation of industries, I can say that we have to go on a phased programme. Wherever raw materials are there-we have to develop the industrial complex. For example, wherever the sugar factories are there, we can obtain molasses. We can develop the Plastic industries. Wherever Cotton is available, we can start Mills. We have got a number of Engineers working in Textile Mills in Bombay and other places. These engineers are occupying highest position in those Mills. We have not made any attempts to attract our Engineers working elsewhere.

Regarding starting of Carpet Industries, I may inform you that the Government of India has given a letter of intent to some person to start that industry. I am told the OCM which is owned by Birla Company. I request the Government to advice the Central Government

not to issue licence for starting this industry. This matter may kindly be looked into by the Industrial Development authority and take steps to see that the licence is not given to this company.

As far as South Kanara is concerned, there are raw materials, like sand and silica are available in plenty. On account of the removal of prohibition, bottles are required for filling in be r and other alcoholic liquors. There is ample scope for starting a Glass Industry in South Kanara District. This would be a profitable concern. I request Government to examine the feasibility of starting a Glass Industry in South Kanara District. White clay and China clay are available in plenty in South Canara and also in Malnad areas. The availability of this raw material will be helpful in starting a Ceramic Factory at South Kanara. This would be a beneficial concern. The Porcelain Factory at Bangalore, prepares only insulators for the MSEB and it has not fulfilled the requirements of our State.

We are selling the highest grade ore at Rs. 8 per ton. In fact we can get Rs. 300 if it is properly processed. This matter may also be examined by the Industries Department.

I urge upon the Government to take up the starting of woodbased industries. I am told that a survey has been made in this respect. There is great demand for the articles from France. This will be an attractive industry if it is takenup in Malnad areas including Mangalore. A woodbased industry was started at Hunsur but that did not succeed well. This would be a good industry if it is started with proper intellectual people. It would be a successful project in our State.

SRI S. M. KRISHNA.—The Hon. member mentioned something about the licence and letter of intent etc. May I know to whom the Government of India has issued letter of intent ?

SRI M. VEERAPPA MOILY.- I shall pass on the information to the Hon. Minister.

With these few words, I conclude my speech. I thank the Chair for having given me this opportunity to speak on this Demand.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ಸಚಿವರು ಇವೊತ್ತು ಏನು ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡನೆ ಮಾಡಿದ್ದಾರೆ ಅವುಗಳನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ನಿಂತಿದ್ದೇನೆ. ಮೊಟ್ಟಮೊದಲನೆಯದಾಗಿ ನ್ಯಾಯಾಲಯದ ಬಗ್ಗೆ ಹೇಳುವುದಾದರೆ ಇವೊತ್ತು ಸರ್ಕಾರ ನ್ಯಾಯವನ್ನು ವಿತರಣೆ ಮಾಡುವ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಣೆ ಮಾಡಿದರೆ ಯಾವ ರೀತಿ ಜನತೆಗೆ ನ್ಯಾಯವನ್ನು ವಿತರಣೆ ಮಾಡುತ್ತಿದ್ದಾರೆ ಎಂಬುದು ತಿಳಿಯುತ್ತದೆ. ನ್ಯಾಯ ವಿತರಣೆಯು ವೇಗವಾಗಿ ಬೇಗ ಆಗಬೇಕಾದುದು ಅವಶ್ಯಕ. ಅದಕ್ಕೋಸ್ಕರ ತೀವ್ರ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕು ಮತ್ತು ಸಂಬಂಧಪಟ್ಟವರಿಗೆ ಆ ಬಗ್ಗೆ ಸೂಚನೆಗಳನ್ನು ಕೊಡಬೇಕು. ಮುಖ್ಯವಾಗಿ ಪ್ರತಿಯೊಂದು ತಾಲ್ಲೂಕಿಗೂ ಕೋರ್ಟನ್ನು ಕೊಡಬೇಕು. ಈ ಬಗ್ಗೆ ಬಹಳ ಜನ ಕೇಳುತ್ತಿದ್ದಾರೆ. ಪ್ರತಿಯೊಂದು ಸಣ್ಣ ಪುಟ್ಟ ಕೇಸುಗಳಿಗೂ ಕೂಡ ಜಿಲ್ಲಾಮಟ್ಟಕ್ಕೆ ಬಂದು ಹೋಗಬೇಕು. ಇದರಿಂದ ಕೇಸುಗಳು ಇತ್ಯರ್ಥವಾಗುವುದು ವಿಳಂಬವಾಗುವುದಲ್ಲದೆ ಬಡವರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಒಂದೊಂದು ಕೋರ್ಟನ್ನು ಕೊಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

(ಶ್ರೀ ಕೊಣಂದೂರು ಲಿಂಗಪ್ಪ)

ಇವೊತ್ತು ಎಲ್ಲಾ ಕೋರ್ಟುಗಳಲ್ಲಿಯೂ ಎಷ್ಟು ಕೇಸುಗಳು ಇತ್ಯರ್ಥವಾಗದೆ ಉಳಿದಿವೆ ಎಂಬುದನ್ನು ಪರಿಗಣಿಸಿದರೆ ಜನತೆಗೆ ಎಷ್ಟು ತೊಂದರೆ ಆಗುತ್ತದೆ ಎಂಬುದು ತಮಗೆ ಗೊತ್ತಾಗುತ್ತದೆ. ಮುಖ್ಯವಾಗಿ ಇವೊತ್ತು ನಮ್ಮ ಜನಗಳಿಗೆ ಯಾವ ಭಾಷೆಯಲ್ಲಿ ನ್ಯಾಯಾಲಯದ ವ್ಯವಹಾರ ಮತ್ತು ತೀರ್ಪು ಆಗಬೇಕೋ ಅದು ಆ ಭಾಷೆಯಲ್ಲಿ ಆಗದೇ ಇರುವುದು ಒಂದು ದೊಡ್ಡ ಲೋಪ. ಯಾರ ಸಲುವಾಗಿ ಈ ಸರ್ಕಾರ ಇದೆಯೋ ಅವರಿಗೆ ಅವರ ಭಾಷೆಯಲ್ಲಿ ನ್ಯಾಯಾಲಯದ ವ್ಯವಹಾರಗಳು ಮತ್ತು ತೀರ್ಪುಗಳು ದೊರಕದೆ ಬೇರೆಯವರ ಭಾಷೆಯಾದ-ಮೆಕಾಲೆಯವರ ಭಾಷೆಯಾದ ಇಂಗ್ಲೀಷ್‌ನಲ್ಲಿ ಅದು ದೊರೆಯುತ್ತಿದೆ. ಇದು ಸರಿಯಲ್ಲ. ಕನ್ನಡ ನಾಡಿನ ಸರ್ಕಾರದ ಆಡಳಿತ ಮತ್ತು ನ್ಯಾಯಾಲಯದ ವ್ಯವಹಾರ ಮತ್ತು ನ್ಯಾಯಾಲಯದ ತೀರ್ಪುಗಳು ಕನ್ನಡ ಭಾಷೆಯಲ್ಲಿ ಆಗಬೇಕು. ಕಾಯಿದೆ ಪುಸ್ತಕಗಳು ಕನ್ನಡದಲ್ಲಿ ಬರಬೇಕು. ಈ ಮೂರು ವಿಚಾರಗಳನ್ನು ಸರ್ಕಾರ ತಕ್ಷಣ ಜಾರಿಗೆ ತರಬೇಕು.

ಪಾರ್ಲಿಮೆಂಟ್ ಅಫೇರ್ಸ್ ಬಗ್ಗೆ ಹೇಳುವುದಾದರೆ ಆ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ಅನೇಕ ಸ್ನೇಹಿತರು ಹೇಳಿದ್ದಾರೆ. ಇವೊತ್ತು ನಮ್ಮ ಇಡೀ ಕರ್ನಾಟಕ ರಾಜ್ಯದ ವಿಧಾನ ಮಂಡಲದಲ್ಲಿ ಕೇವಲ 11 ಮಂದಿ ಕನ್ನಡ ವರದಿಗಾರರು ಇದ್ದಾರೆ. ಅವರ ಸಂಖ್ಯೆಯನ್ನು 16ಕ್ಕೆ ಏರಿಸಬೇಕು. ಮಹಾರಾಷ್ಟ್ರ ಮತ್ತು ಆಂಧ್ರ ಈ ರಾಜ್ಯಗಳಲ್ಲಿ ವರದಿಗಾರರಿಗೆ ಏನು ವೇತನ ಮತ್ತು ಅಲೋಯನ್ಸ್‌ಗಳನ್ನು ಕೊಡುತ್ತಿದ್ದಾರೆಯೋ ಅದೇ ರೀತಿ ನಮ್ಮ ಈ ವರದಿಗಾರರಿಗೂ ಕೊಡಬೇಕು. ಈಗ ನಮ್ಮ ರಾಜ್ಯದಲ್ಲಿ ಕನ್ನಡ ಟೈಪಿಸ್ಟ್ಸ್ ಮತ್ತು ಕನ್ನಡ ಸ್ಟೆನೋಗ್ರಾಫರುಗಳಿಗೆ ಏನು ಟೈಪಿಂಗ್ ಭತ್ಯವನ್ನು ಕೊಡುತ್ತಿದ್ದಾರೆಯೋ ಅದೇ ರೀತಿ ನಮ್ಮ ಕನ್ನಡ ವರದಿಗಾರರಿಗೂ ಟೈಪಿಂಗ್ ಭತ್ಯವನ್ನು ಕೊಡಬೇಕು. ನಮ್ಮ ವಿಧಾನ ಮಂಡಲದ ಅಧಿವೇಶನ ನಡೆಯುವಾಗ ಅವರಿಗೆ ಓವರ್ ಟೈಮ್ ಅಲೋಯನ್ಸ್ ಅನ್ನು ಒಂದು ಗಂಟೆಗೆ 5 ರೂಪಾಯಿಗಳಂತೆ ಓವರ್‌ಟೈಮ್ ಅಲೋಯನ್ಸ್ ಕೊಡಬೇಕು ಎಂದು ನಾನು ಹೇಳುತ್ತೇನೆ.

ನಮ್ಮ ಲೆಜಿಸ್ಲೇಚರ್‌ನಲ್ಲಿ ಪ್ರೊಸೀಡಿಂಗ್ಸ್ ಒಂದು ಕಡೆ, ಲೈಬ್ರರಿ ಒಂದು ಕಡೆ, ರೀಡಿಂಗ್ ರೂಮ್ ಒಂದು ಕಡೆ ಇದೆ. ಇದು ಶಾಸಕರಿಗೆ ಅನುಕೂಲವಾಗಿಲ್ಲ. ಆದಕಾರಣ ಇವೆಲ್ಲವನ್ನೂ ಸೇರಿಸಿ ಒಂದೇ ಕಡೆ ಒಂದು ಸುಂದರವಾದ ಮಂದಿರವನ್ನು ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ.

ರೆವಿನ್ಯೂ ಅಧಿಕಾರಿಗಳಿಗೆ ಎಂದರೆ ತಹಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮಿಷನರುಗಳ ಕೈಯಲ್ಲಿ ನ್ಯಾಯ ವಿತರಣೆಯ ಅಧಿಕಾರವನ್ನು ಕೊಟ್ಟಿದ್ದಾರೆ. ಅದನ್ನು ಸಂಪೂರ್ಣವಾಗಿ ನ್ಯಾಯಾಲಯಕ್ಕೆ ಕೊಡಬೇಕು. ಅದರಿಂದ ಜನಗಳಿಗೆ ಹೆಚ್ಚಿನ ಪ್ರಯೋಜನ ಆಗುತ್ತದೆ. ಈ ದೃಷ್ಟಿಯಿಂದ ರೆವಿನ್ಯೂ ಅಧಿಕಾರಿಗಳ ಕೈಯಲ್ಲಿ ನ್ಯಾಯಾಂಗದ ಕಾನೂನನ್ನು ಕೊಡುವುದರಿಂದ ಬಹಳ ಅನ್ಯಾಯವಾಗುತ್ತದೆ. ಅದು ಸಾಧುವಾದದ್ದಲ್ಲ. ಆದ್ದರಿಂದ ಅದನ್ನು ತಕ್ಷಣ ನ್ಯಾಯಾಧಿಕಾರಿಗಳಿಗೆ ವಹಿಸಿಕೊಡಬೇಕು.

ವಿಧಾನಪರಿಷತ್ತಿನ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದು ಒಂದು ರೀತಿಯಿಂದ ತಲೆಶಿರೋಭಾರವಾಗಿದೆ. ಇದು ಇರಬೇಕಾದ ಅವಶ್ಯಕತೆ ಇಲ್ಲ. ಉತ್ತರ ಪ್ರದೇಶ, ಬಿಹಾರ, ಮುಂತಾದ ರಾಜ್ಯಗಳಲ್ಲಿ ವಿಧಾನ ಪರಿಷತ್ತನ್ನು ತೆಗೆದುಹಾಕಿದ್ದಾರೆ. ಆದ್ದರಿಂದ ಈ ರಾಜ್ಯದಲ್ಲಿಯೂ ವಿಧಾನ ಪರಿಷತ್ತನ್ನು ತೆಗೆಯಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ. ರಾಜ್ಯಪಾಲರ ಹುದ್ದೆ ಮೂಗಿಗಿಂತ ಮೂಗುತಿ ಭಾರ ಎನ್ನುವ ಹಾಗೆ ಆಗಿದೆ. ಅವರಿಗೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಇದನ್ನೂ ಮತ್ತು ಸ್ವಲ್ಪ ಯೋಚನೆ ಮಾಡಿ ಈ ವಿಧಾನಪರಿಷತ್ತನ್ನು ತೆಗೆಯಬೇಕು.

ಸರ್ಕಾರದವರು ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಈಗ ಸುಮಾರು 25 ವರ್ಷಗಳಿಂದ ಇದುವರೆಗೆ ಕಾಂಗ್ರೆಸ್ ಪಕ್ಷದ ಚಿನ್ಹೆ ಜೋಡೆತ್ತು ಇತ್ತು. ಈಗ ಹಸುಕರು ಬಂದಿದೆ. ಆದರೆ ಎರಡು ಒಂದೇ ಜಾತಿಯ ಪ್ರಾಣಿಗಳು. ಅದರಲ್ಲೇನು ವ್ಯತ್ಯಾಸ ಇಲ್ಲ. ಈಗ ವಿಧಾನ ಪರಿಷತ್ತಿಗೆ ನಾಮಕರಣ ಮಾಡಿರತಕ್ಕ 3 ಜನ ಸದಸ್ಯರೇನಿದ್ದಾರೆ ಅವರಿಗೆ ಯಾವ ಅರ್ಹತೆ ಇದೆ? ಅವರೇನು ಕಲಾವಿದರೇ, ಕವಿಗಳೇ, ಸಾಹಿತಿಗಳೇ, ವೈದ್ಯರೇ ಅಥವಾ ಪತ್ರಿಕೋದ್ಯಮಿಗಳೇ, ಇಲ್ಲ ಪರಿಣತರೇ, ಸಂಸ್ಕೃತಿ ಅಥವಾ ಸಾಹಿತ್ಯಕ್ಕೋಸ್ಕರ ಅವರು ತಮ್ಮ ಜೀವನವನ್ನು ಮುಡುಪಾಗಿಟ್ಟು ದೇಶಕ್ಕಾಗಿ ತಮ್ಮ ಸೇವೆಯನ್ನು ಏನಾದರೂ ಸಲ್ಲಿಸಿದ್ದಾರೆಯೇ,

ಅದನ್ನೇನಾದರೂ ಗಮನಿಸಿ ಅವರನ್ನು ನಾಮಕರಣ ಮಾಡಿದ್ದೀರಾ? ತಮ್ಮ ಪಕ್ಷದವರೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೊಬ್ಬರನ್ನು ಇನ್ನೊಬ್ಬರು ಶ್ರೀಮತಿ ಕಮಲಾನಿ ಎನ್ನುವವರು ಒಬ್ಬರನ್ನೂ ಮತ್ತೊಬ್ಬರು ಮಾಜಿ ಮಂತ್ರಿಗಳು ಈ ರೀತಿ 3 ಜನರನ್ನು ನಾಮಕರಣ ಮಾಡಿದ್ದೀರಿ. ಹಿಂದಿನವರ ಜಾಡಿನಲ್ಲಿಯೇ ನೀವು ಮುಂದುವರಿದಿದ್ದೀರಿ, ನಿಮ್ಮ ಪಕ್ಷದ ಹಿತವನ್ನು ರಕ್ಷಣೆ ಮಾಡುವುದಕ್ಕೆ ಪುಡಾರಿಗಳಿಗೆ ಸ್ಥಾನವನ್ನು ಕಲ್ಪಿಸುವುದಕ್ಕೆ ಮತ್ತು ಯಾರಿಗೋ ಸಮಾಧಾನವನ್ನುಂಟು ಮಾಡುವುದಕ್ಕೆ ನಾಮಕರಣ ಮಾಡಿದ್ದೀರಿ. ಇದನ್ನು ನೋಡಿದರೆ ನೀವು ನಾಚಿಕೆಯಿಂದ ಮುಖ ಮುಚ್ಚಿಕೊಳ್ಳಬೇಕು. ಇದು ಆಡಳಿತ ಕಾಂಗ್ರೆಸ್ಸಿನವರು ಸಮಾಜವಾದವನ್ನು ಜಾರಿಗೆ ತರತಕ್ಕ ವೈಖರಿ!

ಕೈಗಾರಿಕೆಯ ಬಗೆಗೂ ಎರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ಕೈಗಾರಿಕಾ ಮಂತ್ರಿಗಳು ಸಮಾಜವಾದದಲ್ಲಿ ಮುಳುಗಿ ಬಂದಿದ್ದಾರೆ. ಅವರು ಹಿಂದೆ ನಮ್ಮ ಪಕ್ಷದಲ್ಲಿದ್ದರು. ನಮ್ಮ ಸ್ನೇಹಿತರು. ಅವರಿಗೆ ಸಮಾಜವಾದದ ಬಗ್ಗೆ ಪೂರ್ಣವಾದ ಪ್ರಜ್ಞೆ ಇದೆ. ಇವೊತ್ತು ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡುವ ಬಗ್ಗೆ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಕೇಂದ್ರೀಕರಿಸುವುದು ನಮಗೆ ಅಪಾಯ, ಕಟ್ಟಿಟ್ಟ ಬುತ್ತಿ. ಕೈಗಾರಿಕೆಯನ್ನು ಕೇಂದ್ರೀಕೃತ ಮಾಡುವುದರಿಂದ ರಾಜ್ಯದ ಹಿತಕ್ಕೆ ಅಪಾಯ ಆದ್ದರಿಂದ ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡಿ ಹಳ್ಳಿಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಇಡೀ ಕರ್ನಾಟಕ ರಾಜ್ಯಾದ್ಯಂತ ಒಳ್ಳೆಯ ಕೈಗಾರಿಕೆಗಳು ಸ್ಥಾಪನೆಯಾಗಬೇಕು. ಇವೊತ್ತು ಉದಾಹರಣೆಗೆ ತೀರ್ಥಹಳ್ಳಿ, ಸಾಗರ ಹೊಸನಗರ ಇವು ಸ್ವಚ್ಛ ಮಲೆನಾಡು. ಅಲ್ಲಿ ಬೇಕಾದಷ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಅವಕಾಶ ಇದೆ. ಇವುಗಳನ್ನು ತಜ್ಞರಿಂದ ಪರಿಶೀಲನೆ ಮಾಡಿಸಿ ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಈಗ ಇದಕ್ಕೆ ಮುಖ್ಯವಾಗಿರತಕ್ಕ ಕೊರತೆ ವರ್ಕಿಂಗ್ ಕ್ಯಾಪಿಟಲ್ ಇಲ್ಲದೇ ಇರುವುದು. ಕಚ್ಚಾವಸ್ತುಗಳ ಅಭಾವ, ಇತರ ಇಲಾಖೆಗಳ ಸಹಕಾರ ಇಲ್ಲದೇ ಇರುವುದು, ಮಾರ್ಕೆಟ್ ಇಲ್ಲದೇ ಇರುವುದು. ಈ ನಾಲ್ಕು ಕೊರತೆಗಳನ್ನು ನೀಗಿಸುವುದಕ್ಕೆ ಸರ್ಕಾರದವರು ಏನು ಏರ್ಪಾಡು ಮಾಡಬೇಕೋ ಅದನ್ನು ಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಈ ಖಾದಿ ಮಂಡಲಿ ಏನಿದೆ ಈ ಖಾದಿ ಮಂಡಲಿಗೂ ಶರಾವತಿ ಹಾಗೂ ಭದ್ರಾವತಿಯಷ್ಟೇ ಹಣ ವ್ಯಯವಾಗಿದೆ. ಖಾದಿ ಮಂಡಲಿಯನ್ನು ರಚಿಸಿದ ತಾರೀಖಿನಿಂದ ಇಲ್ಲಿಯವರೆಗೂ ಅಲ್ಲಿ ಆದಂತಹ ವ್ಯವಹಾರ ಅವ್ಯವಹಾರ, ಅನೈತಿಕ ವ್ಯವಹಾರಗಳನ್ನು ತನಿಖೆ ಮಾಡಬೇಕು. ಮೊಟ್ಟ ಮೊದಲು ಈ ಖಾದಿ ಮಂಡಲಿಯನ್ನು ರದ್ದು ಮಾಡಬೇಕು. ಈಗಿರತಕ್ಕ ಇದರ ಅಧ್ಯಕ್ಷರು ಯಾರೋ ನನಗೆ ಗೊತ್ತಿಲ್ಲ. ಈಗಿನ ಮಂತ್ರಿಮಂಡಲದಲ್ಲಿರತಕ್ಕವರು ಒಬ್ಬರು ಹಿಂದೆ ಈ ಖಾದಿ ಬೋರ್ಡಿಗೆ ಅಧ್ಯಕ್ಷರಾಗಿದ್ದರು. ಕಾಂಗ್ರೆಸ್ ಮುಖಂಡರೊಬ್ಬರು ಮತ್ತೊಬ್ಬರು ದಿವಂಗತರಾದ ಶ್ರೀಮಾನ್ ಹಳ್ಳಿಕೇರಿಯವರು ಇವರೆಲ್ಲರೂ ಖಾದಿ ಬೋರ್ಡಿನ ಅಧ್ಯಕ್ಷರಾಗಿ ಎಷ್ಟು ಹಣವನ್ನು ಲೂಟಿ ಮಾಡಿದ್ದಾರೆ? ಖಾದಿಯ ಹೆಸರಿನಲ್ಲಿ ಎಷ್ಟು ಹಣ ಅಪವ್ಯಯವಾಗಿದೆ ಎಂಬುದನ್ನು ತನಿಖೆ ನಡೆಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಬಿ. ಎಂ. ಡಿ. ಎಂತ ಒಂದು ಮ್ಯಾಂಗನೀಸ್ ಬೋರ್ಡ್ ಇದೆ. ಇದರಲ್ಲಿ ಏನು ಮ್ಯಾಂಗನೀಸನ್ನು ಸಾಗಿಸುವುದಕ್ಕೆ ಖಾಸಗಿಯವರಿಗೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಇದರಿಂದ ಸರ್ಕಾರಕ್ಕೆ ಅಪಾರವಾದ ನಷ್ಟವಾಗುತ್ತಿದೆ. ಆದ್ದರಿಂದ ಸರ್ಕಾರದವರು ಅದನ್ನು ಪೂರ್ತಿಯಾಗಿ ವಹಿಸಿಕೊಳ್ಳುವುದು ಅವಶ್ಯಕ. ಕೊಡಚಾದ್ರಿ ಬೆಟ್ಟದಲ್ಲಿ ಬೇಕಾದಷ್ಟು ಮ್ಯಾಂಗನೀಸ್ ಇದೆ. ಅದನ್ನು ಉಪಯೋಗ ಮಾಡಿಕೊಳ್ಳಲು ಒಂದು ಫ್ಯಾಕ್ಟರಿಯನ್ನು ಓಪನ್ ಮಾಡಬೇಕು.

ಕೈಗಾರಿಕೆಗಳಿಗೆ ಕಾರ್ಮಿಕರನ್ನು ನೇಮಿಸುವಾಗ ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಸ್ಥಳೀಯ ಕಾರ್ಮಿಕರಿಗೆ ಮೊದಲು ಕೆಲಸ ಕೊಡಬೇಕೆಂದು ಅವರು ಒಂದು ಕಾನೂನು ಮಾಡಿಕೊಂಡಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಸಹ ನಿಯಮಗಳನ್ನು ಮಾಡಿಕೊಂಡು ಕರ್ನಾಟಕದಲ್ಲಿ ಸ್ಥಾಪನೆ ಆಗತಕ್ಕಂಥಾ ಕೈಗಾರಿಕೆಗಳಲ್ಲಿ ಸರ್ಕಾರಿ ಕೈಗಾರಿಕೆಯಾಗಲೀ ಅಥವಾ ಖಾಸಗೀ ಕೈಗಾರಿಕೆಯಾಗಲೀ, ಅದರಲ್ಲಿ 100ಕ್ಕೆ 100 ಅಥವಾ 100 ಕ್ಕೆ 95 ಕೆಲಸಗಳನ್ನು ಕನ್ನಡ ಜನರಿಗೆ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

6-30 P.M.

† ಶ್ರೀ ಆರ್. ರಾಜೇಗೌಡ (ಹಾನೂರು).—ಸನ್ಮಾನ್ಯ ಸಭಾಪತಿಗಳೇ, ಈ ದಿವಸ ಕೈಗಾರಿಕೆಯ ಬೇಡಿಕೆಯನ್ನು ನಾನು ಬೆಂಬಲಿಸುತ್ತಾ, ಈ ರೇಶ್ಮೆ ಕೈಗಾರಿಕೆಯ ಬಗ್ಗೆ ಮಾತ್ರ ಮಾತನಾಡಲು ಇಚ್ಛೆಪಡುತ್ತೇನೆ. ನಮ್ಮ ದೇಶದಲ್ಲಿ ಸುಮಾರು 10 ಲಕ್ಷ ಜನ ಈ ಗೃಹ ಕೈಗಾರಿಕೆಯಲ್ಲಿ ನಿರತರಾಗಿದ್ದಾರೆ ಎನ್ನುವುದು ನಿರ್ವಿವಾದ. ಇಷ್ಟು ಜನ ಈ ಕೈಗಾರಿಕೆಯಲ್ಲಿ ನಿರತರಾಗಿದ್ದರೂಕೂಡ ಶತಮಾನಗಳ ಹಿಂದೆ ಇದು ಯಾವ ರೀತಿಯಲ್ಲಿ ಇತ್ತೋ ಅದೇ ರೀತಿಯಲ್ಲಿ ಇದು ಈಗಲೂ ಮುಂದುವರಿಯುತ್ತಾ ಇರುವುದು ಬಹಳ ಶೋಚನೀಯವಾಗಿದೆ. ಕೈಗಾರಿಕೆಯಲ್ಲಿ ಯಾವ ಅಭಿವೃದ್ಧಿಯೂ ಸಾಧನೆಯಾಗಿಲ್ಲ. ನಾವು ಸುಮಾರು ಶತಮಾನಗಳಿಂದ ಕೈಗಾರಿಕೆಗಳಲ್ಲಿದ್ದರೂ ಕೂಡ ಪರದೇಶಗಳಾದ ಜಪಾನ್ ಮತ್ತು ರಷ್ಯಾಕ್ಕೆ ಸರಿಸಮಾನಾಗಿ ನಮ್ಮ ಕೈಗಾರಿಕೆಗಳನ್ನು ಬೆಳೆಸಿಕೊಂಡು ಹೋಗುವುದಕ್ಕೆ ಅವಕಾಶ ಇಲ್ಲದಿರುವುದು ನನಗೆ ಬಹಳ ದುಃಖವನ್ನುಂಟು ಮಾಡುತ್ತದೆ. ಇದಕ್ಕೆ ಕಾರಣವಾದರೂ ಇಷ್ಟೆ. ನಾವು ಇದನ್ನು ಸಾಕಷ್ಟು ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿ ಪಡಿಸದಿರುವುದೇ ಇದಕ್ಕೆ ಕಾರಣವೆಂದು ನನ್ನ ಅಭಿಪ್ರಾಯ. ಈ ಸೆಂಟ್ರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎನ್ನುವುದು ಪ್ರಾರಂಭವಾಗಿ 10—12 ವರ್ಷಗಳಾಗಿದೆ. ಬಿಳಿ ಗೂಡಿನಲ್ಲಿ ವೈಜ್ಞಾನಿಕವಾಗಿ ರೇಶ್ಮೆ ತಯಾರು ಮಾಡತಕ್ಕ ಕಾರ್ಯ ನಡೆದಿದೆ. ಆದರೆ ಇಷ್ಟು ದಿವಸವಾದರೂ ಕೂಡಜನರಿಗೆ ಸಾಮಾನ್ಯವಾಗಿ ಎಷ್ಟು ಮಟ್ಟಿಗೆ ಈ ಬಿಳಿ ಗೂಡನ್ನು ಸಪ್ಲೈ ಮಾಡಬೇಕೋ, ಅಷ್ಟು ಮಟ್ಟಿಗೆ ಸರಬರಾಯಿ ಮಾಡುವುದಕ್ಕೆ ಇನ್ನೂ ಸಾಧ್ಯವಾಗಿರುವುದಿಲ್ಲ. ಬಹಶಃ ನಮ್ಮ ಇಲಾಖೆಯವರು ಈ ಬಿಳಿ ಗೂಡು ನಮಗೆ ಸಾಕಷ್ಟು ದೊರೆಯುತ್ತಾ ಇದೆ, ನಮಗೆ ಎಷ್ಟು ಬೇಕೋ ಅಷ್ಟು ದೊರೆಯುತ್ತಾ ಇದೆ ಎಂದು ತಮ್ಮ ಲೆಕ್ಕಪತ್ರಗಳಲ್ಲಿ ಬರೆದುಕೊಂಡಿರುವಂತೆ ಕಾಣುತ್ತದೆ. ನಾನಾದರೂ ಹೇಳುತ್ತೇನೆ, ಈ ಬಿಳಿ ಗೂಡು ನಮ್ಮ ಇಲಾಖೆಯಲ್ಲಿ ಜನರಿಗೆ ಎಷ್ಟು ಸಿಗಬೇಕೋ ಅಷ್ಟು ಸಿಗುತ್ತಾ ಇಲ್ಲ. ಅವರು ಕೂಡ ಹೊರಗಡೆಯಿಂದ ಖಾಸಗೀ ಜನರಿಂದ ಇದನ್ನು ಕೊಂಡುಕೊಳ್ಳುತ್ತಿದ್ದಾರೆಂದು ತಿಳಿದಿದ್ದೇನೆ. ಇದು ನಮ್ಮ ಇಲಾಖೆಗೆ ಒಂದು ಕುಂಠಿತವನ್ನು ತರತಕ್ಕ ವಿಷಯವೆಂದು ಹೇಳುತ್ತೇನೆ. ಈ ಮಿಶ್ರತಳಿ ಸುಮಾರು 1928 ನೇ ಇಸವಿಯಲ್ಲಿ ಪ್ರಾರಂಭವಾದರೂ ಹಿಂದೆ ಒಬಿರಾಯನ ಕಾಲದಲ್ಲಿ ಹೇಗೆ ಇದು ಇತ್ತೋ ಅದೇ ರೀತಿಯಲ್ಲಿ ಇಂದೂ ಇದೆಯಲ್ಲದೆ ಅಭಿವೃದ್ಧಿಯನ್ನು ಹೊಂದಿಲ್ಲ ಸೆಂಟ್ರಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ಕೆಲವು ಒಳ್ಳೆಯ ತಳಿಗಳನ್ನು ಪ್ರಾರಂಭ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದು ಎಗ್ಸಿಬಿಷನಿನಲ್ಲಿಡತಕ್ಕ ಮಟ್ಟಿಗೆ ಮಾತ್ರ ದೊರೆಯುತ್ತಿದೆಯಲ್ಲದೆ ಸಾಮಾನ್ಯ ಜನರಿಗೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತೇನೆ. ಇವತ್ತು ರೇಶ್ಮೆ ಸಂಶೋಧನೆಗೆ ಕೇಂದ್ರ ಸರ್ಕಾರದವರು ಹೆಚ್ಚಿನ ಉತ್ತೇಜನ ಕೊಟ್ಟರೆ ಮಾತ್ರ ಇದರಲ್ಲಿ ಸುಧಾರಣೆ ಮಾಡಿ ಮುಂದುವರಿಯಬಹುದಲ್ಲದೆ ಈಗ ಇದ್ದ ರೀತಿಯಲ್ಲೇ ಮುಂದುವರಿಯಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ಈಗ ಕ್ರಾಷ್ ಪ್ರೋಗ್ರಾಂನಲ್ಲಿ 80 ಕೋಟಿ ರೂಪಾಯಿ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಈ 80 ಕೋಟಿ ರೂಪಾಯಿಯನ್ನು ವಿತರಣೆ ಮಾಡತಕ್ಕ ಸಂದರ್ಭದಲ್ಲಿ ಈ ರೇಶ್ಮೆ ಬಿಚ್ಚತಕ್ಕ ಜನರಿಗೆ ಹೆಚ್ಚಿನ ಅನುಕೂಲವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಆ ಜನರು ಸಾಮಾನ್ಯವಾಗಿ ಬಂಡವಾಳಸ್ಥರಾಗಿರುವುದಿಲ್ಲ. ಆದ್ದರಿಂದ ಕೇಂದ್ರಸರ್ಕಾರದವರು ಕೊಟ್ಟಿರತಕ್ಕ ಹಣದಿಂದ ಈ ರೇಶ್ಮೆ ಬಿಚ್ಚತಕ್ಕಂತಹ ಜನರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ, ಹೆಚ್ಚು ಉತ್ಪಾದನೆ ಮಾಡುವ ಹಾಗೆ ಮಾಡಬೇಕೆಂದು ಹೇಳುತ್ತೇನೆ.

ಒಂದು ಉದಾಹರಣೆಯನ್ನು ಕೊಡುತ್ತೇನೆ. ಸುಮಾರು ಒಂದು ವರ್ಷದ ಹಿಂದೆ ಒಬ್ಬ ಕೊಳ್ಳೆಗಾಲದ ರೈತ ಒಂದು 50—60 ಕೆ. ಜಿ. ರೇಶ್ಮೆಯನ್ನು ಯಾವ ಒಂದು ಅಡ್ವಾನ್ಸನ್ನು ತೆಗೆದುಕೊಳ್ಳದೆ ಒಬ್ಬರ ಹತ್ತಿರ ಒತ್ತೆ ಇಟ್ಟಿದ್ದ. ಆದರೆ ಆ ಒತ್ತೆ ಇಟ್ಟುಕೊಂಡಿದ್ದ ಮನುಷ್ಯನ ಅಪ್ಪಣೆಯಿಲ್ಲದೆ ತನಗೆ ಇಷ್ಟ ಬಂದ ಹಾಗೆ ಬೇರೆಯವರಿಗೆ ಮಾರಿಬಿಟ್ಟ. ಪುನಃ ರೇಶ್ಮೆ ತಂದಿಟ್ಟಂತಹ ಮನುಷ್ಯ ಕೇಳಲಿಕ್ಕೆ ಬಂದಾಗ ಇನ್ನೊಂದು ಸಾರಿ ಬಂದಾಗ ಕೊಡುತ್ತೇನೆ, ದಯವಿಟ್ಟು ಗಲಾಟೆ ಮಾಡಬೇಡಿ ಎಂದು ಸಮಾಧಾನ ಮಾಡಿ ಕಳುಹಿಸಿದ. ಇಂಥ ಅವ್ಯವಹಾರ ನಡೆಯಬಾರದು ಎಂದು ಸಂಬಂಧಪಟ್ಟವರಿಗೆ ಕೇಳಿಕೊಳ್ಳುತ್ತಿದ್ದೇನೆ.

ಇನ್ನೊಂದು ವಿಚಾರವೇನೆಂದರೆ, ಈಗಾಗಲೇ ನನಗೆ ತಿಳಿದಮಟ್ಟಿಗೆ ಈ ನಮ್ಮ ಇಲಾಖೆಗೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆಗಿ ಒಬ್ಬ ಐ. ಎ. ಎಸ್. ಆಫೀಸರನ್ನು ಹಾಕುತ್ತಾರೆಂದು ನಾನು ತಿಳಿದಿದ್ದೇನೆ. ಇವತ್ತು ನಮ್ಮ ಕೈಗಾರಿಕೆಯನ್ನು ಅಭಿವೃದ್ಧಿ ಮಾಡಬೇಕಾದರೆ ಇಂಥ ಇಲಾಖೆಗಳಿಗೆ ಒಳ್ಳೆಯ ನುರಿತ ಸೀನಿಯರ್ ಅಧಿಕಾರಿಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ನ್ಯಾಯಾಂಗ ವಿಚಾರವಾಗಿ ಒಂದು ಮಾತು. ನಮ್ಮ ಕೊಳ್ಳೆಗಾಲ ತಾಲ್ಲೂಕಿನಲ್ಲಿರುವ ಮುನ್ಸೀಫ್ ಕೋರ್ಟಿನಲ್ಲಿ ಒಂದು ವರ್ಷದ ಹಿಂದೆ ಒಂದು ಕೇಸ್ ದಾಖಲಾಗಿದೆ. ಆದರೆ ಆ ಕೇಸ್ ಇನ್ನೂ ಕೂಡ ವಿಚಾರಣೆಗೆ ಬಂದಿಲ್ಲ. ಆದ್ದರಿಂದ ಎಲ್ಲೆಲ್ಲಿ ಕೇಸುಗಳು ಜಾಸ್ತಿ ಇವೆಯೋ ಅಂಥ ತಾಲ್ಲೂಕು ಕಸಬಾದಲ್ಲ ಒಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟುಗಳನ್ನು ನೇಮಿಸಬೇಕೆಂದು ಪ್ರಾರ್ಥಿಸಿಕೊಂಡು, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ).—ಸನ್ಮಾನ್ಯ ಸಭಾಧ್ಯಕ್ಷರೆ, ಈಗ ನಮ್ಮ ಮುಂದೆ ಮಂಡಿಸಿರತಕ್ಕಂತಹ ರೇಶ್ಮೆ ಕೈಗಾರಿಕೆ ಮತ್ತು ಸಂಸದೀಯ ಇಲಾಖೆಯವರು ಇಟ್ಟಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ಸೂಕ್ತವಾದ ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ಕೈಗಾರಿಕೆಯ ವಿಷಯದಲ್ಲಿ ಹೇಳುವುದಾದರೆ, ಇದು ಮೈಸೂರಿನವರಿಗೆ ಹೊಸದೇನೂ ಅಲ್ಲ. ನನಗನಿಸುತ್ತದೆ. ಈ ನಮ್ಮ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗಳು ನಮ್ಮ ಭಾರತದ ದೇಶದದಲ್ಲಿಯೇ ಮೊದಲನೆಯ ಇಲಾಖೆಗಳೆಂದು ತಿಳಿಯುತ್ತೇನೆ. 1911 ರಲ್ಲಿ ಒಂದು ಎಕನಮಿಕ್ ಕಾನ್‌ಫರೆನ್ಸ್ ನಡೆದಿತ್ತು. ಆ ಸಮಯದಲ್ಲಿ ಹೇಳುವುದಾದರೆ ನಮ್ಮ ಎಲೆಕ್ಟ್ರಿಕ್ ರೇಟ್ ಟ್ಯಾರಿಫ್ ರೇಟ್ ಇತ್ಯಾದಿಗಳು ನಮ್ಮ ದೇಶದಲ್ಲಿ ಬಹಳ ಕಡಿಮೆಯಾಗಿದೆ. ಇವೆಲ್ಲ ಇದ್ದರೂ ಕೂಡ ಕೈಗಾರಿಕಾ ಕ್ಷೇತ್ರದಲ್ಲಿ ನಾವು 8 ನೇ ಸ್ಥಾನವನ್ನು ಇವತ್ತು ಪಡೆದಿದ್ದೇವೆ. ಇದಕ್ಕೆ ಕಾರಣವಾದರೂ ಏನು ? ನಮ್ಮಲ್ಲಿ ಹೆಚ್ಚಿನ ಅರಣ್ಯ ಸಂಪತ್ತು ಇವತ್ತು ಸಹ ಇದೆ, ಖನಿಜ ಸಂಪತ್ತು ಇದೆ ಮತ್ತು ನೈಸರ್ಗಿಕ ಸಂಪತ್ತು ಇದ. ಇವೆಲ್ಲಾ ಇದ್ದರೂ ಸಹ ಏಕೆ ಹೀಗಾಯಿತು ? ಇದಕ್ಕೆ ಕಾರಣವೇನೆಂದು ನೋಡಿದಾಗ ನನಗೆ ಇಷ್ಟು ಕಂಡು ಬರುತ್ತದೆ. ಇವತ್ತು ನಮ್ಮ 25 ವರ್ಷಗಳ ಆಳ್ವಿಕೆಯಲ್ಲಿ ನಾವು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡಂತೆ ಕಾಣುವುದಿಲ್ಲ. ನಾವು ಇಂದು ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರ—ಎಂದು ಎರಡು ಕ್ಷೇತ್ರಗಳಲ್ಲಿ ಕೈಗಾರಿಕೆಗಳನ್ನು ನಡೆಸುತ್ತಿದ್ದೇವೆ. ಸಾರ್ವಜನಿಕ ಕ್ಷೇತ್ರದಲ್ಲಿಯೂ ಎಲ್ಲಾ ಅನುಕೂಲತೆಗಳನ್ನು ಕೊಟ್ಟರೂ ಏಕೆ ಹಿಂದುಳಿದಿದ್ದಾರೆ ? ಹಾಗೆಯೇ ಖಾಸಗೀ ಕ್ಷೇತ್ರದಲ್ಲಿ ಮುಂದೆ ಬರುವುದಕ್ಕೆ ಏನು ಕಾರಣ ? ಇದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದರ ಜೊತೆಗೆ ನಮ್ಮಲ್ಲಿ ಇವತ್ತು ಅನೇಕ ತರದ ಕೈಗಾರಿಕೆಗಳು ಇವೆ. ಕಾಟೇಜ್ ಇಂಡಸ್ಟ್ರೀಸ್ ಇವೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇವೆ ಮತ್ತು ಲಾರ್ಜ್ ಸ್ಕೇಲ್ ಇಂಡಸ್ಟ್ರೀಸ್ ಸಹ ನಮ್ಮಲ್ಲಿ ಇವೆ. ಹೀಗಿದ್ದರೂ 100ಕ್ಕೆ 80 ಭಾಗ ಕೈಗಾರಿಕೆಗಳನ್ನು ನಾವು ಉತ್ತೇಜನ ಕೊಡದೆ ಇರುವುದರಿಂದ ಹಿಂದೆ ಬಿದ್ದಿವೆ. ನಿತ್ಯ ವಸ್ತುಗಳ, ಮತ್ತು ಅವಶ್ಯವಿರುವ ವಸ್ತುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡದೆ ಹಿಂದೆ ಬಿದ್ದಿದ್ದೇವೆ. ಇದಕ್ಕೆ ನಾನು ಒಂದೆರಡು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಇನ್ನು ಮುಂದಾದರೂ ಈ ಕ್ಷೇತ್ರದಲ್ಲಿ ನಾವು ಮುಂಪೆ ಬರಬೇಕಾದರೆ ಒಂದು "ಲಾಂಗ್ ಟರ್ಮ್ ಪ್ಲಾನ್," ಮತ್ತೊಂದು 'ಷಾರ್ಟ್ ಟರ್ಮ್ ಪ್ಲಾನ್'—ಹೀಗೆ ಎರಡು ಭಾಗಗಳಾಗಿ ವಿಂಗಡಿಸಬೇಕು. ಇದಕ್ಕೆ "ಟೆಕ್ನೋ ಎಕನಾಮಿಕ್ ಸರ್ವೆ" ಮಾಡಬೇಕು. ಇನ್ನೊಂದು ಪ್ರತಿಯೊಂದು ಗ್ರಾಮದಲ್ಲಿಯೂ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕು. ಅದನ್ನು ತಾಲೂಕು ಕೇಂದ್ರಗಳಲ್ಲಿರುವಂತೆ ಮಾಡಬೇಕು. ಅದಕ್ಕೋಸ್ಕರ ಒಂದು "ರೂರಲ್ ಇಂಡಸ್ಟ್ರಿಯಲ್ ಪ್ಲಾನಿಂಗ್ ಕಮಿಟಿ" ಪ್ರತಿಯೊಂದು ಗ್ರಾಮದಲ್ಲಿಯೂ ಇರಬೇಕೆಂದು ಹೇಳುತ್ತೇನೆ. ಇವೂ ಅಲ್ಲದೆ ನಮ್ಮಲ್ಲಿ ತುಮಕೂರಿನಿಂದ ಹೊಸದುರ್ಗದವರೆಗೆ ಬೇಕಾದಷ್ಟು ತೆಂಗಿನ ನಾರು ಸಿಗುತ್ತದೆ. ನಾವು ಇದಕ್ಕೆ ಒಂದು ಕಾಯಿರ್ ಕೋಪರೇಟಿವ್ ಸೊಸೈಟಿ ಎಂದು ಹೆಸರು ಇಟ್ಟು ಉತ್ಪತ್ತಿಯಾದ ವಸ್ತುಗಳನ್ನು ಪರದೇಶಗಳಿಗೆ ಕಳಿಸುವಂತಹ ವಸ್ತುಗಳನ್ನು ತಯಾರಿಸಿ ಹೊರದೇಶಗಳಿಗೆ ಕಳಿಸುವಂತಹ ಏರ್ಪಾಡು ಮಾಡಬೇಕು. ಅಂತಹ ಕಾಲ ನಮ್ಮಲ್ಲಿ ಬೇಗನೇ ಬರುತ್ತದೆ ಎಂದು ಆಶಿಸುತ್ತೇನೆ. ಆದರ ಜೊತೆಗೆ ಲೆದರ್ ಬೋರ್ಡ್ ಎನ್ನುವುದು ಸಾಧಾರಣವಾಗಿ ನಮ್ಮಲ್ಲಿ ಆಗಿಲ್ಲ. ವಾನಿಯಂಬಾಡಿ ಮತ್ತು ಮದ್ರಾಸ್‌ನಲ್ಲಿ ಬೇಕಾದಷ್ಟು ಲೆದರ್ ಇಂಡಸ್ಟ್ರೀಸ್ ಡೆವಲಪ್ ಆಗಿದೆ. ಖಾನಾಪುರದಲ್ಲಿ ಇದ್ದ ಹಾಗೆ ನಾವು ಇಂಪ್ರೂವ್ ಮಾಡಬೇಕು. ಆದ್ದರಿಂದ ಈ ಸಂದರ್ಭದಲ್ಲಿ ಒಂದು ಬೋರ್ಡ್ ಮಾಡಲು ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ.

ಮೂರನೆಯದಾಗಿ ಸಿಲ್ಕ್ ಇಂಡಸ್ಟ್ರಿ. ಅದು ಕ್ವೀನ್ ಆಫ್ ಟೆಕ್ಸ್‌ಟೈಲ್ ಇಂಡಸ್ಟ್ರಿ ಎಂದು ಕರೆಯುತ್ತಾರೆ ಇದಕ್ಕೆ ಪ್ರಪಂಚದಲ್ಲಿ ನಾಲ್ಕನೆಯ ಸ್ಥಾನ ಬಂದಿದೆ. ನಮ್ಮ ಮೈಸೂರಿನಲ್ಲಿ ರೇಷ್ಮೆ ಕೈಗಾರಿಕೆಗೆ ಒಂದು ಕಾಲದಲ್ಲಿ ಒಳ್ಳೆಯ ಹೆಸರಿತ್ತು ಇವತ್ತಿನ ದಿವಸ ಅದು ಬಹಳ ಹೀನ ಪರಿಸ್ಥಿತಿಗೆ ಬಂದಿದೆ. ಕಾರಣ, ಇದಕ್ಕೆ ಸರಿಯಾದ ಮಾರ್ಕೆಟ್, ಇದಕ್ಕೆ ಇರುವ ವಸತಿ, ಹಣದ ಸೌಲಭ್ಯ ಸಾಕಷ್ಟು ಇದ್ದ ಹಾಗೆ ಕಾಣಲಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನಮ್ಮ ಮೈಸೂರಿನಲ್ಲಿ ಇರತಕ್ಕ ಇಂಡಸ್ಟ್ರಿಯಲ್ ಫೈನಾನ್ಷಿಯಲ್ ಕಾರ್ಪೊರೇಷನ್ ಸಂಸ್ಥೆಯು ನೆರವು ಬರಬೇಕೆಂದು ಒತ್ತಿ ಹೇಳುತ್ತೇನೆ.

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು)

ಇನ್ನು ಸ್ಯಾಂಡಲ್‌ವುಡ್‌ನಲ್ಲಿ ಗುಡಿಕಾರರು ಚನ್ನಪಟ್ಟಣದಲ್ಲಿ ಮಾಡತಕ್ಕ ಸಾಮಾನುಗಳ ಬಣ್ಣದ ಸಾಮಾನು ಹಾಗೂ ಐರನ್ ಮತ್ತು ಮ್ಯಾಂಗನೀಸ್ ಅಭಿವೃದ್ಧಿಯ ಬಗ್ಗೆ ಸರ್ಕಾರದವರು ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಇದರಲ್ಲಿ ತಯಾರಿಸಿದ ಅನೇಕ ಸಾಮಾನುಗಳು ಪರದೇಶಗಳಿಂದ ನಮಗೆ ಪುನಃ ಇನ್ನೊಂದು ರೀತಿಯಲ್ಲಿ ವಾಪಸ್ ಬರುತ್ತವೆ. ನಮ್ಮಲ್ಲಿರತಕ್ಕ ಕೈಗಾರಿಕೆ ಹೆಚ್ಚಿನ ಪ್ರಗತಿ ಸಾಧನೆಯಾಗಬೇಕಾದರೆ ಈ ಸಂದರ್ಭದಲ್ಲಿ ಒಂದು ಸೂಕ್ತ ಸಲಹೆಯನ್ನು ಕೊಡಬಯಸುತ್ತೇನೆ. ಆದಷ್ಟು ಜಾಗ್ರತೆಯಾಗಿ ಒಂದು ಇಂಡಸ್ಟ್ರಿಯಲ್ ಕಮಿಷನ್ನು ಒಂದನ್ನು ಅಪಾಯಿಂಟ್ ಮಾಡಿ ತನ್ಮೂಲಕ ನಮ್ಮಲ್ಲಿರತಕ್ಕ ಲೋಪ ದೋಷಗಳನ್ನು ಕಂಡುಹಿಡಿದು ಅವುಗಳನ್ನು ಬೇಗ ತಿದ್ದಿಕೊಂಡು ನಾವು ಮುಂದೆ ಹೋಗಬೇಕು. ಹಿಂದೆಯೇ ನಮ್ಮ ಮಾನ್ಯ ಶ್ರೀ ವಿಶ್ವೇಶ್ವರಯ್ಯನವರೇ ಇಂಡಸ್ಟ್ರಿಯಲೈಜ್ ಅರ್ ಪೆರಿಷ್ ಎಂಬ ಮಾತನ್ನು ಹೇಳಿದ್ದಾರೆ. ಇದರ ಜೊತೆಗೆ ಸರ್ಕಾರದ ನೆರವೂ ಸಹ ಬೇಕು. ಈ ಇಲಾಖೆಯ ಬಗ್ಗೆ ಹೇಳುವುದಾದರೆ, ಇನ್ನು ಮುಂದೆ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಡಿಪಾರ್ಟ್‌ಮೆಂಟ್ ಏನಿದೆಯೋ ಅದನ್ನು ಎರಡು ಭಾಗಗಳಾಗಿ ವಿಂಗಡಿಸಿ ನ್ಯೂ ಪ್ರಾಜೆಕ್ಟಿಗೇ ಒಬ್ಬ ಜಾಯಿಂಟು ಡೈರೆಕ್ಟರನ್ನು ಹಾಕಿದರೆ ಬಹಳ ಒಳ್ಳೆಯದು. ಆಗ ಸುಗಮವಾಗಿ ಕೆಲಸಕಾರ್ಯಗಳು ನಡೆಯುತ್ತವೆ. ಈ ಇಲಾಖೆಯಲ್ಲಿ ಹಿಂದುಳಿದವರಿಗೆ ಕೆಲವು ಸ್ಥಾನಗಳನ್ನು ಕೊಡಬೇಕೆಂದು ಒತ್ತಿ ಹೇಳುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡಲು ಕಾಲಾವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕೆ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವೊಂದು ಮಾತುಗಳನ್ನು ಹೇಳಬಿಚ್ಛಿಸುತ್ತೇನೆ. ಈ ದೇಶದಲ್ಲಿ ಜನರಿಗೆ ಉದ್ಯೋಗದ ಅವಶ್ಯಕತೆ ದಿನದಿನಕ್ಕೂ ಬಹಳ ಜಾಸ್ತಿಯಾಗುತ್ತಿದೆ. ವ್ಯವಸಾಯ ಒಂದರಲ್ಲೇ ಎಲ್ಲಾ ಜನರಿಗೂ ಈ ಕಸುಬನ್ನು ಒದಗಿಸುವುದು ಬಹಳ ಕಷ್ಟವಾಗುತ್ತಿದೆ. ಒಂದು ದೃಷ್ಟಿಯಿಂದ ಸರ್ಕಾರದವರು ಕೆಲಸವಿಲ್ಲದ ಗ್ರಾಮಾಂತರ ಯುವಕರಿಗೆ ಕೆಲಸಗಳನ್ನು ಕೊಡುತ್ತೇವೆ ಎನ್ನುವ ಒಂದು ಯೋಜನೆಯನ್ನು ಷುರು ಮಾಡಿದ್ದಾರೆ. ಕೇಂದ್ರಸರ್ಕಾರದವರು ವರ್ಷಕ್ಕೆ 50 ಕೋಟಿ ರೂಪಾಯಿಗಳನ್ನು ಕ್ರಾಷ್ ಪ್ರೋಗ್ರಾಂಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ನಿರುದ್ಯೋಗಿ ಯುವಕರಿಗೆ ಕೆರೆಗಳ ನಿರ್ಮಾಣದ ಕೆಲಸಮಾಡಿಸುವುದು, ಎರಡನೆಯದು, ಲ್ಯಾಂಡ್ ಆರ್ಮಿ ಪ್ರಾಜೆಕ್ಟ್ ಎಂದು ಷುರು ಮಾಡಿ, ಅವರಿಗೆ ಇದೇ ತರಹ ಕೆಲಸಗಳನ್ನು ಮಾಡಿಸುತ್ತಾ ಇದ್ದಾರೆ. ಆದರೆ ಸರ್ಕಾರದವರು ಕೆಲವು ಭಾಗಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದರಿಂದ ದೇಶದಲ್ಲಿ ಉಪಯುಕ್ತವಾದ ಕೆಲಸಕಾರ್ಯಗಳು ಆಗಿದ್ದರೂ ಕೂಡ, ಜೀವನದಲ್ಲಿ ಸ್ವತಂತ್ರವಾಗಿ ಕಾಲೂರಿ ಮುಂದೆ ಆತ ಕೆಲಸಮಾಡುವುದಕ್ಕೆ ಒಂದು ಮಾರ್ಗವನ್ನು ತೋರಿಸಿಕೊಡಬೇಕು. ಇಲ್ಲದಿದ್ದರೆ ಆತ ಈ ರೀತಿಯಾಗಿ ಪರಾವಲಂಬಿಯಾಗಿ ಎಷ್ಟು ದಿವಸಗಳವರೆಗೆ ಕೆಲಸಮಾಡಬೇಕೆಂಬುದು ಗೊತ್ತಿಲ್ಲ. ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ನಾನು ಕೈಗಾರಿಕೆಯ ಸಚಿವರಿಗೆ ಕೊಡುತ್ತೇನೆ. ಲ್ಯಾಂಡ್ ಆರ್ಮಿ ಮತ್ತು ಕ್ರಾಷ್ ಪ್ರೋಗ್ರಾಂಗಳಲ್ಲಿ ಕೆಲಸಮಾಡುವುದಕ್ಕೆ ಹುಡುಗರನ್ನು ಸೇರಿಸಿಕೊಂಡು ಅಲ್ಲಿ ನಡೆಯುತಕ್ಕ ಕೈಗಾರಿಕೆಗಳಲ್ಲಿ ಆರು ತಿಂಗಳೋ ಅಥವಾ ಒಂದು ವರ್ಷವೋ ತರಪೇತನ್ನು ಕೊಟ್ಟು ಅವರಿಂದ ಸ್ವತಂತ್ರವಾಗಿ ಕೈಗಾರಿಕೆಗಳನ್ನು ಮಾಡುವ ಹಾಗೆ ಹಣವನ್ನು ಒದಗಿಸಿಕೊಡಬೇಕು. ಮತ್ತು ದೊಡ್ಡದೊಡ್ಡ ಕೈಗಾರಿಕೆಗಳಲ್ಲಿ ಕೆಲಸ ಮಾಡಿಕೊಂಡು ಜೀವನ ಮಾಡುವ ವ್ಯವಸ್ಥೆಮಾಡಬೇಕು. ಒಟ್ಟಿನಲ್ಲಿ ನಿರುದ್ಯೋಗಿ ಯುವಕರಿಗೆ ಕೈಗಾರಿಕೆಗಳಲ್ಲಿ ತರಪೇತನ್ನು ಕೊಡಬೇಕು. ಇದರಿಂದ ದೇಶದ ಉತ್ಪತ್ತಿ ಹೆಚ್ಚಾಗುವುದಲ್ಲದೆ ಉತ್ಪತ್ತಿ ಬರತಕ್ಕಂಥ ಬಾಬುಗಳಿಗೆ ಇನ್ನೂ ಹೆಚ್ಚಿಗೆ ಹಣ ಖರ್ಚುಮಾಡುವುದಕ್ಕೆ ಪ್ರಯತ್ನಪಡಬೇಕಾಗುತ್ತದೆ. ಈ ರಾಜ್ಯದ 19 ಜಿಲ್ಲೆಗಳಲ್ಲಿ 11 ಜಿಲ್ಲೆಗಳು ಬಹಳವಾಗಿ ಹಿಂದುಳಿದಿವೆ. ಈ ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಯೂ ಒಂದು ಹಿಂದುಳಿದ ಜಿಲ್ಲೆ. ಸರ್ವೆ ಕೆಲಸ ಕಾರ್ಯಗಳನ್ನು ನಡೆಸಿ ಅವಶ್ಯಕವಾದಂಥ ಕಾರ್ಯಕ್ರಮಗಳನ್ನು ತ್ವರಿತವಾಗಿ ತೆಗೆದುಕೊಳ್ಳುವಂತೆ ಸರ್ಕಾರದವರು ವ್ಯವಸ್ಥೆಮಾಡಬೇಕು. ಎಷ್ಟು ಜಾಗ್ರತೆಯಾಗಿ ಕೈಗಾರಿಕೆಗಳಲ್ಲಿ ಹೆಚ್ಚು ಸಂಖ್ಯೆ ಯುವಕರಿಗೆ ಕೆಲಸಗಳು ಸಿಕ್ಕಿದರೆ, ಅಷ್ಟು ಜಾಗ್ರತೆಯಾಗಿ ಅವರು ಆರ್ಥಿಕವಾಗಿ ಅಭಿವೃದ್ಧಿಗೆ ಬಂದು ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಇನೊಂದು ವಿಷಯ. ಹಾಸನದಲ್ಲಿ ಒಂದು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಇದೆ. ಅಲ್ಲಿ ವ್ಯವಸಾಯಕ್ಕೆ ಬೇಕಾಗಿರತಕ್ಕ ಉಪಕರಣಗಳನ್ನು ತಯಾರುಮಾಡುತ್ತಿದ್ದರೂ ಅದು ಈಗಲೂ ಮೊದಲಿದ್ದ

ಹಾಗೆಯೇ ಇದೆ. ಅಲ್ಲಿ ಹೆಚ್ಚಿನ ಬೆಳವಣಿಗೆಯಾಗಿಲ್ಲ. ಈ ಕಾರ್ಖಾನೆಯಲ್ಲಿ ಉತ್ತಮವಾದಂಥ ಕೆಲಸಕಾರ್ಯಗಳು ನಡೆಯುತ್ತಿದ್ದರೂ ಹೆಚ್ಚು ಬಡಾವಣೆ ಮಾಡುವುದಕ್ಕೆ ಅಲ್ಲಿ ಅವಕಾಶ ವಿದ್ದರೂ ಅದನ್ನು ಇದುವರೆಗೆ ಯಾವರೀತಿಯಲ್ಲಿಯೂ ಬೆಳವಣಿಗೆಗೆ ತರದೆ ಹಾಗೆಯೇ ಇಟ್ಟಿದ್ದಾರೆ. ಹೆಚ್ಚು ಬಂಡವಾಳವನ್ನು ಹಾಕಿ ಆ ಕಾರ್ಖಾನೆಯಲ್ಲಿ ಇತರ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ನಡೆಯುತ್ತಾ ಇರತಕ್ಕ ರೀತಿಯಲ್ಲಿ ಇಲ್ಲಿಯೂ ದೊಡ್ಡ ದೊಡ್ಡ ಮೆಷಿನ್ ಭಾಗಗಳನ್ನು ಮಾಡುವುದಕ್ಕೂ ಮತ್ತು ಬಿಡಿ ಭಾಗಗಳನ್ನು ಮಾಡುವುದಕ್ಕೂ ಅವಕಾಶವನ್ನು ಕಲ್ಪಿಸಿಕೊಡಬೇಕು. ಹಂಗೇರಿ ಸರ್ಕಾರದ ಕೊಲಾಬೊರೇಷನ್ನಿನಲ್ಲಿ ಮೈಸೂರು ಸರ್ಕಾರದವರು ಹಾಸನ ಇಂಪ್ಲಿಮೆಂಟ್ ಫ್ಯಾಕ್ಟರಿಯಲ್ಲಿ ಸಣ್ಣ ಸಣ್ಣ ಟ್ರಾಕ್ಟರುಗಳ ಬಿಡಿ ಭಾಗಗಳನ್ನು ತಯಾರು ಮಾಡುವುದರಿಂದ ಬಹುಶಃ ಈ ಯೋಜನೆಯೇನಾದರೂ ಆಲೋಚನೆಯಲ್ಲಿದ್ದರೆ ಶೀಘ್ರವಾಗಿ ಇದನ್ನು ಸರ್ಕಾರದವರು ಕಾರ್ಯಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹಾಸನದಲ್ಲಿ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಇದೆ. ಸುಮಾರು 10–15 ವರ್ಷಗಳಿಂದ ಅಲ್ಲಿ ಯಾವ ಒಂದು ಕೈಗಾರಿಕೆಯೂ ಆಗುತ್ತಾ ಇಲ್ಲ. ಈ ಇಂಡಸ್ಟ್ರಿಯಲ್ ಎಸ್ಟೇಟಿಗೆ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರ ಹಾಕಿದರೂ ಎಸ್ಟೇಟ್ ಕೆಲಸ ಏಕೆ ಆಗಲಿಲ್ಲವೆಂದು ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ. ಆದ್ದರಿಂದ ಈಗಲಾದರೂ ಅದಷ್ಟು ಇಂಡಸ್ಟ್ರಿಯಲ್ ಎಸ್ಟೇಟ್ ಕೆಲಸಗಳನ್ನು ಜಾಗ್ರತೆಯಾಗಿ ಮುಗಿಸಿ ಹೆಚ್ಚು ಹೆಚ್ಚಾಗಿ ಕೈಗಾರಿಕೆಗಳು ಆಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ. ಮಾನ್ಯ ಶ್ರೀ ದೇವೇಗೌಡರು ಮಾತನಾಡುವಾಗ ಹಾಸನಕ್ಕೆ ಒಂದು ಸಕ್ಕರೆ ಕಾರ್ಖಾನೆ ಬೇಕೆಂದು ಹೇಳಿದರು. ಅದನ್ನು ಮಾಡುವುದು ಒಳ್ಳೆಯದು. 25 ಸಾವಿರ ಎಕರೆಯಲ್ಲಿ ಆಲೂಗಡ್ಡೆಯನ್ನು ಅಲ್ಲಿ ಬೆಳೆಯುವುದರಿಂದ ಅಲ್ಲಿ ಒಂದು ಚಿಪ್ಸ್ ಫ್ಯಾಕ್ಟರಿಯನ್ನು ಮಾಡಬೇಕು. ಮತ್ತು ಅಲ್ಲಿ ಒಂದು ಸ್ಟಾರ್ಚ್ ಫ್ಯಾಕ್ಟರಿಯನ್ನೂ ಸಹ ಮಾಡಬೇಕು. ಒಟ್ಟಿನಲ್ಲಿ ಹೇಳುವುದಾದರೆ ಸುಮಾರು ಸೇಕಡ 51ರಷ್ಟು ಕೈಗಾರಿಕೆಗಳು ನಮ್ಮ ದೇಶದಲ್ಲಿ ನಷ್ಟದಲ್ಲಿ ಕೆಲಸಮಾಡುತ್ತಿವೆಯೆಂದು ಹೇಳಬಹುದು. ಆದ್ದರಿಂದ ನಮ್ಮ ದೇಶದ ಕೈಗಾರಿಕೆಗಳು ನಿಜವಾಗಿ ಪ್ರಗತಿಪರವಾಗಬೇಕಾದರೆ, ದಕ್ಷರಾದ ಹಾಗೂ ನಿಸ್ಪೃಹರಾದ ಡೈರೆಕ್ಟರುಗಳನ್ನೂ ನೇಮಿಸಬೇಕು.

ಕೊನೆಯದಾಗಿ, ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri BAPU RAO ANANDA RAO** (Basavakalyan).—Madam Speakr, I support the demands under consideration and put forth two suggestions before the Hon'ble Minister.

It is declared that all the districts of Hyderabad Karnatak are industrially most backward. It is a fact and I request the Hon'ble Chief Minister that even though they are backward industrially there are ample raw-materials available in the area. The only thing is: we have to utilise the people and raw material resources at our command and put forth whatever industries that are possible and establish them in our area.

In this connection, I can safely suggest that we can establish another cement factary in Chitapur and also a glass factory in that area. We can have a large oil industriy. Fortunately at Bidar there are sugar factories and we can think of utilising the raw materials available in the area and also the bye-product of the sugar factory and manufacture whatever that is possible. In this connection I want to draw the attention of our Minister that the previous Government had granted licences to utilise the bye-product of the sugar factory and licence was given to one contractor. But that contractor has not utilised the bye-products and therefore such licences deserve to be cancelled forthwith because they have not proved fruitful.

(SRI BAPU RAO ANANDA RAO)

A license is given for manufacturing alcohol to one Sri Lalchand ro Narayan Chand. I do not know the exact name of the licensee and, therefore, cannot mention it. Since the raw material and by-products are not utilised in Bidar District, we are losing another source of revenue to our factory. This point may be enquired into and necessary steps may be taken to utilise them.

Cotton and groundnut are grown in our area and they can be utilised by agro-industries in our area. For that also necessary steps may be taken.

We can establish a textile industry also, particularly at Raichur.

Now coming to the Demand on Administration of Justice, I have some representations to make to the Hon'ble Minister for Law and Parliamentary Affairs. More funds should be given to such of the Courts as have been established very recently so that they may purchase books, furniture, etc. Recently a Court has been sanctioned for Basavakalyan. But I feel the Court is not provided with enough funds to purchase the necessary books, furniture, materials, etc. I am not making an appeal only in respect of Basavakalyan. Wherever new Courts are sanctined and established, *ad hoc* grants should be made available to them in the interests of justice. If the Courts are equipped with a good library, latest books and necessary conveniences, it will conduce to ths best administration of justice ; they can serve the people in a better way.

I have another suggestion to make to the Government. At present, the Industrial Co-operative Societies come under the purview of the Co-operative Department. The Co-operative Department, I feel, is looking more after the interests of agriculturists and consumers. As such, it cannot devote sufficient attention to the growth of industries. I, therefore, suggest that the Industrial Co-operatives should be brought under the Industries Department.

At present no sheds are attached to the Court buildings for the use of the ryots and others who come to Courts. Their lot is miserable during rainy season and severe summer. They will have to take shelter under trees. Therefore, I suggest that suitable sheds may be provided in the premises of Courts so that litigants and other public may use them.

I have one last request to make to the Hon'ble Law Minister. A Court has been recently estabished at Basavakalyan. But the Court jurisdiction of 25 villages are still not transferred to the Basavakalyan Court ; it is still under the jurisdiction of the Bhalki Court. I request the Hon'ble Minister kindy to take necessary action to transfer the Court jurisdiction of those 25 villages from Bhalki Court to Basavakalyan Court as the people of those villages are at present being put to lot of suffering and hardship.

With these few words, I thank the Chair and close my speech.

ಶ್ರೀ ಎಂ. ವಿ. ರುದ್ರಪ್ಪ (ಹೊಸದುರ್ಗ).—ಈ ದಿವಸ ನಮ್ಮ ಕೈಗಾರಿಕಾ ಮಂತ್ರಿಗಳೂ ಮತ್ತು ಕಾನೂನು ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ನಾನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಎರಡು ಸಲಹೆಗಳನ್ನು ಸರ್ಕಾರದವರ ಮುಂದಿಡುವುದಕ್ಕೆ ಇಚ್ಛಿಸುತ್ತೇನೆ.

ಈ ಕೈಗಾರಿಕೆಗಳ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಆದರೆ ಹೊಸದುರ್ಗ ದಲ್ಲಿ ಒಂದು ಸಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪಿಸಬೇಕೆಂದು ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ಹೊಸ ಕೈಗಾರಿಕೆಗೆ ಬೇಕಾಗತಕ್ಕ ರಾ ಮೆಟೀರಿಯಲ್ಸ್ ಅಲ್ಲಿ ಹೇರಳವಾಗಿ ಸಿಕ್ಕುತ್ತವೆ ಅಲ್ಲಿ ಮರಳು—ಸುಣ್ಣ—ನೀರು ಇವು ಯಥೇಷ್ಟವಾಗಿದೊರೆಯುತ್ತವೆ. ಇಲ್ಲಿಗೆ ಮೂರು ಮೈಲಿ ದೂರದಲ್ಲಿ ವೇದಾವತಿ ನದೀ ದಡದಲ್ಲಿ ಕಲ್ಲೋಡುಗ್ರಾಮ ಎಂಬುದು ಇದೆ. ಅಲ್ಲಿಗೆ 4—5 ಮೈಲಿದೂರದಲ್ಲಿ ಈ ರಾ ಮೆಟೀರಿಯಲ್ಸ್‌ಗಳೆಲ್ಲಾ ಹೇರಳವಾಗಿ ಸಿಕ್ಕುತ್ತವೆ. ಅಲ್ಲಿಗೆ ಆಗಲೇ ಸರ್ಕಾರದ ಪರವಾಗಿ ಜಿಯಲಾಜಿಕಲ್ ಡಿಪಾರ್ಟ್‌ಮೆಂಟಿನವರು ಮತ್ತು ಬೇರೆ ಇಲಾಖೆಗಳ ತಜ್ಞರವರೂ ಬಂದು ನೋಡಿ ಅಲ್ಲಿ ಈ ಒಂದು ಕಾರ್ಖಾನೆ ಸ್ಥಾಪನೆ ಮಾಡುವುದಕ್ಕೆ ಯೋಗ್ಯವಾಗಿದೆಯೆ ಎಂದು ಶಿಫಾರ್ಸ್ ಮಾಡಿದ್ದಾರೆ. ಅಲ್ಲಿ ದಿನ ಒಂದಕ್ಕೆ 200 ಟನ್ ಸಿಮೆಂಟನ್ನು ಮಾಡುವುದಕ್ಕೆ ಸಾಧ್ಯವಿದೆ 1200 ಜನರಿಗೆ ಡೈರೆಕ್ಟಾಗಿ ನೌಕರಿಗಳುಸಿಕುತ್ತವೆ. ಅಷ್ಟೇ ಅಲ್ಲದೆ ಮೂರು ಸಾವಿರ ನಾಲ್ಕು ಸಾವಿರ ಜನರಿಗೆ ಇಂಡೈರೆಕ್ಟಾಗಿ ಕೆಲಸ ಸಿಕ್ಕುತ್ತದೆ. ಆದ್ದರಿಂದ ಅಲ್ಲಿ ಸರ್ಕಾರದವರು ಒಂದು ಕಾರ್ಖಾನೆಯನ್ನು ಪ್ರೈವೇಟ್ ಸೆಕ್ಟಾರಿನಲ್ಲೋ ಅಥವಾ ಪಬ್ಲಿಕ್ ಸೆಕ್ಟಾರಿನಲ್ಲೋ ಸ್ಥಾಪನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸಿಮೆಂಟ್ ಫ್ಯಾಕ್ಟರಿಯನ್ನು ಖಂಡಿತವಾಗಿಯೂ ಮಾಡಿಕೊಡಬೇಕಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲೂ ಮತ್ತು ಕೈಗಾರಿಕಾ ಮಂತ್ರಿಗಳಲ್ಲೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಉಣ್ಣೆ ಕೈಗಾರಿಕೆ ವಿಚಾರ ಅಲ್ಲಿ ಎಲ್ಲಾ ಜನಾಂಗದವರು ಕುರಿ ಸಾಕುವುದನ್ನು ಒಂದು ಕಸುಬನ್ನಾಗಿ ನಡೆಸಿಕೊಂಡು ಬಂದಿದ್ದಾರೆ. ಆದರೆ ಮುಖ್ಯವಾಗಿ ಅದನ್ನೇ ತಮ್ಮ ಒಂದು ಜೀವನದ ಕಸಬುನ್ನಾಗಿ ಇಟ್ಟುಕೊಂಡಿರತಕ್ಕ ಕುರುಬರ ಜನಾಂಗಕ್ಕೆ ಸರ್ಕಾರದವರು ಬಹಳ ಹಿಂದಿನಿಂದಲೂ ಏನೂ ಅಂಥ ಹೆಚ್ಚಿನ ಸಹಾಯವನ್ನು ಮಾಡಿಲ್ಲ. ಆದರೆ ಅಲ್ಲಿ ಇತ್ತೀಚೆಗೆ ಕೆಲವರಿಗೆ ಮೆರೀನೋ ಕುರಿಗಳನ್ನು ಸಾಕಲು ಕೊಡಿಸಿದ್ದಾರೆ. ಇದಕ್ಕಾಗಿ ಅಲ್ಲಿ ಒಂದು ಕಾವಲನ್ನೂ ತೆರೆದು ಅಲ್ಲಿ ಮೆರೀನೋ ತಳಿಕುರಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆದರೆ ಸರ್ಕಾರದವರೀಗ ಅಲ್ಲಿ ತಯಾರಾಗತಕ್ಕ ಉಣ್ಣೆಗೆ ಒಂದು ಸಹಾಯ ನೀಡಬೇಕಾಗಿದೆ. ಅಲ್ಲಿ ಈಗ ಹಂಜಿ ಮಾಡುವುದು ನೂಲುವುದು, ನೇಯುವುದೂ ಈ ಕುಸುಬುಗಳು ಆ ಕುರುಬರ ಜನಾಂಗದವರಿಂದ ನಡೆಯುತ್ತಿವೆ. ಆದರೆ ಅವರು ಬಹಳ ಹಿಂದುಳಿದಿದ್ದಾರೆ. ಈ ಹೊತ್ತು ಕೂಡ ಯಾರಾದರೂ ಬುದ್ಧಿವಂತರ ಹತ್ತಿರ ಹೋಗಿ ಏನಾದರೂ ಒಂದು ವಿಷಯವನ್ನು ತಿಳಿಸಿ ಅವರನ್ನು ಅದರ ಬಗ್ಗೆ ನಂಬಬೇಕೆಂದು ಕೇಳಿದರೆ ನಾನೇನು ಅಷ್ಟು ಕುರುಬನೇ ಇದನ್ನು ನಂಬುವುದಕ್ಕೆ ಎಂದು ಹೇಳುತ್ತಿರುವುದು ಈಗಲೂ ರೂಢಿಯಲ್ಲಿದೆ. ಅಂದರೆ ಅವರು ಸಮಾಜದಲ್ಲಿ ಈ ದಿವಸ ಸಹಾ ಬಹಳ ಹಿಂದುಳಿದಿದ್ದಾರೆ ಎಂಬುದಕ್ಕೆ ಈ ಮಾತೇ ಸಾಕು. ಅದೇ ಒಂದು ದೊಡ್ಡ ಸಾಕ್ಷಿ. ಅವರಿಗೆ ಕುರಿ ಮೇಯಿಸುವುದು, ಕಂಬಳಿಗಳನ್ನು ಮಾಡುವುದು, ಅವುಗಳನ್ನು ಮಾರಾಟ ಮಾಡುವುದು ಇಷ್ಟೇ ಅವರ ಕಸಬು. ಅವರ ಅರ್ಥಿಕಾಭಿವೃದ್ಧಿಗೆ ಅನುಕೂಲವಾಗುವಂತೆ ಒಂದು ಊಲ್ ಬೋರ್ಡನ್ನು ಸ್ಥಾಪಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಮುಖ್ಯ ಮಂತ್ರಿಗಳೂ ಮತ್ತು ಕೈಗಾರಿಕಾ ಮಂತ್ರಿಗಳೂ ಇದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಿಂದ ಅಲ್ಲಿ ಸುಮಾರು 10 ಲಕ್ಷ ಜನರು ಜೀವನ ಮಾಡುವುದಕ್ಕೆ ಒಂದು ಅವಕಾಶವಾಗುತ್ತದೆ. ಇಂದು ಇಲ್ಲಿ ತಯಾರಾಗತಕ್ಕ ಕಂಬಳಿಗಳೇನಿವೆ ಅವು ಸಿಲೋನ್ ಮತ್ತು ಬರ್ಮಾ ಇತ್ಯಾದಿ ದೇಶಗಳಿಗೆ ಹೋಗುತ್ತಿವೆ. ಆ ಕಂಬಳಿಗಳು ಕಾಶ್ಮೀರಿ ಶಾಲನ್ನೂ ಮೀರಿಸತಕ್ಕ ಮಾದರಿಯಲ್ಲಿ ಇಂದು ತಯಾರಾಗುತ್ತಿವೆ. ಇವನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ರವಾನೆ ಮಾಡಿದರೆ ನಮಗೆ ವಿದೇಶೀವಿನಿಮಯ ಕೂಡ ಗಳಿಸುವುದಕ್ಕೆ ಸಾಧ್ಯವಿದೆ. ಈ ಬಾಬಿನಲ್ಲಿ ತಜ್ಞರನು ತಯಾರಿಸಲು ಇಲ್ಲಿ ಒಂದು ಊಲ್ ಇಂಡಸ್ಟ್ರಿಯಲ್ ಸ್ಕೂಲನ್ನು ತೆರೆಯಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಈ ವಿಷಯಗಳ ಬಗ್ಗೆ ತಿಳಿಸಬೇಕೆಂದು ಪ್ರಾರ್ಥಿಸಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಯವರೇ, ಈ ದಿವಸ ಲಾ ಮತ್ತು ಇಂಡಸ್ಟ್ರೀಸ್ ಮಿನಿಷ್ಟರುಗಳು ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ನಾನು ಕೆಲವು ಸಲಹೆಗಳನ್ನು ಸರ್ಕಾರದವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಈ ದಿವಸ ಹಳ್ಳಿಗಳ ಕಡೆ ಕೋರ್ಟಿಲ್ಲದೆ ಜನರಿಗೆ ಬಹಳ ತೊಂದರೆಯಾಗಿದೆ. ಅವರು ದೊಡ್ಡ ದೊಡ್ಡ ಪಟ್ಟಣಗಳಾದ ಬೆಂಗಳೂರಂಥ ನಗರಗಳಿಗೆ ಬಂದು ಇಲ್ಲಿ ಒಂದು, ಎರಡು ದಿವಗಳು ತಂಗ ಬೇಕೆಂದರೆ ಅವರಿಗೆ ಬಹಳ ಕಷ್ಟವಿದೆ, ತೊಂದರೆ ಇದೆ. ಅವರಿಂದ ಸಾಧ್ಯವಿಲ್ಲ. ಈ ಅನಾನುಕೂಲ ವನ್ನು ತಪ್ಪಿಸುವುದಕ್ಕೆ ಜಿಲ್ಲಾ ಮಳೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕೋರ್ಟುಗಳನ್ನು ಸ್ಥಾಪಿಸ ಬೇಕೆಂದು ಕೇಳಿಕೊಳ್ಳುತ್ತೇನೆ, ಕೆಲವು ತಾಲ್ಲೂಕುಗಳಲ್ಲಿ ಈ ಹಿಂದೆಯೇ ಕೋರ್ಟುಗಳು ಮಂಜೂ ರಾಗಿದ್ದರೂ ಅವುಗಳನ್ನು ಇನ್ನೂ ಸ್ಥಾಪನೆ ಮಾಡಿಲ್ಲ. ಉದಾಹರಣೆಗೆ ಮಾಗಡಿಯಲ್ಲಿ ಒಂದು ಕೋರ್ಟಿನ ಸ್ಥಾಪನೆಗೆ ಅರ್ಡರಾಗಿ 2 ವರ್ಷಗಳಾದವು. ಆದರೆ ಈ ತಹಲ್‌ವರೆಗೆ ಷುರುಮಾಡಿಲ್ಲ. ಅಲ್ಲಿಗೆ ಈ ಹಿಂದೆ ಸಂಬಂಧಪಟ್ಟವರೆಲ್ಲಾ ಬಂದು ಸ್ಥಳ ಪರಿಶೀಲನೆ ನಡೆಸಿ ಅಲ್ಲಿ ಮೊದಲು ಕೋರ್ಟನ್ನು ಸ್ಥಾಪಿಸಲು ಒಂದು ಕಟ್ಟಡವನ್ನು ಕೊಡಬೇಕೆಂದು ಅಲ್ಲಿನ ಮುನಿಸಿಪಾಲಿಟಿಯವರನ್ನೂ ಮತ್ತು ತಾಲ್ಲೂಕ್ ಬೋರ್ಡಿನವರನ್ನೂ ಕೇಳಿದ್ದರು. ಅವರು ಆ ಕಟ್ಟಡವನ್ನು ಕೊಡುವುದಕ್ಕೆ ಒಪ್ಪಿದ್ದರು. ಆದನ್ನಿನ್ನೂ ಪ್ರಾರಂಭವಾಡಿಲ್ಲ. ಜನಗಳಿಗೆ ಬಹಳ ತೊಂದರೆಯಾಗಿದೆ, ಇದರಿಂದ ಬಡವರಿಗೆ ತುಂಬಾ ಅನ್ಯಾಯವಾಗುತ್ತಿದೆ—ಅವರಿಗೆ ನ್ಯಾಯ ದೊರೆಯದಂತಾಗಿದೆ. ಆದುದರಿಂದ ಅಲ್ಲಿಗೆ ಕೂಡಲೇ ಒಂದು ಕೋರ್ಟು ಸ್ಥಾಪಿತವಾಗಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

7-00 P.M.

ಇನ್ನು ಕೈಗಾರಿಕೆಗಳ ವಿಷಯ, ಕೈಗಾರಿಕೆಗಳ ವಿಕೇಂದ್ರೀಕರಣವಾಗಬೇಕು, ಈಗ ಕೈಗಾರಿಕಗಳೆಲ್ಲಾ ಒಂದೇ ಕಡೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿವೆ. ಆದುದರಿಂದ ಪಟ್ಟಣಗಳಲ್ಲಿ ಜನರ ಒತ್ತಡ ಜಾಸ್ತಿಯಾಗಿ ಜನರು ಹೆಚ್ಚಾಗಿ ಬಂದು ಪಟ್ಟಣಗಳಲ್ಲಿ ನೆಲಸುತ್ತಿದ್ದಾರೆ, ಅಲ್ಲಿ ಸಾಕಷ್ಟು ಸ್ಥಳ ದೊರೆಯದೆ ತೊಂದರೆಯಾಗುತ್ತಿದೆ. ಕಾರ್ಖಾನೆಗಳಲ್ಲಿ ಕೆಲಸ ದೊರೆತರೆ ದಿನಕ್ಕೆ ಎರಡುಮೂರು ರೂಪಾಯಿ ಕೂಲಿ ದೊರೆಯುತ್ತದೆ. ಅದು ಏತಕ್ಕೂ ಸಾಲುವುದಿಲ್ಲ, ನೀರಿನ ಸೌಕರ್ಯ, ಮನೆ ಸೌಕರ್ಯ ದೊರೆಯುವುದಿಲ್ಲ, ಅನೇಕರು ಸಣ್ಣ ಗುಡಿಸಲುಗಳಿಲ್ಲಿ ವಾಸಮಾಡು ತ್ತಿದ್ದಾರೆ. ಇದನ್ನು ತಪ್ಪಿಸಲು ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿ ಸಿದರೆ ಅಲ್ಲಿನ ಜನರಿಗೆ ಅಲ್ಲೇ ಕೆಲಸ ದೊರೆತು ಅವರು ಅಲ್ಲೇ ಉಳಿಯಲು ಅವಕಾಶವಾಗುವುದಲ್ಲದೆ ಹೆಚ್ಚಿನ ಸೌಲಭ್ಯ ದೊರೆತು ಜನರು ಉತ್ತಮವಾದ ಜೀವನ ನಡೆಸಲು ಅವಕಾಶವಾಗುವುದು. ಈಗ ಕೇಂದ್ರೀಕೃತವಾಗಿರುವುದನ್ನು ತಪ್ಪಿಸಿ ವಿಕೇಂದ್ರೀಕರಣ ಮಾಡಿದರೆ ಅನುಕೂಲವಾಗುವುದು, ದೇಶಕ್ಕೆ ವಿಪತ್ತು ಬಂದಾಗ ಕಾರ್ಖಾನೆಗಳು ಕೇಂದ್ರೀಕೃತವಾಗಿದ್ದರೆ ಅವು ನಷ್ಟಕ್ಕೆ ಈಡಾಗಿ ದೇಶಕ್ಕೆ ತೊಂದರೆಯಾಗುವುದು. ಕೈಗಾರಿಕೆಗಳನ್ನು ವಿಕೇಂದ್ರೀಕರಣ ಮಾಡಿದರೆ ಹೆಚ್ಚು ಜನಗಳಿಗೆ ಅನುಕೂಲವಾಗುವುದಲ್ಲದೆ ದೇಶಕ್ಕೆ ಆಗುವ ಹಾನಿ ಕೂಡ ಕಡಿಮೆಯಾಗುವುದು. ಆದಷ್ಟು ಹಿಂದುಳಿದ ಪ್ರದೇಶಗಳಲ್ಲಿ ಎಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದೆಯೋ ಅಲ್ಲಿ ಸ್ಥಾಪಿಸು ವುದರಿಂದ ಜನತೆಗೆ ಹೆಚ್ಚಿನ ಪ್ರಯೋಜನವಾಗುತ್ತದೆ.

ರೇಷ್ಮೆ ಕೈಗಾರಿಕೆ. ರೇಷ್ಮೆ ಬೆಳೆಯುವವರ ಮತ್ತು ನೇಕಾರರ ಸ್ಥಿತಿ ಚಿಂತಾಜನಕವಾಗಿದೆ. ಕಾರಣ ಹೊರದೇಶಗಳಲ್ಲಿ ನಮ್ಮ ರೇಷ್ಮೆಗೆ ಹೆಚ್ಚು ಬೇಡಿಕೆ ಇದ್ದುದು ಕಡಮೆ ಆಗಿದೆ. ನಮ್ಮ ದೇಶದ ಕೆಲವರು ಹೊರದೇಶಕ್ಕೆ ಮಾಲುಗಳನ್ನು ಕಳಿಸುವಾಗ ಒಳ್ಳೆಯ ಮಾಲನ್ನು ಕಳಿಸದೆ ಮೋಸ ಮಾಡಿದ್ದಾರೆ. ಇದರಿಂದ ಹೊರಗಿನವರಿಗೆ ನಮ್ಮ ವಿಷಯದಲ್ಲಿ ಅಪನಂಬಿಕೆ ಬಂದು ನಮ್ಮ ಮಾಲನ್ನು ಕೊಳ್ಳುವುದನ್ನು ಕಡಮೆ ಮಾಡಿದ್ದಾರೆ. ಇದಕ್ಕಾಗಿ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ನಮ್ಮಲ್ಲಿ ಯಾವ ಮಾಲು ಸರಿಯಾಗಿದೆಯೋ ಎಂಬುದನ್ನು ನೋಡಿ ಒಳ್ಳೆಯ ಸರಕನ್ನು ಹೊರದೇಶಗಳಿಗೆ ಕಳಿಸಲು ಏರ್ಪಾಡು ಮಾಡಬೇಕು. ಹಾಗೆ ಮಾಡಿ ನಮ್ಮ ಮಾಲುಗಳಿಗೆ ವಿದೇಶಗಳಲ್ಲಿ ಸರಿಯಾದ ಮಾರ್ಕೆಟ್ ಸಿಕ್ಕುವಂತೆ ಮಾಡಿದರೆ ಈಗ ನಮ್ಮಲ್ಲಿರುವ ಅಶಾಂತಿ ತಪ್ಪುತ್ತದೆ. ಇದಕ್ಕೆ ಗಮನ ಕೊಡದಿದ್ದರೆ. ನಮ್ಮಲ್ಲಿ ಮಗ್ಗಗಳಲ್ಲಿ ನಿರತರಾಗಿರುವವರು ನಿತ್ಯಜೀವನ ನಡೆಸಲು ಸಾಧ್ಯವಾಗದೆ ರೇಷ್ಮೆಯ ಕಸಬು ಸರಿಯಾದ ಉತ್ತೇಜನವಿಲ್ಲದೆ ನಶಿಸಿಹೋಗಲು ಅವಕಾಶವಾಗುವುದು. ಅನೇಕರಿಗೆ ರೇಷ್ಮೆ ಗೃಹ ಕೈಗಾರಿಕೆ, ಗೃಹ ಕೈಗಾರಿಕೆಯಾಗಿದೆ. ರೇಷ್ಮೆ ಬಟ್ಟೆ ನೇಯುವವರು ಸಾವಿರಾರು ಜನರಿ ದ್ದಾರೆ. ಮಾಗಡಿಯಲ್ಲಿ ನೂರಾರು ಜನರು ಈ ಕಸಬಿನಿಂದ ಜೀವನ ಮಾಡುತ್ತಿದ್ದಾರೆ. ಅವರಿಗೆ ಇಂದು ತೊಂದರೆಯಾಗಿ ಕಣ್ಣೀರಿಡುತ್ತಿದ್ದಾರೆ. ಇಂದು ಮಾಲು ಹೊರಕ್ಕೆ ಹೋಗುತ್ತಿಲ್ಲ. ರೇಷ್ಮೆ

ತಂದು ನೇಯುವವರಿಗೆ ಸರಿಯಾದ ಬೆಲೆ ಸಿಕ್ಕದೆ ನಷ್ಟವಾಗುತ್ತಿದೆ. ಇದರಿಂದ ಅವರು ಬದುಕುವುದಕ್ಕೆ ಕಷ್ಟವಾಗಿದೆ. ಅವರಿಗೆ ಬೇರೆ ಕೆಲಸಮಾಡಲು ಶಕ್ತಿ ಇಲ್ಲ. ಆದುದರಿಂದ ಈ ಪರಿಸ್ಥಿತಿಯನ್ನು ಸುಧಾರಿಸಲು ಕೈಗಾರಿಕಾ ಮಂತ್ರಿಗಳು ಒಂದು ತಜ್ಞರ ಸಮಿತಿ ಮಾಡಿ ಸುಧಾರಣೆಯೇನು ಮಾಡಬೇಕೆಂದು ಸಲಹೆ ಪಡೆದು ಬೇಕಾದ ಸೌಲಭ್ಯ ಕಲ್ಪಿಸಿಕೊಡಬೇಕು ಎಂಬುದನ್ನು ಈ ಸಂದರ್ಭದಲ್ಲಿ ಮಂತ್ರಿಗಳ ಗಮನಕ್ಕೆ ತರುತ್ತೇನೆ.

ನಾನು ಅನೇಕ ವಿಷಯಗಳನ್ನು ಹೇಳಬೇಕಾಗಿತ್ತು, ಕಾಲಾವಕಾಶವಿಲ್ಲದೆ ಕಷ್ಟವಾಗಿದೆ. ಆದುದರಿಂದ ಇನ್ನು ಮುಂದಾದರೂ ಕಾಲು ಗಂಟೆಯಾದರೂ ಅವಕಾಶ ಕೊಡಬೇಕು ಎಂದು ಕೇಳಿಕೊಂಡು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸುತ್ತೇನೆ.

† ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ).—ಸಭಾಪತಿಯವರೇ, ಸಭೆಯ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸಬಿಚ್ಛಿಸುತ್ತೇನೆ. ಬಹಳ ಮುಖ್ಯವಾಗಿ ಕೈಗಾರಿಕಾ ಖಾತೆಯನ್ನು ವಹಿಸಿರುವ ಮಾನ್ಯ ಕೃಷ್ಣರವರು ಬಹಳ ದಕ್ಷತೆಯಿಂದ ಇಲಾಖೆಯ ಆಗುಹೋಗುಗಳನ್ನು ಸರಿಪಡಿಸಿ ದೇಶದಲ್ಲಿ ಕೈಗಾರಿಕೆಗಳು ಉತ್ತಮವಾಗಿ ನಡೆಯುವಂತೆ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸುವ ದಾರಿಯಲ್ಲಿ ಪ್ರಯತ್ನ ಪಡುವರು ಎಂದು ಆಶಿಸುತ್ತಿದ್ದೇನೆ. ಪ್ರಾಮುಖ್ಯವಾದ ಒಂದು ಕಾರ್ಖಾನೆ ಎಂದರೆ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ. ಅಲ್ಲಿ ನಡೆಯುತ್ತಿರುವ ವ್ಯವಹಾರಗಳ ಬಗ್ಗೆ ದೇಶದ ಜನರೆಲ್ಲಾ ಕಳವಳಗೊಂಡಿದ್ದಾರೆ, ಅದರ ಬಗ್ಗೆ ಇದ್ದ ಆಸೆ ನಿರಾಸೆಯಾಗಿದೆ. ಅನೇಕ ಲೋಪದೋಷಗಳಿಗೆ ಎಡೆಕೊಟ್ಟಿರುವ ಜನರ ಟೀಕೆಟಿಪ್ಪಣಿಗಳಿಗೊಳಗಾಗಿರುವ ಈ ಕಾರ್ಖಾನೆಯನ್ನು ಸರಿಪಡಿಸುವ ದಾರಿಯಲ್ಲಿ ಮಾನ್ಯ ಮಂತ್ರಿಗಳು ಪ್ರಯತ್ನಪಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಕೆಲವು ಕಡೆ ನೆಪಕ್ಕೆ ಮಾತ್ರ ಏಜೆನ್ಸಿ ಬೋರ್ಡನ್ನು ತಗಲುಹಾಕಿದ್ದಾರೆ, ವ್ಯವಹಾರಗಳನ್ನೆಲ್ಲಾ ಕಾರ್ಖಾನೆಯ ಮತಿಯಿಂದ ನಡಿಸುವವರು, ಸೇಲ್ಸ್ ಆಫೀಸರಿರುವರು, ಪ್ರತಿಯೊಂದನ್ನೂ ಅವರು ಮಾರುವರು. ಆದರೆ ನೂರಕ್ಕೆ ಎರಡು ರೂಪಾಯಿ ಮಾತ್ರ ಪ್ರತಿಯೊಂದು ವ್ಯವಹಾರದಲ್ಲೂ, ವ್ಯಾಪಾರದಲ್ಲೂ ಕಂಪೆನಿ ಲೆಕ್ಕಕ್ಕೆ ಜಮಾ ಆಗುವುದು. ಇಂಥ ಸಂದರ್ಭಗಳಲ್ಲಿ ಕಂಪೆನಿಗಳಲ್ಲಿದ್ದ ಕೋಟ್ಯಾಂತರ ರೂಪಾಯಿ ಕಂಪೆನಿಯಿಂದ ಏಜೆಂಟರಿಗೆ ಸಂದಾಯವಾಗಿದೆ. ಇದು ರಾಜ್ಯಕ್ಕೆ ಸಂದಾಯವಾಗಬೇಕಾಗಿರುವ ಹಣ ಎಂದು ಹೇಳಿದರೆ ತಪ್ಪಲ್ಲ. ಇಂಥ ವ್ಯವಹಾರಗಳು ಹಿಂದೆ ಬಹಳಷ್ಟು ನಡೆದು ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ. ಇದನ್ನು ಸರಿಪಡಿಸುವ ಜವಾಬ್ದಾರಿ ಸರಕಾರದ ಮೇಲಿದೆ. ಮಾನ್ಯ ಮಂತ್ರಿಗಳೇ ಈ ಕಂಪೆನಿಗೆ ಛೇರ್ಮನ್ ಆಗುವುದು ಹಿಂದಿನ ಸಂಪ್ರದಾಯ. ಅದರ ಬದಲಾವಣೆಯಾಗಿದೆ. ಈಗಲಾದರೂ ಅದನ್ನ ಬದಲಾಯಿಸಿ ಅಲ್ಲಿರುವವರಿಗೆ ಬೇರೆ ಕೆಲಸ ಕೊಟ್ಟು ಅಲ್ಲಿ ನಡೆಯುವ ಅನ್ಯಾಯ ಅಕ್ರಮಗಳನ್ನು ಅದಷ್ಟು ಬೇಗ ಕಡಮೆ ಮಾಡಬೇಕು. ಮಂತ್ರಿಗಳೇ ಆ ಕಂಪೆನಿಗಳಿಗೆ ಛೇರ್ಮನ್ ಆಗುವುದು ಉತ್ತಮವೆಂದು ಭಾವಿಸುತ್ತೇನೆ.

ಇನ್ನು ನಮ್ಮ ಜಿಲ್ಲೆಯವರೆಗೆ ಪ್ರಸ್ತಾಪಿಸುತ್ತೇನೆ. ನಮ್ಮಲ್ಲಿರುವ ರಾ ಮೆಟೀರಿಯಲ್ಸ್ ತಾವೇಕೆ ಉಪಯೋಗಿಸಬಾರದು ? ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಕಬ್ಬಿಣದ ಅದುರು ಮುಂತಾದ ರಾ ಮೆಟೀರಿಯಲ್ಸ್ ಬೇಕಾದಷ್ಟಿವೆ. ಅವುಗಳನ್ನು ಉಪಯೋಗಮಾಡಿ ಕಾರ್ಮಿಕರು ಮುಂತಾದವರಿಗೆ ಕೆಲಸ ಕೊಡುವ ದೃಷ್ಟಿಯಿಂದ ಸಂಬಂಧಪಟ್ಟ ಇಲಾಖೆಯವರು ಅಲ್ಲಿ ಕಾರ್ಖಾನೆಗಳನ್ನು ತೆರೆದು ದೇಶದ ಸಂಪತ್ತನ್ನು ಹೆಚ್ಚಿಸುವುದಲ್ಲದೆ ಕಾರ್ಮಿಕರಿಗೆ ಹೆಚ್ಚಿನ ಕೆಲಸ ಒದಗಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಬೇಕಾದಷ್ಟು ಲೋಪದೋಷಗಳಿವೆ. ಶ್ರೀಮಾನ್ ಕೃಷ್ಣರವರು ದಕ್ಷತೆಯಿಂದ ಕೆಲಸಮಾಡಿ ಅದಷ್ಟು ಬೇಗ ಈ ಇಲಾಖೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿ ದೇಶದ ಉತ್ಪತ್ತಿಯನ್ನು ಹೆಚ್ಚಿಸಲು ಪ್ರಯತ್ನಪಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಕೋರ್ಟುಗಳು ಏನಿವೆ ಅವುಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ.

ಪ್ರತಿಯೊಂದು ತಾಲ್ಲೂಕಿಗೂ ಒಂದೊಂದು ಕೋರ್ಟನ್ನು ಕೊಡದೇ ಇದ್ದರೂ ಕೂಡ ಕೋರ್ಟುಗಳು ಇರತಕ್ಕಂಥಾಕಡೆ ಜನಗಳಿಗೆ ಆಗ ಶಕ್ಯ ತೊಂದರೆಯನ್ನು ಅರಿತು ಅವರಿಗೆ ಕುಳಿತುಕೊಳ್ಳಲು ಸ್ಥಳ ಮತ್ತು ಕೋರ್ಟಿಗೆ ಬರುವವರಿಗೆ ನೆಮ್ಮದಿಯಿಂದ ಇದ್ದು ಹೋಗತಕ್ಕಂಥ ಒಂದು ಸ್ಥಳದ ವ್ಯವಸ್ಥೆ ಮಾಡುವುದು ಸೂಕ್ತವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲೆಲ್ಲಿ ಸಾಧ್ಯವಾಗುತ್ತದೋ ಅಂಥಾ ಕಡೆಗಳಲ್ಲಿ ರೇಷ್ಮೆ ಫಾರಂಗಳನ್ನು ಮಾಡಿ ರೈತರು ಅವರ ಉತ್ಪಾದನೆ ಹೆಚ್ಚಿಸಿಕೊಳ್ಳುವುದಕ್ಕೆ ಸರಕಾರ ಸಹಕಾರ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀ ಬಿ. ಬೈರಪ್ಪಾಜಿ)

ಇನ್ನು ಖಾದಿ ಬೋರ್ಡ್ ಬಗ್ಗೆ ಹೇಳುವುದಾದರೆ ಖಾದಿಬೋರ್ಡ್‌ನ್ನು ರದ್ದುಪಡಿಸಿ ಅಲ್ಲಿರತಕ್ಕಂಥ ಅವ್ಯವಸ್ಥೆ ಅನ್ಯಾಯಗಳನ್ನು ಸರಿಪಡಿಸತಕ್ಕಂಥ ಒಂದು ಕಾರ್ಯವನ್ನು ಕೈಗೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್ (ಸಿರ್ಸಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನು ಈಗ 24 ನೇ ಭಾಷಣಗಾರನಾಗಿ ಮಾತನಾಡುತ್ತಿದ್ದೇನೆ. ಈ ದಿವಸ ಸರ್ಕಾರದವರು ಮಂಡಿಸಿರತಕ್ಕಂಥ ಬೇಡಿಕೆಗಳಲ್ಲಿ ಮುಖ್ಯವಾಗಿ ಕೈಗಾರಿಕೆಯ ಕ್ಷೇತ್ರದಲ್ಲಿ ಸಮಾಜವಾದ ನೀತಿಯನ್ನು ನಮ್ಮ ಸರ್ಕಾರ ಈ ಸಮಯದಲ್ಲಿ ಪ್ರದರ್ಶನ ಮಾಡಬೇಕಾಗಿ ಬಂದಿದೆ. ಇದನ್ನು ರಾಜ್ಯಾದ್ಯಂತ ಜಾರಿಗೆ ತರತಕ್ಕ ಮಾರ್ಗದಲ್ಲಿ ಅಡ್ಡಬರತಕ್ಕ ಅಡಚಣೆಗಳನ್ನು ನಿವಾರಣೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳಾಗಿರತಕ್ಕ ಶ್ರೀಮಾನ್ ಕೃಷ್ಣ ಅವರು ಪ್ರಯತ್ನಪಟ್ಟು ಬಡವರಿಗೆ, ಕೂಲಿಗಾರರಿಗೆ, ಗ್ರಾಮಾಂತರ ಜನಕ್ಕೆ ಹೆಚ್ಚು ಹೆಚ್ಚು ಪ್ರಯೋಜನವನ್ನು ಮಾಡಿಕೊಡಬೇಕು. ಇದಕ್ಕೂ ಮಿಗಿಲಾಗಿ ನಾನು ಚರ್ಮದ ಕೈಗಾರಿಕೆ ವಿಷಯವಾಗಿ ಎರಡು ಮಾತುಗಳನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಈ ಕೈಗಾರಿಕೆ ಇಡೀ ರಾಜ್ಯದಲ್ಲಿ ಅತ್ಯಂತ ಶ್ರೇಷ್ಠವಾದದ್ದು, ಹೆಚ್ಚು ಉತ್ಪನ್ನ ಕೊಡತಕ್ಕಂಥಾದ್ದು ಮತ್ತು ವಿದೇಶಿ ವಿನಿಯಮಯವನ್ನು ಕೊಡತಕ್ಕಂಥ ಕೈಗಾರಿಕೆ. ಅಲ್ಲದೆ ಈ ರಾಜ್ಯದಲ್ಲಿ ಬಡವರು, ಕೂಲಿಗಾರರು ಮತ್ತು ನಿರ್ಗತಿಕ ನಿಮ್ನವರ್ಗ ಮತ್ತು ನಿಮ್ನ ಪಂಗಡದ ಜನಕ್ಕೆ ಅನುಕೂಲ ಕಲ್ಪಿಸತಕ್ಕ ಈ ಕೈಗಾರಿಕೆಯನ್ನು ಬೆಳೆಸಲು ಇರತಕ್ಕ ಅಡ್ಡಿ ಅಡಚಣೆಗಳನ್ನು ಮಾನ್ಯ ಮಂತ್ರಿಗಳು ಪುನರ್ವಿಮರ್ಶೆ ಮಾಡಿ ಇದಕ್ಕೆ ಒಂದು ಲೆದರ್ ಇಂಡಸ್ಟ್ರಿಸ್ ಬೋರ್ಡ್ ಅಂತ ಮಾಡಿ ಜನತೆಗೆ ಹೆಚ್ಚು ಪ್ರಯೋಜನವಾಗುವ ರೀತಿಯಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಈಗ ನಮ್ಮಲ್ಲಿ 20—25 ಪಬ್ಲಿಕ್ ಅಂಡರ್ ಟೇಕಿಂಗ್ಸ್ ಏನು ಇವೆ, ಅವುಗಳಲ್ಲಿ ಸ್ಕಿಲ್ಡ್ ಲೇಬರ್ಸ್ ಮತ್ತು ನಾನ್ ಸ್ಕಿಲ್ಡ್ ಲೇಬರ್ಸ್‌ನಲ್ಲಿ ಬಡವರಿಗೆ ಮತ್ತು ಕೂಲಿಗಾರರಿಗೆ ಮತ್ತು ನಿರ್ಗತಿಕರಾದ ನಿಮ್ನವರ್ಗ ಮತ್ತು ನಿಮ್ನ ಪಂಗಡದವರಿಗೆ ಕೆಲಸಗಳನ್ನು ಪಡೆಯಲು ಅವಕಾಶವಿಲ್ಲದಂತಾಗಿದೆ. ಆದುದರಿಂದ ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನ್ನು ಒಂದು ಹತೋಟಿಯಲ್ಲಿಟ್ಟುಕೊಂಡು ಅದಕ್ಕೆ ಒಂದು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ನ್ನು ಮಾಡಿ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಭದ್ರಾವತಿ ಉಕ್ಕಿನ ಕಾರ್ಖಾನೆಯ ಆಡಳಿತದಲ್ಲೂ ಅನೇಕ ಲೋಪದೋಷಗಳು ಉಂಟು. ಅದರಲ್ಲಿ ಕೂಡ ಒಂದು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಏನು ಇದೆಯೋ ಅದನ್ನು ಬದಲಾಯಿಸಿ ಡೈರೆಕ್ಟ್ ರೆಕ್ರೂಟ್‌ಮೆಂಟ್ ಪದ್ಧತಿಯನ್ನು ಜಾರಿಗೆ ತಂದರೆ ಅದರಿಂದ ಅನೇಕ ಬಡವರಿಗೆ, ಕೂಲಿಗಾರರಿಗೆ, ನಿಮ್ನವರ್ಗ ಮತ್ತು ನಿಮ್ನ ಪಂಗಡದವರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮತ್ತು ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಏನು ಇವೆಯೋ ಅವುಗಳಲ್ಲೂ ನಿಮ್ನವರ್ಗದ ಮತ್ತು ನಿಮ್ನ ಪಂಗಡದವರಿಗೆ ಶೇಕಡ ಒಂದರಷ್ಟಾದರೂ ಈ ಕೈಗಾರಿಕೆಯಲ್ಲಿ ಮುಂದಕ್ಕೆ ಬರುವಂತೆ ಉತ್ತೇಜನ ಕೊಡಬೇಕು. ಅದಕ್ಕಾಗಿ ಅವರು ಒಂದು ಉದ್ಯಮವನ್ನು ಸ್ಥಾಪನೆ ಮಾಡಿಕೊಳ್ಳುವುದಕ್ಕೆ ಮುಂದೆ ಬಂದರೆ ಸರ್ಕಾರದವರು ಅವರಿಗೆ 50 ಪರ್ಸೆಂಟು ಸಬ್ಸಿಡಿ ಮತ್ತು 50 ಪರ್ಸೆಂಟು ಪರ್ಸನಲ್ ಸೆಕ್ಯೂರಿಟಿ ಕೊಟ್ಟು ಉತ್ತೇಜನ ಕೊಡಬೇಕು. ಹಾಗೆ ಅವಕಾಶ ಮಾಡಿಕೊಟ್ಟರೆ ಮಾತ್ರ ಈ ಕೈಗಾರಿಕಾ ಕ್ಷೇತ್ರದಲ್ಲಿ ಅವರು ಪ್ರಯೋಜನ ಹೊಂದುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಆ ರೀತಿ ಮಾಡಬೇಕು ಎಂದು ಹೇಳುತ್ತೇನೆ.

ಹಿಂದೆ ನಿಮ್ನವರ್ಗ ಮತ್ತು ನಿಮ್ನಪಂಗಡದವರಿಗೆ ಒಂದು ಮೊಬೈಲ್ ಸ್ಕೀಮ್ ಇತ್ತು. ಹೋಟೇಲುಗಳನ್ನು ನಡೆಸುವುದಕ್ಕೆ, ಕಂಟ್ರಾಕ್ಟುಗಳನ್ನು ಮಾಡುವುದಕ್ಕೆ ಒಂದು ಯೋಜನೆ ಇತ್ತು. ಅವೆಲ್ಲಾ ಈಗ ರದ್ದಾಗಿವೆ. ದಯವಿಟ್ಟು ನಮ್ಮ ಕೈಗಾರಿಕಾ ಮಂತ್ರಿಗಳು ನಿಜವಾದ ಸೋಷಲಿಸ್ಟ್ ಆಗಿರುವುದರಿಂದ ಈ ಯೋಜನೆಗೆ ಗಮನ ಕೊಟ್ಟು ಬಡವರ ಉದ್ಧಾರಕ್ಕಾಗಿ ಇರತಕ್ಕಂಥ ಈ ಯೋಜನೆಗಳನ್ನು ಪರಿವರ್ತನೆ ಆಗತಕ್ಕಂಥ ರೀತಿಯಲ್ಲಿ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ. ಇಷ್ಟು ಹೇಳಿ ಅಧ್ಯಕ್ಷಿಣಿಯವರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಹೊತ್ತಿನ ದಿವಸ ಈ ಬೇಡಿಕೆಯ ಮೇಲೆ ಮಾತನಾಡಬೇಕಾದರೆ 2—3 ಜನ ಮಂತ್ರಿಗಳ ಬಾಬನ್ನು ಸೇರಿಸಿ ''ಸಬ್‌ಲೋಗ್-ವನ್'' ಅಂತ ಮಾಡಿದ್ದೀರಿ. ಇದರ ಬಗ್ಗೆ ನಾನು ಕೆಲವು ವಿಷಯಗಳನ್ನು ಹೇಳಬೇಕಾಗಿದೆ.

ಮೊಟ್ಟಮೊದಲನೆಯದಾಗಿ ಕೆಲವು ಮಿತ್ರರು ಹೇಳಿದಂತೆ ವಿರೋಧಪಕ್ಷದ ನಾಯಕರಿಗೆ ಸಕಲಸೌಲಭ್ಯಗಳನ್ನು ಕೊಡಬೇಕೆಂದು ಒತ್ತಾಯ ಮಾಡಿದ್ದಾರೆ. ಈ ಪ್ರಜಾಪ್ರಭುತ್ವದಲ್ಲಿ ಈ ಸರ್ಕಾರಕ್ಕೆ ನಂಬಿಕೆ ಇದ್ದರೆ ವಿರೋಧ ಪಕ್ಷದ ನಾಯಕರಿಗೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ತಮಗೆ ಯಾವ ಸೌಲಭ್ಯ ಇವೆಯೋ ಅದೇ ಮಟ್ಟದಲ್ಲಿ ಅವುಗಳನ್ನು ಇವರಿಗೂ ಒದಗಿಸಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ವಿರೋಧಪಕ್ಷದ ನಾಯಕರ ಸ್ಥಾನ, ಹಾಸನ ಜಿಲ್ಲೆಗೆ ಹೋಗುತ್ತದಲ್ಲಾ ?

ಶ್ರೀ ಸಿ. ಬೈರೇಗೌಡ.—ಈ ವಿಚಾರದಲ್ಲಿ ಜಿಲ್ಲೆಯ ಪ್ರಶ್ನೆ ಬರುವುದಿಲ್ಲ. ಒಟ್ಟಿನಲ್ಲಿ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಯಾವ ಸೌಲಭ್ಯಗಳು ಇವೆಯೋ ಅದೇ ಮಟ್ಟದಲ್ಲಿ ಆ ಸೌಲಭ್ಯಗಳು ಇವರಿಗೂ ದೊರೆಯಬೇಕು ಎನ್ನುವ ಪ್ರಶ್ನೆ ಈಗ ಮುಖ್ಯವಾಗಿ ಎದ್ದಿದೆ. ಈ ಸಂದರ್ಭದಲ್ಲಿ ಮಾನ್ಯ ಕೈಗಾರಿಕಾ ಮಂತ್ರಿಗಳಾದ ಶ್ರೀ ಕೃಷ್ಣ ಅವರ ಬಗ್ಗೆ ಹೇಳಬೇಕಾದರೆ ಅವರು ಮೊದಲು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಲ್ಲಿದ್ದವರು. ಅವರು ಸಮಾಜವಾದದಬಗ್ಗೆ ಹೆಚ್ಚಿನ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಈವೊತ್ತು ನಮ್ಮ ರಾಜ್ಯದ ಇಂಡಸ್ಟ್ರಿಯಲ್‌ಪಾಲಿಸಿ ಯಾವರೀತಿ ಎಂದರೆ ಕಳೆದ 25 ವರ್ಷಗಳಿಂದಲೂ ಇದ್ದ ರೀತಿಯಲ್ಲಿಯೇ ಇದೆ. ಏನೂ ಬದಲಾವಣೆಯಾಗಿಲ್ಲ. ಕಳೆದ 25 ವರ್ಷಗಳಿಂದಲೂ ನಮ್ಮ ದೇಶದಲ್ಲಿರತಕ್ಕಂಥಾ ಗುತ್ತಿಗೆದಾರರು ಬಂಡವಾಳಶಾಹಿಗಳು ಏನು ಇದ್ದಾರೆ ಅವರಿಗೆ ರಕ್ಷಣೆ ಆಗುವ ಸರ್ಕಾರ ಇಲ್ಲಿಯವರೆಗೂ ಇತ್ತು. ಇದರ ಬಗ್ಗೆ ಯಾವ ನೀತಿಯನ್ನೂ ರೂಪಿಸುವುದಕ್ಕಾಗಲಿಲ್ಲ. ಈವೊತ್ತು ಅದೇ ಜಾಗದಲ್ಲಿ ನಮ್ಮ ಕೃಷ್ಣ ಅವರು ಬಂದಿದ್ದಾರೆ. ಇದು ಇನ್ನುಮುಂದೆ ಮುಂದುವರೆದುಕೊಂಡು ಹೋಗಬಾರದ ರೀತಿಯಲ್ಲಿ ಶ್ರೀ ಕೃಷ್ಣ ಅವರು ಇದರ ಬಗ್ಗೆ ಒಂದು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ನಮ್ಮ ದೇಶದಲ್ಲಿರತಕ್ಕಂಥ ಗುತ್ತಿಗೆದಾರರು, ಬಂಡವಾಳಶಾಹಿಗಳು ದೊಡ್ಡ ದೊಡ್ಡ ಬಿಸಿನೆಸ್ ಫರ್ಮ್ ಮಾಡಿ ಬಿಸಿನೆಸ್ ಹೌಸ್ ಅಂತ ಏನು ಇಟ್ಟು ಕೊಂಡಿದ್ದಾರೋ ಅವರಿಗೆ ಯಾವ ವಿಧವಾದಂಥ ಕಾನೂನು ತಂದರೂ ಅವರ ಆಸ್ತಿಯನ್ನು ಮುಟ್ಟುವುದಕ್ಕೆ ಇನ್ನೂವರೆಗೆ ಆಗಲಿಲ್ಲ. ಆದುದರಿಂದ ಈ ಸಮಾಜದಲ್ಲಿ ಜನಗಳಿಗೆ ನಂಬಿಕೆ ಬರಬೇಕಾಗಿದ್ದರೆ ಇನ್ನು 6 ತಿಂಗಳಲ್ಲಿ ಈ ಸಮಾಜವಾದದ ನೀತಿ ಯನ್ನು ಉಪಯೋಗ ಮಾಡಿ ತೋರಿಸಿಕೊಡಬೇಕು. ಹಾಗಾದರೆ ಜನಗಳಿಗೂ ಕೂಡ ಈ ಸಮಾಜ ವಾದದಲ್ಲಿ ನಂಬಿಕೆ ಬರುತ್ತದೆ ಮತ್ತು ನನಗೂ ಕೂಡ ನಂಬಿಕೆ ಬರುತ್ತದೆ. ಈವೊತ್ತಿನ ದಿವಸ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳದೆ ಅವರು ಇದೇ ರೀತಿ ಮುಂದುವರೆಯುವುದಾದರೆ ನೀವು ಹೇಗೆ ಸಮಾಜವಾದವನ್ನು ಜಾರಿಗೆ ತರುತ್ತೀರಿ ಎನ್ನುವ ವಿಷಯದಲ್ಲಿ ಶ್ರೀ ಕೃಷ್ಣ ಅವರ ಬಗ್ಗೆ ಸಂಶಯ ಬರುತ್ತದೆ. ಆದುದರಿಂದ ಸಮಾಜವಾದದ ರೀತಿಯಲ್ಲಿ ಎಲ್ಲರನೂ ಸಮನಾದ ರೀತಿಯಲ್ಲಿ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಈವೊತ್ತಿನ ದಿವಸ ಬಂಡವಾಳ ಶಾಹಿಗಳಾಗಿ, ಗುತ್ತಿಗೆದಾರರಾಗಿ, ಅನೇಕ ಕಂಪನಿಗಳನ್ನು ಮಾಡಿ ಕೊಂಡು ಏನು ಇದ್ದಾರೋ ಅವನ್ನೆಲ್ಲಾ ರಾಷ್ಟ್ರೀಕರಣ ಮಾಡಿ ಈ ಸಮಾಜವಾದವನ್ನು ದೇಶಾದ್ಯಂತ ಸಾಧನೆ ಮಾಡಬೇಕು. ಇದರ ಬಗ್ಗೆ ಶ್ರೀ ಕೃಷ್ಣ ಅವರು ಪ್ರಯತ್ನ ಪಟ್ಟು ತೋರಿಸಿಕೊಡಬೇಕು ಎಂದು ವಿನಂತಿ ಮಾಡುತ್ತೇನೆ.

ಇನ್ನು ಸಣ್ಣ ಕಾರಿನ ಯೋಜನೆ ಬಗ್ಗೆ ಹೇಳುವುದಾದರೆ ಈ ಯೋಜನೆಯನ್ನು ಕೇಂದ್ರ ಸರ್ಕಾರ ನಮ್ಮ ಮೈಸೂರು ರಾಜ್ಯಕ್ಕೆ ಕೊಡಬೇಕು ಎಂದು ಇತ್ತು. ಆದರೆ ಹಿಂದೆ ಇದ್ದ ಸರ್ಕಾರ ಪ್ರಗತಿ ಗಾಮಿ ವಿರೋಧಿಗಳಾಗಿದ್ದುದರಿಂದ ಇದುವರೆಗೆ ಆ ಯೋಜನೆ ಬಗ್ಗೆ ಏನು ಮಾಡಿದರೋ ಏನೋ ಎನ್ನುವುದು ಗೊತ್ತಿಲ್ಲ.

ಹಾಸನದಲ್ಲಿರುವ ಇಂಪ್ಲಿಮೆಂಟ್ಸ್ ಫ್ಯಾಕ್ಟರಿಯಲ್ಲಿ ಸಣ್ಣ ಟ್ರಾಕ್ಟರು ತಯಾರು ಮಾಡುವ ಯೋಚನೆ ಇತ್ತು. ಈ ಹೊತ್ತು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ನಷ್ಟದಲ್ಲಿ ನಡೆಯುತ್ತಿದೆ ಎಂದು ತಿಳಿದು ಬಂದಿದೆ. ಸಣ್ಣ ಟ್ರಾಕ್ಟರ್ ಉತ್ಪಾದನೆ ಮಾಡತಕ್ಕ ಕೆಲಸವನ್ನು ಇದಕ್ಕೆ ವಹಿಸಿದ್ದರೆ ಬಹಳ ಅನುಕೂಲವಾಗುತ್ತಿತ್ತು.

(ಶ್ರೀ ಸಿ. ಬೈರೇಗೌಡ)

ಕೋಲಾರ ಜಿಲ್ಲೆಯ ವಿಷಯವನ್ನು ಹೇಳಬೇಕು ಎಂದರೆ ದೇಶಕ್ಕೆ ಮತ್ತು ರಾಷ್ಟ್ರಕ್ಕೆ ಮುಖ್ಯವಾಗಿರತಕ್ಕ ಮತ್ತು ಹೊರದೇಶಗಳಿಗೆ ರೇಷ್ಮೆ ಬಟ್ಟೆಯನ್ನು ತಯಾರುಮಾಡಿ ಕಳುಹಿಸಿ ವಿದೇಶಿ ವಿನಿಮಯವನ್ನು ಸಂಪಾದನೆ ಮಾಡುತ್ತಿರುವಂಥ ಕೈಗಾರಿಕೆ ಎಂದರೆ ರೇಷ್ಮೆ ಕೈಗಾರಿಕೆ. ಕೋಲಾರ, ಬೆಂಗಳೂರು, ತುಮಕೂರಿನ ಕೆಲವು ಭಾಗಗಳು, ಮೈಸೂರು ಜಿಲ್ಲೆ, ಮಂಡ್ಯಜಿಲ್ಲೆಯ ಕೆಲವು ಭಾಗಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯ ಜನರ, ಮಧ್ಯಮವರ್ಗದ ಜನರ, ಇನ್ನೂ ಕೆಳಮಟ್ಟದಲ್ಲಿರುವ ಕೂಲಿಗಾರರ ಕಸಬಾಗಿದೆ, ಈ ರೇಷ್ಮೆ ಕೈಗಾರಿಕೆ. ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಮಾಡಿ ನಮ್ಮ ದೇಶದಲ್ಲಿರತಕ್ಕ ಪ್ರತಿಯೊಬ್ಬರಿಗೂ ಉದ್ಯೋಗವನ್ನು ಒದಗಿಸುವುದಕ್ಕೆ ಅವಕಾಶವಿದೆ. ಕೋಲಾರ ಜಿಲ್ಲೆಯಲ್ಲಿ ರೇಷ್ಮೆ ಕಡ್ಡಿ ಬೆಳೆ ಹೆಚ್ಚು ಪ್ರದೇಶದಲ್ಲಿ ಆಗುತ್ತಿದೆ. ಅಲ್ಲಿಗೆ ಒಂದು ಸಿಲ್ಕ್ ಫಿಲೇಚರ್ ಕಾರ್ಖಾನೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದರೂ ಕೂಡ ಇಲ್ಲಿಯವರೆಗೂ ಅದಕ್ಕೆ ಮನ್ನಣೆ ಮಾಡಿಲ್ಲ. ಈಗಲಾದರೂ ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇಷ್ಟು ಮಾತುಗಳನ್ನು ಹೇಳಿ, ಅಧ್ಯಕ್ಷರು ಹೆಚ್ಚು ಕಾಲಾವಕಾಶವಿಲ್ಲವೆಂದು ಹೇಳುತ್ತಿರುವುದರಿಂದ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).---ಮಾನ್ಯ ಅಧ್ಯಕ್ಷರೇ, ವಂದನಾರ್ಪಣೆ ಕಾರ್ಯವನ್ನು ನನಗೆ ಕೊಟ್ಟಿರುವುದರಿಂದ ನಾನು ಬಹಳ ಸಂತೋಷಪಡುತ್ತೇನೆ. ಈ ಹೊತ್ತು ಮಾನ್ಯ ಕೈಗಾರಿಕಾ ಮಂತ್ರಿಗಳು ತಂದಿರತಕ್ಕ ಬೇಡಿಕೆಗಳನ್ನು ಒಪ್ಪಬೇಕೋ ಬಿಡಬೇಕೋ ಎನ್ನುವ ವಿಚಾರದಲ್ಲಿ ಬಹಳ ಸಂಶಯವಾಗಿದೆ. ಆದರೂ ಕೆಲವು ವಿಷಯಗಳನ್ನು ಹೇಳಬೇಕಾಗಿದೆ.

ಮೈಸೂರು ರಾಜ್ಯದ ಚಲನ ಚಿತ್ರೋದ್ಯಮ ಅಭಿವೃದ್ಧಿ ನಿಗಮ, ಇದಕ್ಕೆ 10 ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಒದಗಿಸಿದ್ದಾರೆ. ಮೈಸೂರು ಸ್ಟೇಟ್ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳುವುದಕ್ಕೆ ಮೊದಲು ಒಂದು ವಿಷಯ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಖಾಸಗಿಯವರು ನಡೆಸುತ್ತಿರುವ ಪ್ರೀಮಿಯರ್ ಸ್ಟುಡಿಯೋ, ಕಂಠೀರವ ಸ್ಟುಡಿಯೋ, ಅಭಿಮಾನ್ ಸ್ಟುಡಿಯೋ ಮತ್ತು ಇನ್ನೊಂದು ಸ್ಟುಡಿಯೋ ಹೀಗೆ ಒಟ್ಟು ನಾಲ್ಕು ಸ್ಟುಡಿಯೋಗಳು ನಮ್ಮ ರಾಜ್ಯದಲ್ಲಿವೆ. ಕಂಠೀರವ ಸ್ಟುಡಿಯೋಗೆ 12 ಲಕ್ಷ ರೂಪಾಯಿ ಸರ್ಕಾರ ಸಾಲವಾಗಿ ಕೊಟ್ಟಿದೆ, ಷೇರು ಬಂಡವಾಳವಾಗಿ 5 ಲಕ್ಷ ರೂಪಾಯಿ ಕೊಟ್ಟಿದೆ. ಒಟ್ಟು 17 ಲಕ್ಷ ರೂಪಾಯಿ ಕೊಟ್ಟಿದೆ. ಅಭಿಮಾನ್ ಸ್ಟುಡಿಯೋಗೆ ಐದು ಲಕ್ಷ ರೂಪಾಯಿ ಕೊಟ್ಟಿದೆ. ಮೈಸೂರಿನಲ್ಲಿರುವ ಪ್ರೀಮಿಯರ್ ಸ್ಟುಡಿಯೋಗೆ ಏನೂ ದುಡ್ಡು ಕೊಟ್ಟಿಲ್ಲ. ನಮ್ಮಲ್ಲಿ ಈ ಹೊತ್ತು ವರ್ಷಕ್ಕೆ 40 ಕನ್ನಡ ಚಿತ್ರಗಳು ತಯಾರಾಗರೆ ಸಾಕು. ಈಗ ಇರುವ ನಾಲ್ಕು ಸ್ಟುಡಿಯೋಗಳಲ್ಲಿ ಚಲನಚಿತ್ರ ತೆಗೆಯುವ ಜನರು ಬರುವುದೇ ಕಷ್ಟವಾಗಿದೆ. ಅಲ್ಲದೆ ತಯಾರಾಗಿರುವ ಚಿತ್ರಗಳನ್ನು ಪ್ರದರ್ಶನ ಮಾಡುವುದಕ್ಕೆ ಥಿಯೇಟರುಗಳ ತೊಂದರೆ ಇದೆ. ಅಂಥದ್ದರಲ್ಲಿ ಸರ್ಕಾರದವರು 300 ಎಕರೆ ಜಾಗವನ್ನು ಕೊಟ್ಟು ಚಲನ ಚಿತ್ರದ್ಯೋಮಕ್ಕಾಗಿ ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿ ಆದಕ್ಕೆ ಈಗಾಗಲೇ ಐದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಮತ್ತೆ ಈಗಿನ ಬಜೆಟ್ಟಿನಲ್ಲಿ 10 ಲ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರ ಮ್ಯಾನೇಜಿಂಗ್ ಡೈರೆಕ್ಟರ್, ಬಹುಶಃ ನಾನು ಹಿಂದೆ ಈ ಸಭೆಗೆ ಹೇಳಿದೆ, ಅವರಿಗೆ ಚಲನಚಿತ್ರದ ಬಗ್ಗೆ ಸ್ವಲ್ಪವೂ ಗಂಧವಿಲ್ಲ. ಅವರು ಚಲನಚಿತ್ರಗಳನ್ನು ನೋಡಿರಬಹುದು. ಈ ಮ್ಯಾನೇಂಜಿಗ್ ಡೈರೆಕ್ಟರವರಿಗೆ ಯಾವ ವಿಧವಾದ ತಜ್ಞತೆ ಇಲ್ಲ, ಚಲನಚಿತ್ರದ ಬಗ್ಗೆ ಆಳವಾದ ಅಭ್ಯಾಸವಿಲ್ಲ. ಅಂಥವರಿಗೆ ತಮ್ಮ ಸ್ವಾರ್ಥಕ್ಕೋಸ್ಕರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಅವರನ್ನು ಇಟ್ಟುಕೊಂಡಿದ್ದಾರೆ. ನಿಮಗೆ ಆ ಚಾಳಿ ಏಕೆ ಬಂತು ಎಂದು ಕೇಳುತ್ತಿದ್ದೇನೆ. ಮುಖ್ಯ ಮುಖ್ಯ ಮಂತ್ರಿಗಳು ಏನು ಕಾರಣದಿಂದ ಇಟ್ಟುಕೊಂಡಿದ್ದಾರೆಯೋ ಗೊತ್ತಿಲ್ಲ. ಸರ್ಕಾರದಲ್ಲಿ ಈ ಹೊತ್ತು ಅವರು ಮಾನ್ಯ ಮುಖ್ಯ ಮಂತ್ರಿಗಳಿಗಿಂತಲೂ ಬಹಳ ದೊಡ್ಡ ಮುಖ್ಯ ಸ್ಥಾನವನ್ನು ಅಲಂಕರಿಸಿದ್ದಾರೆ. ಅಧ್ಯಕ್ಷರೇ, ನನಗನ್ನಿಸುತ್ತದೆ, ನಾನು ವಿರೋಧ ಪಕ್ಷದಲ್ಲಿದ್ದರೂ ಮಂತ್ರಿಯಾಗಬೇಕು ಎಂದು ಅವರನ್ನು ಹೋಗಿ ಕೇಳಿಕೊಂಡರೆ ಏನಾದರೂ ಮಾಡಿ ಮಂತ್ರಿ ಪದವಿ ಕೊಡಿಸತಕ್ಕ ಚಾಕಚಕ್ಯತೆಯನ್ನು ಹೊಂದಿರತಕ್ಕ ಒಬ್ಬ ದೊಡ್ಡ ಪ್ರಭಾವಶಾಲಿಯಾಗಿದ್ದಾರೆ. ಅವರ ಬಗ್ಗೆ ಅನೇಕವಿಧವಾಗಿ ಹೇಳಿದ್ದರೂ, ಪ್ರತಿಭಟನೆಗಳು ಬಂದಿದ್ದರೂ ಅವರನ್ನು ಅಲ್ಲೇ ಇಟ್ಟುಕೊಂಡಿರುವುದಕ್ಕೆ ಇರತಕ್ಕ ಪ್ರಬಲವಾದ ಕಾರಣಗಳಾದರೂ ಏನು ? ಫಿಲಂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗಾಗಿ ಖರ್ಚು ಮಾಡತಕ್ಕ 10 ಲಕ್ಷ ರೂಪಾಯಿ ಸಂಪೂರ್ಣವಾಗಿ ಫಲಪ್ರದವಾಗುವುದಿಲ್ಲ. ಇದು ಐದು ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇದೆ. ನಾನು ಆಗಲೇ ಹೇಳಿದಂತೆ ನಮ್ಮಲ್ಲಿ ನಾಲ್ಕು

ಸ್ಟುಡಿಯೋಗಳಿವೆ. ಸರ್ಕಾರದವರು ಅವುಗಳಿಗೆ ಲಕ್ಷಾಂತರ ರೂಪಾಯಿ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಈ ಯೋಜನೆಯನ್ನು ರದ್ದು ಮಾಡಿ, ಈಗ ಇರುವ ಮ್ಯಾನೇಜಿಂಗ್ ಡೈರೆಕ್ಟರನ್ನು ತೆಗೆದು ಹಾಕಬೇಕು ಎಂದು ತಮಗೆ ಹೇಳುತ್ತಿದ್ದೇನೆ. ಹಾಗೆ ಮಾಡಲು ತಮಗೆ ಅವಕಾಶವಿಲ್ಲ ವೆಂದು ಸಹ ಹೇಳುತ್ತೇನೆ.

ಈ ಹೊತ್ತು ನಮ್ಮಲ್ಲಿ ಪಬ್ಲಿಕ್ ಸೆಕ್ಟಾರ್ ಇಂಡಸ್ಟ್ರೀಸ್ ಬೆಳೆಯಬೇಕು ಎಂದು ಹೇಳುತ್ತೇವೆ. ಬೆಂಗಳೂರಿನಲ್ಲಿ ರೆಂಕೋ ಕಾರ್ಖಾನೆ ಇದೆ. ರಾಜ್ಯ ಸರ್ಕಾರದ ಸಹಾಯದಿಂದ ನಡೆಸುತ್ತಿರುವ ಕಾರ್ಖಾನೆ ಅದು. ಅಲ್ಲಿರುವ ಒಬ್ಬ ಅಕೌಂಟ್ಸ್ ಆಫೀಸರಿಗೆ 1100 ರೂಪಾಯಿ ಸಂಬಳ, ಒಬ್ಬ ಪರ್ಚೇಸ್ ಆಫೀಸರಿಗೆ 2500 ರೂಪಾಯಿ ಸಂಬಳ. ಇವರಿಗೆ 10 ಸಾವಿರ ರೂಪಾಯಿ ಕಾರ್ ಅಲೋಯನ್ಸ್ ಬೇರೆ ಕೊಟ್ಟಿದ್ದಾರೆ ಪರ್ಚೇಸ್ ಆಫೀಸರಾದವರು ಯಾರು ಎಂದರೆ ನಮ್ಮ ರಾಜ್ಯದ ವಿದ್ಯಾ ಸಚಿವರ ಹತ್ತಿರ ಸಂಬಂಧಿ. ಅಲ್ಲಿರುವ ಮ್ಯಾನೇಜಿಂಗ್ ಡೈರೆಕ್ಟರ್ ಅವರು ಹಿಂದೆ ಇಲ್ಲಿ ರಾಜ್ಯಪಾಲರಾಗಿದ್ದವರ ಹತ್ತಿರ ಸಂಬಂಧಿ. ಆರು ತಿಂಗಳಿನಿಂದ ಈ ಕೈಗಾರಿಕೆ ಕೆಲಸ ಮಾಡದೆ ಇದೆ. ಅಲ್ಲಿ ಸುಮಾರು 150 ಜನ ಇಂಜನಿಯರುಗಳಿದ್ದಾರೆ. ಅವರೆಲ್ಲ ಯಾರು ಎಂದರೆ ಮಂತ್ರಿಗಳ ಪ್ರಭಾವದಿಂದ, ನಿಮ್ಮ ಪಾರ್ಟಿಯವರ ಪ್ರಭಾವದಿಂದ ಮತ್ತು ಹಿಂದೆ ಇದ್ದಂಥ ರಾಜ್ಯಪಾಲರ ಪ್ರಭಾವದಿಂದ ಸೇರಿದವರು. ಸುಮಾರು ಎರಡು ಸಾವಿರ ಜನ ಕಾರ್ಮಿಕರು ಅಲ್ಲಿದ್ದಾರೆ. ಆರು ತಿಂಗಳಿನಿಂದ ಈ ಹೊತ್ತಿನವರೆಗೂ ಅಲ್ಲಿ ಕೆಲಸ ನಡೆಯುತ್ತಿಲ್ಲ, ಸಂಬಳ ಮಾತ್ರ ಕೊಡುತ್ತಿದ್ದಾರೆ. ಕಾರಣ ಇದನ್ನೆಲ್ಲ ತಾವು ಪರಿಶೀಲನೆ ಮಾಡಬೇಕು. ಕೆಲಸವಿಲ್ಲದೆ ನಡೆದಿರತಕ್ಕ ಈ ಕಾರ್ಖಾನೆ ಯನ್ನು ಮುಂದುವರಿಸುವುದರಲ್ಲಿ ಈ ಅಧಿಕಾರಿಗಳ ಕೈವಾಡ ಬಹಳವಿದೆ. ಇಂಥ ಅಧಿಕಾರಿಗಳನ್ನು ತೆಗೆದು ಹಾಕಿ ಹೆಚ್ಚು ರೀತಿಯಲ್ಲಿ ಸಾಮಾನ್ಯ ನೌಕರರನ್ನು, ನಾಲ್ಕನೇ ದರ್ಜೆ ನೌಕರರನ್ನು ನೇಮಿಸಿ ಕೊಂಡು ಪ್ರೊಡಕ್ಷನ್ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅಲ್ಲಿ ಮ್ಯಾನೇಂಜಿಗ್ ಡೈರೆಕ್ಟ ರಾಗಿರುವವರು ಅಲ್ಲಿ ರಾಜಕೀಯವನ್ನು ತಂದೊಡ್ಡಿ, ಒಂದು ದರ್ಪವನ್ನು ನಡೆಸಿಕೊಂಡು ಅಲ್ಲಿ ಕುಳಿತಿದ್ದಾರೆ. ಅವರ ಚರಿತ್ರೆಯನ್ನು ಹೇಳುವುದಕ್ಕೆ ಹೋದರೆ ಬಹಳ ಅಶ್ಲೀಲವಾಗುತ್ತದೆ. ಆದ್ದರಿಂದ ಅದನ್ನೆಲ್ಲ ಹೇಳುವುದಕ್ಕೆ ಹೋಗುವುದಿಲ್ಲ. ಆದುದರಿಂದ ನಾನು ತಮಗೆ ಕೈ ಮುಗಿದು ಪ್ರಾರ್ಥನೆ ಮಾಡುವುದೇನೆಂದರೆ, ರೆಂಕೊ ಕಾರ್ಖಾನೆಯನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಅಲ್ಲಿ ತಯಾರಾದ ಮೀಟರುಗಳನ್ನು ರಾಜ್ಯದ ಎಲೆಕ್ಟ್ರಿಸಿಟಿ ಬೋರ್ಡ್ ಮತ್ತು ಮಿಕ್ಕ ಬೇರೆ ಬೇರೆ ಜನ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬಹುದು. ಇದರಲ್ಲಿ ಒಂದು ರಾಜಕೀಯವಾಗಿದೆ.

7-30 P.M.

ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ರಾಜಕೀಯ ಮತ್ತು ಇನ್ನೊಂದು ಕಾರ್ಖಾನೆಯಲ್ಲಿ ರಾಜಕೀಯ ಮಾಡುತ್ತಿರುವುದು ನನಗೆ ತಿಳಿದಿದೆ. ಈ ರೆಂಕೋ ಕಾರ್ಖಾನೆಯನ್ನು ಬಿರ್ಲಾರವರಿಗೆ ಮಾರು ತ್ತಾರೆಂದೂ ಕೇಳಿದ್ದೆ. ಬಿರ್ಲಾರವರು ಎಲ್ಲ ಕಡೆಗಳಲ್ಲೂ ಇರುವ ಪಬ್ಲಿಕ್ ಸೆಕ್ಟರು ಕಂಪನಿಯನ್ನು ಹಾಳುಮಾಡುತ್ತಿದ್ದಾರೆ ಮತ್ತು ಸರಕಾರದಿಂದ ಕೈಗಾರಿಕೆಗಳನ್ನು ತೆಗೆದುಕೊಳ್ಳುವಾಗ ಬಹಳ ಕಡಿಮೆ ರೇಟು ಕೊಟ್ಟು ಕೊಂಡುಕೊಳ್ಳುತ್ತಾರೆ, ಆ ನಂತರ ಅದನ್ನು ಹಾಳುಮಾಡುತ್ತಾರೆ. ನಮ್ಮ ಸಮಾಜವಾದೀ ಮಂತ್ರಿಗಳು ಯಾವ ಕಾಲಕ್ಕೂ ನಮ್ಮ ರಾಜ್ಯದ ಕೈಗಾರಿಕೆಗಳನ್ನು ಬಿರ್ಲಾರವರಿಗೆ ವಹಿಸಬಾರದು ಎನ್ನುವ ಮಾತನ್ನು ನಾನು ಇಲ್ಲಿ ಒತ್ತಾಯವಾಗಿ ಹೇಳುತ್ತೇನೆ, ಇನ್ನು ನಮ್ಮ ಕೈಗಾರಿಕಾ ಮಂತ್ರಿಗಳು ರಾಜ್ಯಕ್ಕೆ ಬಂದ ಮೇಲೆ ನಮ್ಮ ರಾಜ್ಯದ ಮಂಡ್ಯದಲ್ಲಿರುವ ಸಕ್ಕರೆ ಕಾರ್ಖಾನೆಯ ಚೇರ್ಮನ್ನರವರಿಗೆ ಕೊಡುತ್ತಿದ್ದ ಸಂಭಾವನೆಯನ್ನು 500 ರೂಪಾಯಿಗಳಿಂದ 1,500 ರೂಪಾಯಿಗಳಷ್ಟು ಸಂಬಳ ಕೊಡುವಂತೆ ಮಾಡಿದ್ದಾರೆ. ಇದು ಸಮಾಜವಾದ ಮಾಡು ತ್ತೇವೆಂದು ಹೇಳುವ ಮಂತ್ರಿಗಳು ಮಾಡಿರುವ ಮೊದಲ ಸಮಾಜವಾದಿಯ ಮಾದರಿ. ಇದು ಕೂಡ ಒಂದು ಸಂತೋಷದ ಸುದ್ದಿ. ಸಮಾಜವಾದದ ರೇಟು 500 ರೂಪಾಯಿಗಳಿಂದ 1,500 ರೂಪಾಯಿ ಗಳವರೆಗೆ ಏರಿದೆ. ಅದು ತುಂಬಾ ಸಂತೋಷ.

ಇನ್ನು ಮೈಸೂರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳುವು ದಾದರೆ ನಾನು ತಿಳಿದುಕೊಂಡಿರುವ ಮಟ್ಟಿಗೆ ಇದು ಸ್ವಲ್ಪ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದೆ ಮತ್ತು ಇಲ್ಲಿರುವ ಚೇರ್ಮನ್ನರವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ನಾನು ತಿಳಿದು ಕೊಂಡಿದ್ದೇನೆ. ಆದರೂ ಕೂಡ ಇಲ್ಲೂ ಕೂಡ ಕೆಲವು ಆಪಾದನೆಗಳು ಬಂದಿವೆ ಎಂದು ಕೇಳುತ್ತೇನೆ. ಈ ಕಾರ್ಪೊರೇಷನ್‌ನ್ನು ಒಂದು ಒಳ್ಳೆಯ ಉದ್ದೇಶದಿಂದ ಮಾಡಿದ್ದಾರೆ. ಇದಕ್ಕೆ ಸರಿಯಾದ ಪ್ರೋತ್ಸಾಹವನ್ನು ಸರಕಾರ ಕೊಡಬೇಕು.

(ಶ್ರೀ ವಾಟಾಳ್ ನಾಗರಾಜ್)

ಕೊನೆಯದಾಗಿ ಇಷ್ಟು ದಿವಸ ಇಲ್ಲಿ ಭದ್ರಾವತಿ ಪ್ರಕರಣದ ಬಗ್ಗೆ ಇಡೀ ರಾಜ್ಯದ ಒಳಗೆ ಹಾಗೂ ಹೊರಗಡೆ ಬೇಕಾದಷ್ಟು ಲೋಪದೋಷಗಳು ಬಂದಿರುವುದನ್ನು ಇಲ್ಲಿ ಸರಕಾರದ ಗಮನಕ್ಕೆ ತರಲಾಗಿದೆ ಮತ್ತು ಇದರ ಬಗ್ಗೆ ಎಸ್ಟಿಮೇಟ್ಸ್ ಕಮಿಟಿಯವರ ರಿಪೋರ್ಟ್‌ನಲ್ಲೂ ಬಂದಿದೆ. ಇಷ್ಟೆಲ್ಲಾ ಹಗರಣಗಳು ಬಂದಿದ್ದರೂ ಇದರ ಬಗ್ಗೆ ಸರಕಾರ ಸರಿಯಾಗಿ ವಿಚಾರಣೆ ನಡೆಸಲು ಹಿಂದು ಮುಂದು ನೋಡುತ್ತಿದೆ. ನಮ್ಮ ಸರಕಾರದಲ್ಲಿ ಧೈರ್ಯ ಇದ್ದರೆ ಮತ್ತು ಎದೆಗಾರಿಕೆ ಇದ್ದರೆ ಇದರ ಬಗ್ಗೆ ಸಮಗ್ರವಾದ ಒಂದು ವಿಚಾರಣೆಯನ್ನು ನಡಸಲೇಬೇಕು. ಇಲ್ಲಿ ಲಕ್ಷಾಂತರ ರೂಪಾಯಿಗಳಷ್ಟು ಲೂಟಿ ನಡೆದಿದೆ. ಇಲ್ಲಿ ಆಗಿರತಕ್ಕ ಪ್ರಕರಣ ನಮ್ಮ ಇಡೀ ರಾಜ್ಯದಲ್ಲಿ ಎಲ್ಲೂ ನಡೆದಿರಲಿಲ್ಲ. ಹಿಂದೆ ರಾಜ್ಯಪಾಲರ ಆಡಳಿತ ಇದ್ದಾಗ ಆಗಿದ್ದ ರಾಜ್ಯಪಾಲರಿಗೆ ಇದರ ಬಗ್ಗೆ ದೂರುಗಳು ಬಂದಾಗ ಅವರು ಕೂಡ ಒಂದು ತನಿಖೆ ಮಾಡುತ್ತೇವೆ ಎಂದು ಒಂದು ವಿಚಾರಣೆ ಸಮಿತಿ ಮಾಡಿದರು. ಅವರು ಕೊಟ್ಟ ವರದಿ ಏನಾಯಿತು ಎನ್ನುವುದು ಇದುವರೆಗೂ ತಿಳಿಯಲಿಲ್ಲ ಇದರ ಬಗ್ಗೆ ಅನೇಕ ಅವ್ಯವಹಾರಗಳು ಆಗಿವೆ ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ. ಈಗ ಲಾದರೂ ನಮ್ಮ ಕೈಗಾರಿಕೆ ಮಂತ್ರಿಗಳಿಗೆ ಧೈರ್ಯ ಇದ್ದರೆ ಹಾಗೂ ಎದೆಗಾರಿಕೆ ಇದ್ದರೆ ಇಲ್ಲಿನ ಹಗರಣವನ್ನು ಮತ್ತೆ ತೆಗೆದು ಸಾರ್ವಜನಿಕರ ಮುಂದೆ ಇಲ್ಲಿರುವ ಎಲ್ಲ ಲೋಪ ದೋಷಗಳನ್ನು ಎತ್ತಿ ತಿಳಿಸಬೇಕಾದುದು ಅವರ ಕರ್ತವ್ಯ. ಇದರಲ್ಲಿ ಯಾವ ದೊಡ್ಡ ಅಧಿಕಾರಿಗಳೇ ಇರಲಿ ಇಲ್ಲವೇ ದೊಡ್ಡ ರಾಜಕಾರಣಿಗಳೇ ಇರಲಿ ಅದರಲ್ಲಿ ತಪ್ಪು ಮಾಡಿದ್ದರೆ ಅಂತಹವರಿಗೆ ಶಿಕ್ಷೆಯಾಗಲೇಬೇಕು. ಇದರಕಡೆಗೆ ತೀವ್ರವಾಗಿ ಸರಕಾರ ಗಮನ ಕೊಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಭೆ ಈಗ ಎದ್ದು ಮತ್ತೆ ನಾಳೆ ಬೆಳಿಗ್ಗೆ 9 ಗಂಟೆಗೆ ಸಮಾವೇಶಗೊಳ್ಳುತ್ತದೆ.

The House adjourned at Thirty Minutes past Seven of the Clock to meet again at Nine of the clock on Saturday the 15th July 1972.

WD 18223—GPB—550—20-1-1973